ಭಾರತದ
ಅಗ್ರೇಸರ ಮಹಿಳೆ.

ಪಂಡಿತಾ
ರಮಾಬಾಯಿ

ಲೇಖಕ ಮತ್ತು ಪ್ರಕಾಶಕ:
ಎಮ್. ಲಕ್ಷ್ಮಣ ಹರಿಹರ ಜೋಶಿ,
ಪೋಸ್ಟ್: ಮಾಳ—ಕಾರ್ಕಳ, ದ. ಕನ್ನಡ

★

ಬೆಲೆ: ೧.೨೫

ಭಾರತದ ಅಗ್ರೇಸರ ಮಹಿಳೆ

ಪಂಡಿತಾ ರಮಾಬಾಯಿ

ಲೇಖಕ:

ಎಮ್. ಲಕ್ಷ್ಮಣ ಹರಿಹರ ಜೋಶಿ,
ಮಾಳ.

೧೯೬೪

ಅರ್ಪಣ ಪತ್ರಿಕೆ

ಭಾರತದ ಅಗ್ರೇಸರ ಮಹಿಳೆ

ಪಂಡಿತಾ ರಮಾಬಾಯಿ ಸರಸ್ವತಿ

★

ದಿವಂಗತ ಪಾದೂರು ವಾಸುದೇವ ಉಪಾಧ್ಯಾಯ,

ಬಿ. ಎ., ಎಲ್‌ಎಲ್. ಬಿ., ವಕೀಲ, ಕಾರ್ಕಳ

ಇವರ ದಿವ್ಯ ಸ್ಮರಣೆಯಿಂದ

ಅವರಲ್ಲಿದ್ದ

ಅಸಾಧಾರಣವಾದ ಬುದ್ಧಿಚಾತುರ್ಯ,
ಉಜ್ವಲವಾದ ದೇಶಾಭಿಮಾನ, ನಿಷ್ಕಪಟವಾದ ನ್ಯಾಯ ಸೇವೆ,
ನವವಿಚಾರಗಳ ಸಾಹಿತ್ಯ ನಿರ್ಮಾಣ, ಸ್ವಜನ ವಾತ್ಸಲ್ಯ,
ಕಷ್ಟಸಹಿಷ್ಣುತೆ, ಸುಧಾರಣಾಪ್ರಿಯತೆ ಇತ್ಯಾದಿ ದಿವ್ಯಗುಣಗಳ
ನೆನಪಿಗಾಗಿ ಅವರಿಗೆ ಈ ನನ್ನ ಪುಸ್ತಕವನ್ನು ಸಮರ್ಪಿಸುತ್ತೇನೆ.

ಎಮ್. ಲಕ್ಷ್ಮಣ ಹರಿಹರ ಜೋಶಿ.

ಮುನ್ನುಡಿ

ಜನತಾ ಸೇವೆಯನ್ನು ಮಾಡಿದ ವೀರ ಮಹಿಳೆಯರಲ್ಲಿ ಪಂಡಿತಾ ರಮಾಬಾಯಿ ಒಬ್ಬಳಾಗಿದ್ದಾಳೆ. ಅವಳ ಕಾರ್ಯ ತತ್ಪರತೆ, ನಯವಿನಯಾದಿ ಸದ್ಗುಣಗಳು ಎಲ್ಲಾ ಜನರ ಮೆಚ್ಚುಗೆಗೆ ಪಾತ್ರವಾಗಿವೆ. ಅವಳು ಮಾಡಿದ ಪರೋಪಕಾರ ಕೆಲಸಗಳು ಅನೇಕವಾಗಿವೆ. ಅನಾಥ ಸ್ತ್ರೀಯರ ಉದ್ಧಾರಕ್ಕಾಗಿ ಬದ್ಧಕಂಕಣಳಾದ ಆ ಆದರ್ಶ ಸ್ತ್ರೀಯು ಇಂಗ್ಲೆಂಡ್, ಅಮೇರಿಕಾ, ಜಪಾನು ಮೊದಲಾದ ಪರದೇಶಗಳಲ್ಲಿ ಸಂಚರಿಸಿ, ಸಹಾಯಧನವನ್ನು ಪಡೆದು ನಿಸ್ವಾರ್ಥ ಬುದ್ಧಿಯಿಂದ ತನ್ನ ಉದ್ದೇಶವನ್ನು ನೆರವೇರಿಸಿ ಜೀವನವನ್ನು ಸಾರ್ಥಕಗೊಳಿಸಿದಳು; ಆಚಂದ್ರಾರ್ಕ ಕೀರ್ತಿಯನ್ನು ಪಡೆದಳು; ಸಕಲರಿಗೂ ಮಾರ್ಗದರ್ಶಕಳಾದಳು. ವಿಕ್ಟೋರಿಯಾ ಮಹಾರಾಣಿ ಕೂಡ ಮುಕ್ತಕಂಠದಿಂದ ಅವಳ ಸೇವಾಬುದ್ಧಿಯನ್ನು ಪ್ರಶಂಸಿಸಿದಳು. ಅದಲ್ಲದೆ ಅನೇಕ ಮಹನೀಯರ ಆದರಾಭಿಮಾನಗಳನ್ನು ಪಡೆದು ತನ್ನ ಜನ್ಮಭೂಮಿಯಾದ ಕನ್ನಡ ನಾಡಿನ ಘನತೆಯನ್ನು ಹೆಚ್ಚಿಸಿದಳು.

ಪಂಡಿತಾ ರಮಾಬಾಯಿಯ ವೈಶಿಷ್ಟಪೂರ್ಣ ಕಾರ್ಯಗಳು ಹಲವು—ಸಂಸ್ಕೃತ ವಿದ್ಯಾಭ್ಯಾಸ, ದೀನಸೇವೆ, ಕಷ್ಟಸಹಿಷ್ಣುತೆ, ಅನಾಥ ವಿಧವೆಯರ ಉದ್ಧಾರ, ಹೆಂಗಸರ ಆಸ್ಪತ್ರೆ, ಅನಾಥಾಶ್ರಮ, ಅಂಧಶಾಲೆ, ಮೊದಲಾದವುಗಳು ಅವಳ ಸಫಲ ಕಾರ್ಯಗಳು. ಅಂಧಾಚಾರದ ಜನರು ಕೆಲವರು ಅವಳ ಕೆಲವು ಕೆಲಸಗಳನ್ನು ಮೊದಲು ದೂಷಿಸುತ್ತಿದ್ದರು. ಸತ್ಯ ಜ್ಞಾನದ ಅರಿವಾದ ನಂತರ ಅವರೆಲ್ಲರೂ ಅವಳನ್ನು—ಅವಳ ಕೆಲಸಗಳನ್ನು ಮನಃಪೂರ್ವಕವಾಗಿ ಆದರಿಸತೊಡಗಿದರು.

ಸ್ತ್ರೀ ಸಮುದಾಯಕ್ಕೆ ಶಿರೋರತ್ನದಂತಿರುವ ಪಂಡಿತಾ ರಮಾಬಾಯಿಯ ಜೀವನ ಚರಿತ್ರೆಯನ್ನು ಬರೆದು ಪ್ರಕಟಿಸಿದ ಮಿತ್ರವರ್ಯರಾದ ಎಮ್. ಲಕ್ಷ್ಮಣ ಹರಿಹರ ಜೋಶಿಯವರ ಈ ಪ್ರಯತ್ನವು ಸ್ತುತ್ಯವಾಗಿದೆ. ಹೀಗಿರುವ ಅನೇಕ ಕೃತಿಗಳನ್ನು ಅವರು ರಚಿಸಲಿ! ಕನ್ನಡಿಗರೆಲ್ಲರ ಪ್ರೋತ್ಸಾಹವು ದೊರಕಲಿ ಎಂದು ಹಾರೈಸುವೆನು.

ಸದ್ಬೋಧ ಗ್ರಂಥಮಾಲೆ,
ಮಂಗಳೂರು–6.
20–3–1964

ಇತಿ ಶಂ.

ಅಮ್ಮೆಂಬಳ ಅನಂತಯ್ಯ ನಾವಡ.

ಉಪಕಾರ ಸ್ಮರಣೆ

ಪಂಡಿತಾ ರಮಾಬಾಯಿ ಚರಿತ್ರ ಲೇಖನದ ಹಸ್ತಲಿಖಿತವು ತಯಾರಾಗಿ ಅನೇಕ ದಿನಗಳಾದರೂ ಅದರ ಮುದ್ರಣದ ಯೋಗವು ಈ ವರೆಗೆ ಒದಗಲಿಲ್ಲ. ಆದರೆ ಅನೇಕ ಮಹನೀಯರ ಸಹಕಾರ ಸಹಾನುಭೂತಿಯಿಂದ ಇದರ ಪ್ರಕಾಶನವು ಸುಲಭವಾಯಿತು. ಇವರೆಲ್ಲರ ಸ್ಮರಣೆಯನ್ನು ಮಾಡದಿದ್ದರೆ ನಾನು ಕೃತಾರ್ಥನಾಗಲಾರೆನು. ಪ್ರಥಮವಾಗಿ ಪಂಡಿತಾ ರಮಾಬಾಯಿಯ ಮರಾಠಿ ಚರಿತ್ರ ಲೇಖಕರಾದ ಶ್ರೀ. ದೇವದತ್ತ ನಾರಾಯಣ ಟಿಳಕರು ತನ್ನ ಗ್ರಂಥವನ್ನು ನನ್ನ ಲೇಖನಕ್ಕೆ ಮುಖ್ಯ ಸಹಾಯಗ್ರಂಥವನ್ನಾಗಿ ಉಪಯೋಗಿಸುವರೆ ಅನುಮತಿ ಇತ್ತಿದ್ದಕ್ಕಾಗಿ ನಾನು ಅವರಿಗೆ ಋಣಿಯಾಗಬೇಕಾಗಿದೆ. ಮುನ್ನುಡಿಯ ಲೇಖಕರಾದ ಶ್ರೀ. ಅಮ್ಮೆಂಬಳ ಅನಂತಯ್ಯ ನಾವಡ, ವಿದ್ವಾನ್ ಇವರು ಕನ್ನಡ ಸಾಹಿತ್ಯದಲ್ಲಿ ಅನೇಕ ಗದ್ಯ, ಪದ್ಯಗಳನ್ನು ರಚಿಸಿದವರು, ಭುವನೇಂದ್ರ ಸಂಸ್ಕೃತ ಕಾಲೇಜು, ಕಾರ್ಕಳ ಇದರ ವಿದ್ಯಾರ್ಥಿ ಬಂಧುಗಳೂ ನನ್ನ ಬಾಲ್ಯ ಸ್ನೇಹಿತರೂ ಆಗಿದ್ದಾರೆ; ಅವರಿಗೆ ನನ್ನ ಹಸ್ತಲಿಖಿತ ಪ್ರತಿಯನ್ನು ತೋರಿಸಲಾಗಿ ಅವರು ಅನೇಕ ವಿಧಾಯಕ ಸಲಹೆಗಳನ್ನು ಇತ್ತು ಮುನ್ನುಡಿ ಬರೆದು ಕೊಟ್ಟು ಈ ಪುಸ್ತಕದ ಮಹತ್ವವನ್ನು ಹೆಚ್ಚಿಸಿದಕ್ಕಾಗಿ ಅವರೀಗೆ ಅನಂತ ಧನ್ಯವಾದಗಳು. ಮಂಗಳೂರಿನ ಪ್ರಸಿದ್ಧ ನ್ಯಾಯವಾದಿಗಳಾದ ಶ್ರೀ. ಎಮ್. ಕೆ. ದೇವರಾಜ್‌ರವರು ನಾನು ರಮಾಬಾಯಿಯ ಕನ್ನಡ ಚರಿತ್ರೆಯನ್ನು ಬರೆದು ಪ್ರಕಟಿಸುವ ವಿಚಾರವನ್ನು ಅವರೊಡನೆ ಪ್ರಸ್ತಾಪಿಸಲಾಗಿ ಸಾವಧಾನದಿಂದ ನನ್ನ ಮಾತುಗಳನ್ನು ಕೇಳಿ ಸಹಾಯ ಇತ್ತಿದ್ದಕ್ಕಾಗಿ ಅವರೀಗೆ ವಂದನೆಗಳು. ನನ್ನ ವಾಸ್ತವ್ಯದಿಂದ ಎಷ್ಟೋ ದೂರ ಅಂತರ ವಿದ್ದರೂ ಮುದ್ರಿತಗಳನ್ನು ಶೋಧಿಸುವರೇ ಸಕಾಲಕ್ಕೆ ಒದಗಿಸಿಕೊಟ್ಟು ಆತ್ಮೀಯಭಾವನೆಯಿಂದ ಈ ಪುಸ್ತಕ ಪ್ರಕಾಶನದಲ್ಲಿ ಸಹಕರಿಸಿದ ಶಾರದಾ ಛಾಪಖಾನೆಯ ವ್ಯವಸ್ಥಾಪಕರಿಗೂ ಮತ್ತು ಎಲ್ಲಾ ಕೆಲಸಗಾರರಿಗೂ ಆಭಾರಿಯಾಗಿದ್ದೇನೆ. ಪ್ರಸಿದ್ಧ ಚಿತ್ರ ಕಲಾವಿದರಾದ ಶ್ರೀ ಸೇವಗೂರ್ ರವರು ಬೇಕಾದ ಚಿತ್ರಗಳನ್ನು ತಯಾರಿಸಿ ಕೊಟ್ಟದ್ದಕ್ಕಾಗಿ ಧನ್ಯವಾದಗಳು. ಅಲ್ಲದೆ ಜಾಹಿರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಿದ ಮಹನೀಯರಿಗೂ ಚಿರ ಋಣಿಯಾಗಿದ್ದೇನೆ.

—ಲೇಖಕ.

ಆಧಾರ ಗ್ರಂಥಗಳು

1. ಮಹಾರಾಷ್ಟ್ರಾಚೀ ತೇಜಸ್ವಿನಿ (ಮರಾಠಿ)
   ಲೇಖಕ: ದೇವದತ್ತ ನಾರಾಯಣ ಟಿಳಕ, ಬಿ. ಎ., ಎಲ್. ಎಲ್. ಬಿ., ನಾಸಿಕ.

2. ಭಾರತಾಂತೀಲ ಥೋರ ಸ್ತ್ರಿಯಾ (ಮರಾಠಿ)
   ಅನುವಾದಕ: ಸೌ. ಶರಯುಬಾಳ, ಎಮ್. ಎ., ಪಿಎಚ್. ಡಿ., ಪುಣೆ.

3. ಸ್ತ್ರೀಯಾಂಚಾ ಕಾಯದ್ಯಾಚೀ ವಾಟಚಾಲ (ಮರಾಠಿ)
   ಲೇಖಿಕಾ: ಡಾ. ಕಮಲಾಬಾಯಿ ದೇಶಪಾಂಡೆ, ಪುಣೆ.

4. ದೀನ ಜನೋದ್ಧಾರಕಳಾದ ಪಂಡಿತಾ ರಮಾಬಾಯಿ ಸರಸ್ವತಿ (ಕನ್ನಡ)
   ಲೇಖಕ: ಎಮ್. ರಾಮರಾವ್, ಸುಬೋಧ ಕುಸುಮಾಂಜಲಿ ಗ್ರಂಥಮಾಲಾ, ಬೆಂಗಳೂರು.

5. ಸ್ತ್ರೀ ಧರ್ಮನೀತಿ (ಮರಾಠಿ)
   ಲೇಖಿಕಾ: ಪಂ. ರಮಾಬಾಯಿ.

6. ಬಾಜಿರಾವ್ ಬಲ್ಲಾಳ ಪೇಶವೆ ಚರಿತ್ರ (ಮರಾಠಿ)

ನಿವೇದನೆ

ಈ ಗ್ರಂಥದ ಕಥಾ ನಾಯಿಕೆಯಾದ ಪಂ. ರಮಾಬಾಯಿಯು ಹುಟ್ಟಿದುದು ಪಶ್ಚಿಮ ಘಟ್ಟದ ಪ್ರಾಂತ್ಯಾರಣ್ಯದ ಮಧ್ಯದಲ್ಲಿ. ರಮಾಬಾಯಿಯ ಪೂರ್ವಜರ ಮನೆ, ತೋಟ, ಹೊಲಗದ್ದೆಗಳು ಇರುವುದು ಪಶ್ಚಿಮ ಘಟ್ಟದ ಪಾದಪ್ರದೇಶದಲ್ಲಿರುವ ಮಾಳ ಹೇರಂಜಿಯಲ್ಲಿ. ರಮಾಬಾಯಿಯ ತೀರ್ಥರೂಪರಾದ ಅನಂತ ಶಾಸ್ತ್ರಿ ಡೋಂಗ್ರೆಯವರು ತೋಟದ ಕೆಲಸದೊಡನೆ ತನ್ನ ಪಿತಾಮಹ ಕೃಷ್ಣ ಶಾಸ್ತ್ರಿ ಡೋಂಗ್ರೆಯವರ ಹತ್ತಿರ ಸಣ್ಣ ಪ್ರಾಯದಲ್ಲಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದುದು ಮಾಳ ಹೇರಂಜಿಯಲ್ಲಿ. ಅನಂತ ಶಾಸ್ತ್ರಿಯು, ಸ್ತ್ರೀಯರಿಗೆ ಸಂಸ್ಕೃತ ವಿದ್ಯಾಭ್ಯಾಸ ಮುಂತಾದ ಸುಧಾರಣಾ ಮನೋವೃತ್ತಿಯನ್ನು ನೋಡಿ ಸ್ವಜನರಿಂದಲೂ ನೆರೆಹೊರೆಯವರಿಂದಲೂ ನಾನಾ ರೀತಿಯ ದೂರು ಅಪನಿಂದೆ ಕಡೆಗೆ ಬಹಿಷ್ಕಾರದ ಬೆದರಿಕೆ ಬಂದುದು ಕೂಡಾ ಸ್ವಗ್ರಾಮದಲ್ಲಿಯೇ. ಸ್ತ್ರೀಯರಿಗೆ ಸಂಸ್ಕೃತವನ್ನು ಕಲಿಸುತ್ತಿದ್ದ ಅನಂತ ಶಾಸ್ತ್ರಿಗೆ ಶಾಸ್ತ್ರಾಧಾರದ ಬಗ್ಗೆ ಗುರುಪೀಠದಿಂದ ವಾದ ವಿವಾದಕ್ಕೆ ಆಹ್ವಾನ ಬಂದುದು ನಮ್ಮ ಜಿಲ್ಲೆಯಿಂದಲೇ. ಉಪನಯನದ ನಂತರ ವೇದಾಧ್ಯಯನ ಮತ್ತು ಸಂಸ್ಕೃತ ವಿದ್ಯಾಭ್ಯಾಸವನ್ನು ನಮ್ಮ ಮೈಸೂರು ಪ್ರಾಂತ್ಯದ ಶ್ರಿಂಗೇರಿ ಜಗದ್ಗುರು ಪೀಠದಲ್ಲಿಯೇ ಅನಂತ ಶಾಸ್ತ್ರಿಯು ಪ್ರಾರಂಭಿಸಿದ್ದನು.

ತನ್ನ ವಿದ್ಯಾ ವೈದುಷ್ಯಾದಿಗಳಿಂದ ಖಂಡಾಂತರಗಳಲ್ಲಿ ಕೀರ್ತಿಶೇಷಳಾದ ಪಂಡಿತಾ ರಮಾಬಾಯಿಯು ನಮ್ಮ ಜಿಲ್ಲೆಯವಳು; ನಮ್ಮವಳು ಎಂಬ ಭಾವನೆಯು ಅವಳ ಚರಿತ್ರೆಯ ಪಠನದಿಂದ ಮೂಡುತ್ತದೆ. ಇಂಗ್ಲೆಂಡಿನಿಂದ ಹಿಡಿದು ಇಂಡೋನೇಷಿಯಾ ತನಕ ಪಶ್ಚಿಮ ಮತ್ತು ಪೂರ್ವದೇಶದ ಜನರು ಪಂ. ರಮಾಬಾಯಿಯ ಜೀವನ ಚರಿತ್ರೆಯ ಅಭ್ಯಾಸ ಮಾತ್ರದಿಂದಲೇ ಅವಳ ಜನ್ಮಸ್ಥಳವಾದ ಗಂಗಾಮೂಲ, ಮಾಳ ಹೇರಂಜಿ, ದಕ್ಷಿಣ ಕನ್ನಡದ ಮಂಗಳೂರು ಮುಂತಾದ ಸ್ಥಳಗಳ ಕುರಿತು ಕುತೂಹಲಚಿತ್ತರಾಗುತ್ತಾರೆ. ಪಂಡಿತಾ ರಮಾಬಾಯಿಯ ಅಗಾಧ ಪಾಂಡಿತ್ಯ, ದೀನ ದರಿದ್ರರ ಸೇವೆ, ನಿರಹಂಕಾರ, ಕಷ್ಟಸಹಿಷ್ಣುತೆ ಮುಂತಾದ ಗುಣ ವಿಶೇಷಗಳಿಂದ ಮೆಚ್ಚಿದ ಪಾಶ್ಚಿಮಾತ್ಯ ಜನರು ಕೂಡಾ ಅವಳ ಹುಟ್ಟೂರಾದ

ಮಾಳ ಹೇರಂಜಿ ತುಂಗಭದ್ರಾನದಿಯು ಉಗಮ ಸ್ಥಾನವಾದ ಗಂಗಾಮೂಲ, ಅನಂತ ಶಾಸ್ತ್ರಿಯ ಋಷಿ ಸದೃಶವಾದ ಜೀವನ ಇವುಗಳಿಂದ ಆಕರ್ಷಿತ ರಾಗುತ್ತಾರೆ.

ಈಗ್ಯೆ ಸುಮಾರು ನೂರಐದು ವರ್ಷಗಳ ಹಿಂದೆ ಹುಟ್ಟಿ ಕೇವಲ ಬಡತನದಲ್ಲಿ ಬೆಳೆದು ಅನಾಥ ಸ್ಥಿತಿಯನ್ನು ಅನುಭವಿಸಿ, ಬಂಧುಬಾಂಧವ ರನ್ನೆಲ್ಲಾ ಕಳೆದುಕೊಂಡು ಏಕಾಕಿನಿಯಾಗಿ ನಿಂತರೂ ದೇಶಸೇವೆ ದೀನ ಜನರ ಉದ್ಧಾರ, ಭಾರತ ದೇಶದ ಅಶಿಕ್ಷಿತ-ಅನಾಥ ಸ್ತ್ರೀಯರ ಉದ್ಧಾರ ಇವು ಗಳಿಗಾಗಿ ಅಹರ್ನಿಶಿ ಶ್ರಮಿಸಿದ ಪುಣ್ಯಶೀಲೆಯು ಪಂ. ರಮಾಬಾಯಿಯು. ಭಾರತ ದೇಶದ ಸ್ತ್ರೀಯರನ್ನು ಸುಶಿಕ್ಷಿತರನ್ನಾಗಿ ಮಾಡಿ, ಸ್ತ್ರೀಯರಿಗೆ ವೈದ್ಯ ಕೀಯ ಶಿಕ್ಷಣವನ್ನು ಕೊಟ್ಟು ಮಹಿಳೆಯರಿಗಾಗಿ ಪ್ರತ್ಯೇಕ ದಾವಾಖಾನೆ ಗಳನ್ನು ಏರ್ಪಡಿಸಬೇಕೆಂಬ ಪಂ. ರಮಾಬಾಯಿಯು ಕೇಳಿಕೆಯನ್ನು ಆಗಿನ ವೈಸರಾಯಿಯಾಗಿದ್ದ 'ಲಾರ್ಡ್ ರಿಪ್ಪನ್' ಸಾಹೇಬರು ಮೆಚ್ಚಿ 'ವಿಕ್ಟೋರಿಯಾ' ಮಹಾರಾಣಿಗೆ ಅದನ್ನು ತಿಳಿಸಿದ್ದನು. ಇದರ ಪರಿಣಾಮವಾಗಿಯೇ ಭಾರತ ದಲ್ಲಿ ಹೆಂಗಸರ ಆಸ್ಪತ್ರೆಗಳು, ಪ್ರಾರಂಭವಾದುವು. ಭಾರತದ ರಾಷ್ಟ್ರೀಯ ಮಹಾಸಭೆಯ ಪ್ರಥಮ ಮಹಿಳಾ ಸದಸ್ಯೆಯಾದ ಪಂಡಿತಾ ರಮಾಬಾಯಿಯು ಭಿನ್ನ ಭಿನ್ನ ಭಾಷೆಗಳಿಂದ ಕೂಡಿದ ಭಾರತ ದೇಶದಲ್ಲಿ ಎಲ್ಲರಿಗೂ ತಿಳಿಯುವ ಹಿಂದೀ ಒಂದೇ ರಾಷ್ಟ್ರಭಾಷೆಯಾಗಬೇಕೆಂದು ಎಪ್ಪತ್ತೈದು ವರ್ಷಗಳ ಹಿಂದೆ ವಾದಿಸಿದಳು. ಇಂಗ್ಲೆಂಡು, ಅಮೇರಿಕಾ, ಜಪಾನು ಮುಂತಾದ ಖಂಡಾಂತರ ಗಳಲ್ಲಿ ಸಂಚರಿಸಿ ಅಲ್ಲಿಯ ಜನರಿಗೆ ಭಾರತ ದೇಶದ ಪ್ರಾಚೀನ ಕಾಲದ ಉನ್ನತೋನ್ನತ ಮಹಿಮೆಯನ್ನೂ ಸಮಕಾಲೀನ ದುಃಸ್ಥಿತಿಯನ್ನೂ ವಿವರಿಸಿದು ದಲ್ಲದೆ ಭಾರತ ದೇಶದ ಮಹಿಳೆಯರ ದೀನದರಿದ್ರರ ಸುಧಾರಣೆಯ ಅವಶ್ಯ ಕತೆಯನ್ನು ಅವರಿಗೆ ಮುಂದಟ್ಟು ಮಾಡಿದಳು. ಅಮೇರಿಕಾ ದೇಶದಿಂದ ಎಷ್ಟೋ ಸಾವಿರ ಡಾಲರು, ಸಹಾಯ ಧನ ಪಡೆದು ಪೂಣಾದ ಸಮೀಪ "ಖೇಡಗಾಂವ್" ಎಂಬಲ್ಲಿ ಅಬಲೆಯರು, ಅಂಗವಿಕಲರು, ಅನಾಥರು ಇವರಿಗಾಗಿ ಆಶ್ರಮವನ್ನು ಕಟ್ಟಿಸಿ ಅವರಿಗೆ ವಿದ್ಯಾಭ್ಯಾಸ, ವೃತ್ತಿ ಶಿಕ್ಷಣ ಮುಂತಾದ್ದನ್ನು ಒದಗಿಸಿದಳು. ಕುರುಡರಿಗಾಗಿ ಅಂಧಶಾಲೆಯನ್ನು ಸ್ಥಾಪಿಸಿ "ಬ್ರೈಲ್" ಪದ್ಧತಿಯಿಂದ ಅಕ್ಷರಾಭ್ಯಾಸವನ್ನು ಭಾರತದಲ್ಲಿಯೇ ಪ್ರಥಮವಾಗಿ ಶುರುಮಾಡಿದಳು. ಭಾರತದಲ್ಲಿ "ಕಿಂಡರ್‌ಗಾರ್ಟನ್" ಶಿಕ್ಷಣ ಪದ್ಧತಿಯನ್ನೂ

ಖಾಸಗಿ ಹೈಸ್ಕೂಲನ್ನೂ ಪ್ರಾರಂಭಿಸಿದ ಶ್ರೇಯಸ್ಸು ಪಂಡಿತಾ ರಮಾಬಾಯಿ ಗೇನೇ ಸೇರುವುದು. ಹೀಗೆ ಅನೇಕ ಕಾರಣಗಳಿಂದ ಪಂಡಿತಾ ರಮಾ ಬಾಯಿಯ ದಿವ್ಯ ಚರಿತ್ರೆಯು ಸ್ಫೂರ್ತಿದಾಯಕವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಭಾರತೀಯ ಸಂಸ್ಕೃತಿ ಮತ್ತು ಭಾರತೀಯ ಪರಂಪರೆ ಇವುಗಳ ಸಂಶೋಧನ ಮತ್ತು ಪ್ರಕಾಶನಗಳಲ್ಲಿ ತನ್ನ ಜೀವಮಾನವನ್ನೇ ಸವೆಸಿದ ಜರ್ಮನ್ ಪಂಡಿತನಾದ ಪ್ರೊ. 'ಮೆಕ್ಸ್‌ಮುಲ್ಲರನು' ಕೂಡಾ ಪಂಡಿತಾ ರಮಾ ಬಾಯಿಯ ಚರಿತ್ರೆಯನ್ನು ಜರ್ಮನ್ ಭಾಷೆಯಲ್ಲಿ ಬರೆದು ತನ್ನ ಆದರವನ್ನು ವ್ಯಕ್ತಪಡಿಸಿದ್ದನು. ಇಂಗ್ಲಿಷು, ಮರಾಠಿ ಭಾಷೆಗಳಲ್ಲಿ ಪಂಡಿತಾ ರಮಾ ಬಾಯಿಯ ಕುರಿತು ಅನೇಕ ಗ್ರಂಥಗಳು ಪ್ರಸಿದ್ಧವಾಗಿವೆಯಾದರೂ ಕನ್ನಡ ದಲ್ಲಿ ಮಾತ್ರ ಪಂಡಿತಾ ರಮಾಬಾಯಿಯ ಕುರಿತು ಪ್ರಕಟವಾದ ಸಾಹಿತ್ಯ ವಿರಳ.

ಕಳೆದ ನೂರು ವರ್ಷಗಳ ಇತಿಹಾಸವನ್ನು ಸಿಂಹಾವಲೋಕನ ಮಾಡಿ ದರೆ ಸ್ವಾತಂತ್ರ್ಯ ಹೋರಾಟದಲ್ಲಿ, ಸಮಾಜ ಸೇವೆಯಲ್ಲಿ ಸಹಭಾಗಿಗಳಾದ ಮಹಿಳೆಯರು ಅನೇಕರಿದ್ದಾರೆ ಎಂಬುದು ತಿಳಿಯುತ್ತದೆ. ಉದಾಹರಣೆಗಾಗಿ ಮದಾಮ್ ಕಾಮಾಬಾಯಿ ಭಾರತದ ಸ್ವಾತಂತ್ರ್ಯಕ್ಕಾಗಿ ತನ್ನ ಸಂಪತ್ತು, ಸುಖೋಪಭೋಗಗಳನ್ನು ತ್ಯಜಿಸಿ ಭಾರತದ ದಾಸ್ಯ ವಿಮೋಚನೆಗಾಗಿ ದುಡಿದಳು. ಭಾರತದ ಗಾನ ಕೋಕಿಲೆ ಸರೋಜಿನಿ ದೇವಿ, ಕಸ್ತೂರ್ಬಾ ಇವರಂತೆ ಪಂಡಿತಾ ರಮಾಬಾಯಿಯು ಅಗಾಧವಾದ ಕಾರ್ಯಗಳನ್ನು ಕೇವಲ ಸ್ವಪ್ರಯತ್ನದಿಂದಲೇ ಮಾಡಿದ್ದಾಳೆ. ದ್ರವ್ಯಾನುಕೂಲ, ಇತರರ ಸಹಾಯ, ಸಹಕಾರಗಳಿಲ್ಲದೇನೇ ಮಾಡಿದ ಸೇವಾಕಾರ್ಯಗಳನ್ನು ಯೋಚಿಸಿ ದರೆ ಆಶ್ಚರ್ಯವೆನಿಸುತ್ತದೆ.

ಹಿಂದುಸ್ತಾನ್ ಸರಕಾರವು ಪಂಡಿತಾ ರಮಾಬಾಯಿಯ ಅನೇಕಾನೇಕ ಸೇವಾಕಾರ್ಯಗಳನ್ನು ಗಮನಿಸಿ 1919ರಲ್ಲಿ ಕೈಸರ್-ಇ-ಹಿಂದ್ ಎಂಬ ಘನತರವಾದ ಬಿರುದನ್ನಿತ್ತು ಗೌರವಿಸಿತು. ಮುಂದೆ 1922ನೇ ಇಸವಿ ಯಲ್ಲಿ ಪಂಡಿತಾ ರಮಾಬಾಯಿಯು ತನ್ನ ಜೀವನ ಯಾತ್ರೆಯನ್ನು ಮುಗಿಸಿ ದಳು. ರಮಾಬಾಯಿಯ ಸಮಕಾಲೀನರು ಈಗ ಜೀವಂತವಿರುವುದು ಅಪರೂಪ. ದೈವವಶಾತ್ ಭಾರತ ರತ್ನ ಧೋಂಡೋ ಕೇಶವ ಕರ್ವೆ

ಯವರು ಜೀವಂತರಿದ್ದರು. ಆದರೆ ತನ್ನ ನೂರನಾಲ್ಕನೆ ವಯಸ್ಸಿನಲ್ಲಿ 1962 ನವಂಬರದಲ್ಲಿ ಕೈಲಾಸವಾಸಿಗಳಾದರು. ಶ್ರೀ ಕರ್ವೆಯವರ ಶತಮಾನೋತ್ಸವವು 1958ನೇ ಎಪ್ರೀಲ್ ಮಾಸದಲ್ಲಿ ಮುಂಬಯಿಯಲ್ಲಿ ಪ್ರಧಾನ ಮಂತ್ರಿ ನೆಹರೂರವರ ಅಧ್ಯಕ್ಷತೆಯಲ್ಲಿ ಜರಗಿತು. ಶತಾಯುಷೀ ಕರ್ವೆಯವರನ್ನು ಪ್ರಧಾನ ಮಂತ್ರಿಗಳು ಮುಕ್ತಕಂಠದಿಂದ ಅಭಿನಂದಿಸಿದರು. ಪಂ. ರಮಾಬಾಯಿಯ ಸಹೋದ್ಯೋಗಿಗಳಾಗಿ ದುಡಿದು ಅವಳಿಂದಲೇ ಸ್ಫೂರ್ತಿಪಡೆದು ಸ್ಥಾಪಿಸಿದ ಸ್ತ್ರೀ ಶಿಕ್ಷಣ ಸಂಸ್ಥೆಯು ಹಿಂಗಣೆ ಪುಣೆ ಜಿಲ್ಲಾದಲ್ಲಿ ಸರಕಾರದ ಮತ್ತು ಸಾರ್ವಜನಿಕರ ವೆಚ್ಚದಿಂದ ಈಗಲೂ ನಡೆಯುತ್ತದೆ.

ರಮಾಬಾಯಿಯು ಸ್ವರ್ಗಸ್ಥಳಾಗಿ ನಲ್ವತ್ತ-ಮೂರು ವರ್ಷಗಳಾದುವು. ದೇಶ ವಿದೇಶಗಳಲ್ಲಿ ಕೂಡಾ ಅನೇಕ ಜನರಲ್ಲಿ ರಮಾಬಾಯಿಯ ಜೀವನ ಪರಿಚಯದ ಕುರಿತು ಕುತೂಹಲವು ಹೆಚ್ಚುತ್ತಿರುವುದು ಗೋಚರವಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಮಾತ್ರ ರಮಾಬಾಯಿಯ ಚರಿತ್ರೆಯು ಪ್ರಚಾರದಲ್ಲಿಲ್ಲದಿರುವುದು ಶೋಚನೀಯ. ಸುಮಾರು ಮೂವತ್ತು ವರ್ಷಗಳ ಹಿಂದೆ ನಮ್ಮ ಗ್ರಾಮದ ಆದರ್ಶ ಶಿಕ್ಷಕರಾದ ಶ್ರೀ. ದಿವಂಗತ ಬಿ. ವೆಂಕಟ್ರಾವ್ ಅವರು ಕನ್ನಡದಲ್ಲಿ ಪ್ರಕಟವಾದ ಒಂದು ರಮಾಬಾಯಿಯ ಚರಿತ್ರೆಯ ಪುಸ್ತಕವನ್ನು ತರಿಸಿದರು. ನನ್ನ ತೀರ್ಥರೂಪರೂ ಅದನ್ನು ಓದಿ ಅನಂತ ಶಾಸ್ತ್ರಿ ಮತ್ತು ಪಂ. ರಮಾಬಾಯಿಯ ವಿಷಯವಾಗಿ ಅನೇಕ ಆಖ್ಯಾಯಿಕೆಗಳನ್ನು ಹುಡುಗರಾದ ನಮಗೆ ಹೇಳುತ್ತಿದ್ದರು. 1930ನೇ ಇಸವಿಯ ಸುಮಾರಿನಲ್ಲಿ ರೆವಿನ್ಯೂ ಇಲಾಖೆಯಲ್ಲಿ ಉನ್ನತಾಧಿಕಾರಿಗಳೊಬ್ಬರು, ಯಾತ್ರಾಸ್ಥಳವಾದ ಗಂಗಾ ಮೂಲವನ್ನು ಸಂದರ್ಶಿಸಿದರು. ಅವರ ಕ್ಷೇತ್ರವಿಧಿಗಳನ್ನು ಪೂರೈಸುವರೇ ಪುರೋಹಿತರಾಗಿ ನನ್ನ ತೀರ್ಥರೂಪರೂ ಗಂಗಾಮೂಲಕ್ಕೆ ಹೋದರು. ಮದ್ರಾಸು ಕಡೆಯವರಾದ ಆ ಅಧಿಕಾರಿಗಳಿಗೆ 'ಗಂಗಾಮೂಲ', ಅನಂತ ಶಾಸ್ತ್ರೀ, ಪಂ. ರಮಾಬಾಯಿ, ಬಾಜೀರಾಯ ಪೇಶ್ವೆ ಮುಂತಾದವರ ವಿಷಯವಾಗಿ ಅನೇಕ ಕಥೆಗಳನ್ನು ನಮ್ಮ ತಂದೆಯವರು ಹೇಳಿದರು.

ರಮಾಬಾಯಿಯ ಈ ಚರಿತ್ರೆಯನ್ನು ಅಭ್ಯಸಿಸಿದ ಜನಸಮುದಾಯದ ಎದುರು ಒಂದು ಪ್ರಶ್ನೆಯು ಎದ್ದು ನಿಲ್ಲುತ್ತದೆ. ಏಕೆಂದರೆ ಸಂಭಾವಿತ ಬ್ರಾಹ್ಮಣ ಕುಲದಲ್ಲಿ ಹುಟ್ಟಿ ಹಿಂದೂ ಧರ್ಮ ಶಾಸ್ತ್ರದ ಸಾರ ಸರ್ವಸ್ವವನ್ನೂ

ಅರಿತು ಸಂಸ್ಕೃತ ವಿದ್ಯೆಯ ಮೂರ್ತಿಮಂತ ಸ್ವರೂಪಳಾದ ರಮಾಬಾಯಿಯು ಕ್ರೈಸ್ತ ಮತಾವಲಂಬಿಯಾದುದು. ಇದಕ್ಕೆ ಪಂಡಿತೆಯ ಚರಿತ್ರ ಪಠನ ದಿಂದಲೇ ಉತ್ತರ ಸಿಕ್ಕುವುದು. ಒಂದೇ ಮಾತಿನಲ್ಲಿ ಉತ್ತರಿಸುವುದಾದರೆ ಅವಳು ಮತಾಂತರ ಹೊಂದಿದುದು ಕೇವಲ ಸ್ವದೇಶ ಸ್ವಜನರ ಉದ್ಧಾರ ಕ್ಕಾಗಿಯಲ್ಲದೇ ಅವಳ ಸ್ವಂತ ಸುಖೋಪಭೋಗಕ್ಕಾಗಿ ಅಲ್ಲ. ರಮಾ ಬಾಯಿಗೆ ಸ್ವಂತವಾದ ಒಂದು ಧರ್ಮಾಭಿಮಾನವಾಗಲೀ ಮತೀಯ ವಿಚಾರ ದಲ್ಲಿ ಆಗ್ರಹವಾಗಲೀ ಇರಲಿಲ್ಲವೆಂಬುದು ನಿರ್ವಿವಾದ. ಅವಳು ಹಿಂದೂಜಾತಿ ಯನ್ನು ಬಿಟ್ಟಿದ್ದರೂ ಹಿಂದುತ್ವವನ್ನು ಬಿಟ್ಟಿರಲಿಲ್ಲ. ಅಮೇರಿಕಾ ದೇಶದಲ್ಲಿ ಸಾತ್ವಿಕವಾದ ಅನ್ನಾಹಾರ ಸಿಗದಿದ್ದಲ್ಲಿ ಅವಳು ಉಪವಾಸದಿಂದ ಕಾಲಕಳೆಯು ತ್ತಿದ್ದಳೇ ಹೊರತು ಆ ದೇಶ ಪದ್ಧತಿಯ ಊಟವನ್ನು ಸ್ವೀಕರಿಸಲಿಲ್ಲ.

ಸಮಗ್ರ ಭಾರತ ದೇಶವೇ ರಮಾಬಾಯಿಯ ಕಾರ್ಯಕ್ಷೇತ್ರವಾಗಿದ್ದುದ ರಿಂದ ಬಂಗಾಳಿಗಳು, ಮಹಾರಾಷ್ಟ್ರದವರು ರಮಾಬಾಯಿಯು ತನ್ನವಳು ಎಂಬ ಆತ್ಮೀಯ ಭಾವನೆಯಿಂದ ಆದರಾಂಜಲಿಯನ್ನು ಅರ್ಪಿಸುತ್ತಿರು ವಾಗ ದಕ್ಷಿಣ ಕನ್ನಡಿಗಳಾದ ಪಂಡಿತಾ ರಮಾಬಾಯಿಗೆ ನಾವು ಕೃತಜ್ಞತೆ ಯನ್ನು ಸಲ್ಲಿಸುವುದು ನಮ್ಮ ಕರ್ತವ್ಯವಾಗಿದೆ. ರಮಾಬಾಯಿಯ ಸಮ ಕಾಲವನ್ನು ಸಿಂಹಾವಲೋಕನ ಮಾಡಿ ಆಗಿನ ಸಮಾಜ ಸ್ಥಿತಿ, ಆಚಾರ ವಿಚಾರ ಪೂರ್ವ ಚರಿತ್ರೆಯನ್ನು ಅಭ್ಯಸಿಸಿ ನಿಬಂಧವನ್ನು ಬರೆಯುವುದು ಎಂದರೆ ಅದು ಒಂದು ಅಗ್ನಿ ಪರೀಕ್ಷೆಯೇ ಸರಿ. ಆದರೂ ಬಹುದಿನಗಳ ಒಂದು ಆಕಾಂಕ್ಷೆಯನ್ನು ಪೂರೈಸುವ ಪ್ರಬಲವಾದ ಇಚ್ಛಾ ಶಕ್ತಿಯು ನನ್ನನ್ನು ಈ ಕೆಲಸಕ್ಕೆ ಬಲವಂತಪಡಿಸಿತು. ಕನ್ನಡ ವಾಚಕರಿಗೆ ಪ್ರಸ್ತುತ ಚರಿತ್ರೆ ಯಲ್ಲಿ ಒಂದಿಷ್ಟಾದರೂ ರಸ ತೋರಿದರೆ ನಾನು ಕೃತಾರ್ಥನು.

ಎಮ್. ಲಕ್ಷ್ಮಣ ಹರಿಹರ ಜೋಶಿ

ಪರಿವಿಡಿ



ಭಾರತದ ಅಗ್ರೇಸರ ಮಹಿಳೆ
ಪಂಡಿತಾ ರಮಾಬಾಯಿ ಸರಸ್ವತಿ

ಭಾರತದ ಅಗ್ರೇಸರ ಮಹಿಳೆ

ಪಂಡಿತ ರಮಾಬಾಯಿ

---

೧. ಗಂಗಾಮೂಲ

ದಕ್ಷಿಣ ಕನ್ನಡದ ಕಾರ್ಕಳ ಪೇಟೆಯಿಂದ ಪೂರ್ವಕ್ಕೆ ಸುಮಾರು ಹದಿನಾಲ್ಕು ಮೈಲು ದೂರದಲ್ಲಿ ಪಶ್ಚಿಮ ಘಟ್ಟಗಳ ಸಾಲು, ಕೋಟೆಯ ಗೋಡೆಯಂತೆ ವಿರಾಜಮಾನವಾಗುತ್ತದೆ. ಈ ಪಶ್ಚಿಮ ಘಟ್ಟದ ಪರ್ವತಕ್ಕೆ ವರಾಹ ಪರ್ವತವೆಂದೂ ಇನ್ನೊಂದು ನಾಮಾಭಿದಾನ. ಕಾರ್ಕಳ ಪೇಟೆಯಿಂದ ಹನ್ನೆರಡು ಮೈಲು ದೂರಕ್ಕಿರುವ ಮಾಳ ಗ್ರಾಮದಿಂದ ಸುಮಾರು ಏಳು ಮೈಲು ದೂರದಲ್ಲಿ ತುಂಗಾ ಮತ್ತು ಭದ್ರಾ ನದಿಗಳು ಗಂಗಾಮೂಲ* ವೆಂಬ ತೀರ್ಥಸ್ಥಳದಲ್ಲಿ ಹುಟ್ಟುತ್ತವೆ. ಪಶ್ಚಿಮ ಘಟ್ಟದ ಶಿಖರದ ಆಚೆಗಿರುವ ಈ ಕ್ಷೇತ್ರವು ಯಾತ್ರಾರ್ಥಿಗಳಿಗೆ ಪರಮಾನಂದವನ್ನು ಕೊಡತಕ್ಕ ಸ್ಥಳವಾಗಿದೆ. ಹನ್ನೆರಡು ಸಲ ಗಂಗಾಮೂಲ ಯಾತ್ರೆ ಮಾಡಿದವನಿಗೆ ಕಾಶೀ ಯಾತ್ರೆ ಮಾಡಿದ ಫಲಸಿಗುತ್ತದೆ ಎಂದು ಜನರ ನಂಬಿಕೆ. ಗಂಗಾಮೂಲದ ಸುತ್ತಲೂ ಸೂರ್ಯಕಿರಣ ಬೀಳದಷ್ಟು ನಿಬಿಡವಾದ ಅರಣ್ಯವಿರುತ್ತದೆ. ಕರ್ಬಲಾಯಿ ಎಂಬ ಜಾತಿಯ ಮರಗಳು ವಿಶೇಷವಾಗಿ ಈ ಅರಣ್ಯದಲ್ಲಿ ಬೆಳೆದಿರುತ್ತವೆ. ಎತ್ತರವಾದ ಶಿಖರವನ್ನೇರಿ ಸುತ್ತಲೂ ದೃಷ್ಟಿ ಕ್ಷೇಪಮಾಡಿದರೆ ಭತ್ತದ ರಾಶಿಗಳಂತೆ ಹುಲ್ಲು ಗುಡ್ಡೆಗಳು ಸುತ್ತಲೂ ವಿರಾಜಿಸುತ್ತವೆ.

---

* ಗಂಗಾಮೂಲದ ವಿಪುಲವಾದ ಅರಣ್ಯ ಸಂಪತ್ತು ಸರಕಾರದ ಲಕ್ಷವನ್ನು ಸೆಳೆದಿದೆ. ಗಂಗಾಮೂಲದಿಂದ ಅರ್ಧ ಮೈಲು ದೂರದ ವರೆಗೂ ಈಗ ರಸ್ತೆ ನಿರ್ಮಾಣವಾಗಿದೆ. ಮರಗಳ ಸಾಗಾಟವು ಭರದಿಂದ ಪ್ರಾರಂಭವಾಗಿದೆ. ಇಲ್ಲಿಯ ಪರಿಸರದಲ್ಲಿ ವಿಪುಲವಾದ ಖನಿಜ ಸಂಪತ್ತು ಕೂಡಾ ಇರುವುದು ಶಕ್ಯವಿದೆ ಎಂಬುದಾಗಿ ಅಂದಾಜು ಮಾಡಲಾಗಿದೆ. ಪಶ್ಚಿಮ ಘಟ್ಟದ ಮಧ್ಯದಿಂದ ಮುಳ್ಳೂರು ಘಾಟಿ ರಸ್ತೆಯು ಶೃಂಗೇರಿಗೆ ಬಂದು ಅಲ್ಲಿಂದ ದ. ಕನ್ನಡದ ಇತರ ಕಡೆಗಳಿಗೆ ಹೋಗಲು ಅನುಕೂಲವಾಗುವಂತೆ ಸಾರಿಗೆ ಸೌಕರ್ಯವನ್ನು ಒದಗಿಸುವ ಯೋಜನೆಯು ಕಾರ್ಯಗತವಾಗುವ ಲಕ್ಷಣಗಳು ಈಗಾಗಲೇ ತೋರುತ್ತವೆ.

ಈ ಘೋರಾರಣ್ಯದಲ್ಲಿ ಕಾಡಾನೆ, ಹೆಬ್ಬುಲಿ, ಕರಡಿ ಮುಂತಾದ ಹಿಂಸ್ರ ಪಶುಗಳು ರಾತ್ರೆಹಗಲುಗಳ ಭೇದವಿಲ್ಲದೆ ಸಂಚರಿಸುತ್ತವೆ. ಇಲ್ಲಿಯ ನಿಸರ್ಗ ಸೌಂದರ್ಯ-ಪಕ್ಷಿಗಳ ಮಧುರಗಾಯನ—ಶೀತಲವಾದ ಹವೆ; ಇವುಗಳನ್ನೆಲ್ಲಾ ನೋಡಿದ ಯಾವ ಯಾತ್ರಿಕನಿಗಾದರೂ ಪರಮಾನಂದವಾಗದೇ ಇರಲಿಕ್ಕಿಲ್ಲ. ಸುಮಾರು ಮೂವತ್ತೆರಡು ವರ್ಷಗಳ ಹಿಂದೆ ಆಗಿನ ಮೈಸೂರು ದೊರೆಗಳಾದ ಮಹಾರಾಜ ಕೃಷ್ಣರಾಜ ಒಡೆಯರು ಈ ತಪೋಭೂಮಿಯ ದರ್ಶನವನ್ನು ಪಡೆದಿದ್ದರು. ಪ್ರತಿವರ್ಷ ಎಳ್ಳಮಾವಾಸ್ಯೆಗೆ ಬೇರೆ ಬೇರೆ ಊರುಗಳಿಂದ ಯಾತ್ರಿಕರು ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಹೋಗುತ್ತಾರೆ. ರಮಾಬಾಯಿಯ ಜನ್ಮಸ್ಥಳವಾದ ಗಂಗಾಮೂಲವನ್ನು ನೋಡಲು ಕೆಲವೊಂದು ಸಲ ದೂರದೇಶಗಳಿಂದಲೂ ಪ್ರವಾಸಿಗಳು ಬರುವುದುಂಟು. ಸುಮಾರು ಹದಿನೈದು ವರ್ಷಗಳ ಹಿಂದೆ ಒರ್ವ ಅಮೇರಿಕನ್ ವಿದುಷಿಯು ಗಂಗಾಮೂಲ ಕ್ಷೇತ್ರದ ದರ್ಶನವನ್ನು ಪಡೆದು ಹೋಗಿದ್ದಳು.

ಸಮುದ್ರ ಮಟ್ಟದಿಂದ ಸುಮಾರು 4037 ಅಡಿ ಎತ್ತರದಲ್ಲಿರುವ ಈ ಗಂಗಾಮೂಲದಲ್ಲಿ ಭದ್ರಾ ನದಿಯು ಹುಟ್ಟುವ ಸ್ಥಳಕ್ಕೆ ವರಾಹ ತೀರ್ಥವೆಂದೂ ತುಂಗಾ ನದಿಯ ಉಗಮಕ್ಕೆ ನಾಗತೀರ್ಥವೆಂದೂ ಹೆಸರು. ತುಂಗಾ ಮತ್ತು ಭದ್ರಾ ನದಿಗಳು ಪೂರ್ವಾಭಿಮುಖವಾಗಿ ದೂರ ಅಂತರದ ವರೇಗೆ ಹರಿದು ಶಿವಮೊಗ್ಗದಿಂದ 10 ಮೈಲು ದೂರದಲ್ಲಿ ಕೂಡಲಿ ಎಂಬಲ್ಲಿ ಸಂಗಮವಾಗಿ ತುಂಗಭದ್ರಾ ಎಂಬ ಹೆಸರು ಪಡೆಯುತ್ತದೆ.

ಸುಮಾರು ನೂರು ವರ್ಷಗಳ ಹಿಂದೆ ಅನಂತ ಶಾಸ್ತ್ರೀ ಡೋಂಗ್ರೆ ಎಂಬ ಚಿತ್ಪಾವನ ಕುಲಕ್ಕೆ ಸೇರಿದ ವೇದಶಾಸ್ತ್ರ ಪಾರಂಗತನಾದ ಒಬ್ಬ ಬ್ರಾಹ್ಮಣನು ಗಂಗಾಮೂಲದ ನಾಗತೀರ್ಥದ ಸಮೀಪ ಆಗಿನ ಮೈಸೂರು ಸರಕಾರದಿಂದ ಅನುಮತಿಪಡೆದು $2\frac{1}{2}$ ಮೈಲು ವಿಸ್ತೀರ್ಣದ ಜಾಗವನ್ನು ತನ್ನ ಆಶ್ರಮಕ್ಕೆಂದು ಗೊತ್ತುಪಡಿಸಿದ್ದನು. ಈ ಪ್ರದೇಶವನ್ನು ಕೃಷಿಯೋಗ್ಯವಾಗಿ ಸಮತಟ್ಟು ಮಾಡಿಸಿ ತುಂಗಾ ನದಿಯ ಪ್ರವಾಹವನ್ನು ತಿರುಗಿಸಿ ತನ್ನ ಕೃಷಿಗೆ ನೀರು ಸಿಗುವಂತೆ ಮಾಡಿದ್ದನು. ಅನಂತ ಶಾಸ್ತ್ರಿಯು ಬಂದು ನೆಲಸಿದ ಮೇಲೆ ಗಂಗಾ ಮೂಲಕ್ಕೆ ಒಂದು ಯಾತ್ರಾಸ್ಥಳದ ರೂಪ ಬಂದಿತು. ತುಂಗಾ ಮತ್ತು ಭದ್ರಾನದಿಗಳಲ್ಲಿ ಸ್ನಾನ ಕುಂಡಗಳನ್ನೂ ದೇವತಾ ಮೂರ್ತಿಗಳನ್ನೂ ಯಾತ್ರಿಕರಿಗೆ ತಂಗಲಿಕ್ಕೆ ಬಿಡಾರಗಳನ್ನೂ ಕಡೆಯುವ

ಕಲ್ಲು ಇತ್ಯಾದಿಗಳನ್ನೂ ಅನಂತ ಶಾಸ್ತ್ರಿಯು ಮಾಡಿಸಿದ್ದನು. ರಾಜ ಮಹಾ ರಾಜರುಗಳಿಂದ ಮಾನಧನವಾಗಿ ಸಿಕ್ಕಿದ ಅನೇಕ ಸಹಸ್ರ ರೂಪಾಯಿಗಳನ್ನು ಅನಂತ ಶಾಸ್ತ್ರಿಯು ಗಂಗಾಮೂಲದಲ್ಲಿ ಹೀಗೆ ವೆಚ್ಚಮಾಡಿದನು. ಹಾಳು ಬಿದ್ದ ಮನೆಯ ಪಂಚಾಂಗವನ್ನೂ, ಗೋಶಾಲೆ, ಯಾಗಶಾಲೆ, ನದೀ ತೀರ ದಲ್ಲಿರುವ ಸ್ನಾನಘಟ್ಟ ಇವುಗಳನ್ನೆಲ್ಲಾ ಈಗಲೂ ನೋಡಬಹುದು. ದೇವ ಸ್ಥಾನ ಕಟ್ಟಿಸುವ ಉದ್ದೇಶದಿಂದ ಕೆತ್ತಿಸಿದ ಕಲ್ಲುಕಂಬಗಳನ್ನು ಈಗಲೂ ತುಂಗಾ ನದಿಯಲ್ಲಿ ಕಾಣಬಹುದು. ಈಗಲೂ ಇರುವ ಜಂಬು ನೇರಳೆ ಮರ, ಸುಗಂಧಿ ಪುಷ್ಪದ ಗಿಡಗಳು, ಹಲಸು, ಮಾವು ಇತ್ಯಾದಿ ಮರಗಳು ಅನಂತ ಶಾಸ್ತ್ರಿಯ ತಪೋಭೂಮಿಯ ಸಾಕ್ಷಿಗಳಾಗಿವೆ. 1890-91ನೇ ಸುಮಾರಿನಲ್ಲಿ ರಮಾಬಾಯಿಯು ತನ್ನ ಸ್ವಗ್ರಾಮವಾದ ಮಾಳ ಹೇರಂಜಿ ಮತ್ತು ಜನ್ಮ ಸ್ಥಳವಾದ ಗಂಗಾಮೂಲವನ್ನೂ ನೋಡಿಹೋದದ್ದು ಆಧಾರ ದಿಂದ ತಿಳಿದುಬರುತ್ತದೆ. ಇದೇ ಸಮಯದಲ್ಲಿ ಕಾರ್ಕಳ, ಮಂಗಳೂರು ಕಡೆಗಳಲ್ಲಿ ರಮಾಬಾಯಿಯ ಸಾರ್ವಜನಿಕ ಭಾಷಣಗಳನ್ನು ನಾವು ಕೇಳಿದ್ದೇವೆಂದು ಹೇಳುವ ವೃದ್ಧ ಜನರು ಈಗಲೂ ಕೆಲವರು ಇರುವರು.

೨. ಪೂರ್ವ ವೃತ್ತಾಂತ

ಅನಂತ ಶಾಸ್ತ್ರಿ ಡೋಂಗ್ರೆಯು ಜನ್ಮತಾಳಿದುದು ಚಿತ್ಪಾವನ ಕುಲದಲ್ಲಿ. ಈ ಚಿತ್ಪಾವನ ವಂಶದ ಉತ್ಪತ್ತಿಯ ವಿಷಯದಲ್ಲಿ ಅನೇಕ ದಂತಕಥೆಗಳೂ ತರ್ಕವಿತರ್ಕಗಳೂ ಕೇಳಿಬರುತ್ತವೆ. ಹಿಂದೆ ಪರಶುರಾಮನು ತಾನು ಮಾಡಿದ ಕ್ಷತ್ರಿಯ ಸಂಹಾರದ ಪಾಪ ಕ್ಷಾಲನಕ್ಕಾಗಿ ಯಜ್ಞಮಾಡಬೇಕೆಂದು ಸಂಕಲ್ಪಿಸಿದನು. ಅವನಿಗೆ ಈ ಯಜ್ಞಕ್ಕೆ ಬ್ರಾಹ್ಮಣರು ಸಿಗಲಿಲ್ಲ. ಅವನು ಹದಿನಾಲ್ಕು ಗೋತ್ರಗಳುಳ್ಳ ಈ ಬ್ರಾಹ್ಮಣರನ್ನು ಸೃಷ್ಟಿಸಿದನೆಂದು ಐತಿಹ್ಯ ವಿದೆ. ಕೊಂಕಣದೇಶದ ನಾನಾ ಕಡೆಗಳಲ್ಲಿ ಕೃಷಿಕೆಲಸಗಳಲ್ಲಿ ಅಥವಾ ವೇದಾಧ್ಯಯನ ಅಧ್ಯಾಪನಗಳಲ್ಲಿ ಕಾಲಕಳೆಯುತ್ತಿದ್ದ ಚಿತ್ಪಾವನರು ಮಹಾ ರಾಷ್ಟ್ರದ ಆಧಿಪತ್ಯವನ್ನು ನಡೆಸಿದ ಪೇಶ್ವೆಯರ ಕಾಲದಲ್ಲಿ ಹೇಗೆ ಪ್ರಕಾಶಕ್ಕೆ ಬಂದರು? ಎಂಬುದು ಮಾನವ ವಂಶ ಶಾಸ್ತ್ರಜ್ಞರಿಗೂ ಒಂದು ಪರಿ ಶೋಧನೆಯ ಪ್ರಶ್ನೆಯಾಗಿದೆ. ಪಂಡಿತಾ ರಮಾಬಾಯಿಯ ಇಂಗ್ಲಿಷ್ ಚರಿತ್ರ ಲೇಖಕನಾದ ಡಾ. ನಿಕ್ಕಲ್ ಮೆಕ್ನಿಕಲ್ ಎಂಬಾತನು ಚಿತ್ಪಾವನ

ಜಾತಿಯ ವಿಷಯವಾಗಿ ತನ್ನ ಗ್ರಂಥದಲ್ಲಿ ಹೀಗೆ ಬರೆದಿರುವನು "ಈ ಜಾತಿಯು ತನ್ನ ಕಷ್ಟ ಸಹಿಷ್ಣುತೆ, ಕಾರ್ಯ ಕುಶಲತೆ, ಬುದ್ಧಿ ಚಾತುರ್ಯ ಮುಂತಾದ ಗುಣಗಳಿಂದ ಮರುಭೂಮಿಯನ್ನು ನಂದನವನವನ್ನಾಗಿ ಮಾಡಬಲ್ಲುದು. ಇವರು ಕೇವಲ ಕಲ್ಪನಾ ಸಾಮ್ರಾಜ್ಯದ ಸ್ವಪ್ನ ಸೃಷ್ಟಿಯಲ್ಲಿ ಸಂತೋಷಪಡುವುದರ ಬದಲಿಗೆ ಕಲ್ಪನೆಯ ಸ್ವಪ್ನವನ್ನು ಸಾಕಾರ ಮಾಡಿ ತೋರಿಸಬಲ್ಲರು."

1818ನೇ ಇಸವಿಯಲ್ಲಿ ಪೂನಾ ಪಟ್ಟಣದಲ್ಲಿ ಆಧಿಪತ್ಯವನ್ನು ನಡೆಸಿದ ಪೇಶ್ವೆಯರ ರಾಜ್ಯವು ಪರಿಸಮಾಪ್ತಿ ಹೊಂದಿದ ನಂತರ ಇಂಗ್ಲಿಷ್ ಕಂಪೆನಿ ಸರಕಾರವು ಈ ಚಿತ್ಪಾವನರನ್ನು ಭಯಸಂಶಯಗಳಿಂದಲೇ ನೋಡುತ್ತಿದ್ದರು. ಕಂಪೆನಿ ಸರಕಾರದ ಅಧಿಕಾರಿಗಳ ಗುಪ್ತರಿಪೋರ್ಟುಗಳಲ್ಲಿ ಈ ಜಾತಿಯ ಮುಖಂಡರ ಚಟುವಟಿಕೆಗಳ ಮೇಲೆ ವಿಶೇಷ ಕಟಾಕ್ಷವಿರತಕ್ಕ ಆವಶ್ಯಕತೆಯನ್ನು ನಮೂದಿಸಲಾಗುತ್ತಿತ್ತು. "ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು" ಎಂಬುದಾಗಿ ನಿರ್ಭಯವಾಗಿ ಬ್ರಿಟಿಷ್ ಸರಕಾರದೆದುರು ಘೋಷಿಸಿದ ಲೋಕಮಾನ್ಯ ತಿಲಕರು ಚಿತ್ಪಾವನರೇ. ತನ್ನ ಕುಶಾಗ್ರ ಬುದ್ಧಿಯಿಂದ ಬ್ರಿಟಿಷ್ ಸರಕಾರದ ಮೆಚ್ಚುಗೆ ಪಡೆದ ನ್ಯಾಯಮೂರ್ತಿ ಮಹಾದೇವ ಗೋವಿಂದ ರಾನಡೆಯವರು ಚಿತ್ಪಾವನರೇ. 1910ನೇ ಇಸವಿಯಲ್ಲಿ ಶತ್ರುಗಳ ಕೋಟೆಯಂತಿದ್ದ ಲಂಡನ್ ನಗರದಲ್ಲಿ ಇದ್ದು ಭಾರತದ ಪಾರತಂತ್ರ್ಯ ಶೃಂಖಲೆಯನ್ನು ಕಿತ್ತೊಗೆಯುವರೆ ಭಾರತೀಯ ಕ್ರಾಂತಿಕಾರಕರ ಕುಶಲ ನೇತೃತ್ವವನ್ನು ಮಾಡಿದ ವೀರ ಸಾವರಕರರು ಚಿತ್ಪಾವನರೇ. ಮಹಾರಾಷ್ಟ್ರದ ರಾಜಕೀಯ ಸಾಮಾಜಿಕ ರಂಗದಲ್ಲಿ ತನ್ನ ಉದಾರ ವಿಚಾರ ಪ್ರಣಾಲಿಯಿಂದ ಸಮುತ್ತೂಕವನ್ನು ಸಾಧಿಸಿದ ಗೋಪಾಲ ಕೃಷ್ಣ ಗೋಖಲೆಯವರು ಚಿತ್ಪಾವನರೇ.

ಬಾಳಾಜಿ ಬಾಜಿರಾವ್ ಪೇಶ್ವೆಯರ ಪೂರ್ವಕಾಲದಿಂದಲೂ ರತ್ನಾಗಿರಿ, ಗೋವಾ, ಕುಲಾಬಾ ಈ ಪ್ರಾಂತ್ಯಗಳಲ್ಲಿ ಕೋಕಣಸ್ತ (ಚಿತ್ಪಾವನ) ರಿಗೆ ಅಡಿಕೆ, ತೆಂಗು, ಬಾಳೆ, ಮಾವು ಇವೇ ಮೊದಲಾದ ತೋಟಗಾರಿಕೆಯ ಕೃಷಿಯೇ ಮುಖ್ಯವಾಗಿದ್ದಿತು. ಬಾಳಾಜಿ ಬಾಜಿರಾವ್ ಪೇಶ್ವೆಯವರ ಪೂರ್ವಿಕರಿಗೆ ಶ್ರೀ ವರ್ಧನ (ಕುಲಾಬಾ ಜಿಲ್ಲಾ) ದಲ್ಲಿ ಅಡಿಕೆ, ಬಾಗಾಯಿತು ಮತ್ತು ಕುಲಕರ್ಣಿತನ (ಶಾನುಭೋಗಿಕೆ) ಇತ್ತೆಂದು ಪೇಶ್ವೆಯವರ ಚರಿತ್ರೆಯಿಂದ ಗೊತ್ತಾಗುತ್ತದೆ. ಆಗಿನ ಬಜಾರಿನಲ್ಲಿ ಶ್ರೀ ವರ್ಧನದ ಅಡಿಕೆಗೆ ತುಂಬಾ ಬೇಡಿಕೆ ಇದ್ದಿತೆಂದೂ ಈ ಚರಿತ್ರೆಯಿಂದ ತಿಳಿಯುತ್ತದೆ.

ಚಿತ್ಪಾವನರಲ್ಲಿ ಸುಮಾರು ಮುನ್ನೂರು ಉಪ ಹೆಸರುಗಳಿದ್ದು ಇದರಲ್ಲಿ ನಾಲ್ವತ್ತೆಂಟು ಕುಲಗಳು ಸುಮಾರು ನಾಲ್ಕುನೂರ ಐವತ್ತು ವರ್ಷಗಳ ಹಿಂದೆ ಮಹಾರಾಷ್ಟ್ರದಿಂದ ಹೊರಟು ದ. ಕನ್ನಡದ ಮಲೆನಾಡು ಪ್ರಾಂತ್ಯದಲ್ಲಿ ಬಂದು ನೆಲಸಿದರು. ಪೋರ್ಚುಗೀಸರ ಧರ್ಮ ಮತ್ತು ರಾಜ್ಯ ವಿಸ್ತಾರಗಳ ವಿಪ್ಲವ ಕಾಲದಲ್ಲಿಯೇ ಈ ಮಹಾರಾಷ್ಟ್ರೀಯ ಚಿತ್ಪಾವನರು ದಕ್ಷಿಣ ದಿಕ್ಕಿಗೆ ಬಂದರು ಎಂದು ಊಹಿಸಲಾಗಿದೆ. ದ. ಕನ್ನಡದ ಮಲೆನಾಡು ಪ್ರದೇಶದಲ್ಲಿ ಆದಿ ವಾಸಿಗಳಾದ ಗಿರಿಜನರಿಂದ ತೋಟದ ಸ್ಥಳಗಳನ್ನು ಪಡಕೊಂಡು ರೂಪಿತ ಗೊಳಿಸಿ ಹೊಸತಾಗಿ ಬಂದ ಈ ಜನರು ವಸಾಹತುಗಳನ್ನು ನಿರ್ಮಿಸಿದರು.

ಹದಿನೆಂಟನೇಯ ಶತಮಾನದ ಅಂತ್ಯಭಾಗದಲ್ಲಿ ಕೃಷ್ಣ ಅನಂತ ಡೋಂಗ್ರೆ ಎಂಬ ವೇದಾಧ್ಯಯನ ಸಂಪನ್ನನೂ ಸದಾಚಾರಿಯೂ ಆದ ಚಿತ್ಪಾವನ ಬ್ರಾಹ್ಮಣನು ಮಾಳ ಹೇರಂಜಿಯಲ್ಲಿ ವಾಸವಾಗಿದ್ದನು. ಅಡಿಕೆ ತೋಟ ಮತ್ತು ಹೊಲಗದ್ದೆಗಳ ಕೃಷಿಯೇ ಇವನ ಜೀವನದ ಸಾಧನವಾಗಿ ದ್ದಿತು. ಕೃಷ್ಣ ಅನಂತ ಡೋಂಗ್ರೆಗೆ ರಾಮ, ಪರಮೇಶ್ವರ ಎಂಬಿಬ್ಬರು ಮಕ್ಕಳು. ಪರಮೇಶ್ವರ ಡೋಂಗ್ರೆಗೆ 1796ನೇ ಇಸವಿಯಲ್ಲಿ ಅನಂತ ನೆಂಬ ಪುತ್ರನು ಹುಟ್ಟಿದನು. ಇವನೇ ಪ್ರಕೃತ ಚರಿತ್ರೆಯ ಕಥಾವಸ್ತುವಾದ ಪಂಡಿತಾ ರಮಾಬಾಯಿಯ ಜನ್ಮದಾತನಾದ ಅನಂತ ಶಾಸ್ತ್ರಿ ಡೋಂಗ್ರೆ. ಅನಂತನು ಸಣ್ಣ ಪ್ರಾಯದಲ್ಲಿಯೇ ನಿರಾಲಸ್ಯ, ಸೂಕ್ಷ್ಮ ಬುದ್ಧಿ, ಜ್ಞಾಪಕ ಶಕ್ತಿ, ವಿಚಾರ ಪ್ರಜ್ಞೆ ಮುಂತಾದ ಒಳ್ಳೆಯ ಗುಣಗಳಿಂದ ಕೂಡಿದವನಾಗಿ ದ್ದನು. ತನ್ನ ಅಜ್ಜ ಕೃಷ್ಣ ಶಾಸ್ತ್ರಿಯ ಸಮೀಪ ವಿದ್ಯೆ ಕಲಿಯುವುದು, ಇನ್ನೊಂದೆಡೆ ತೋಟದ ಕೆಲಸದಲ್ಲಿ ಹಿರಿಯರಿಗೆ ಸಹಾಯಕನಾಗಿ ದುಡಿಯು ವುದು, ಇದೇ ಅನಂತ ಶಾಸ್ತ್ರಿಯ ಬಾಲ್ಯದ ಕೆಲಸವಾಗಿದ್ದಿತು. ಮುಂದೆ ಕೆಲಕಾಲದಲ್ಲಿ ಪಿತಾಮಹ ಕೃಷ್ಣ ಶಾಸ್ತ್ರಿಯು ತೀರಿಕೊಂಡನಂತರ ಅನಂತ ಶಾಸ್ತ್ರಿಗೆ ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ಸೌ. ಯಮುನಾ ಬಾಯಿ ಎಂಬ ಕನ್ಯೆಯೊಂದಿಗೆ ಪ್ರಥಮ ವಿವಾಹವು ಆಗಿನ ಪದ್ಧತಿಯಂತೆ—ಹಿರಿಯರ ನಿಶ್ಚಯದಂತೆ ನೆರವೇರಿತು. ಆದರೆ ವಿವಾಹದ ನಂತರ ಅನಂತ ಶಾಸ್ತ್ರಿಯು ಹೆಚ್ಚು ಸಮಯ ಮನೆಯಲ್ಲಿ ಇರಲಿಲ್ಲ. ಅನಂತರ ಶ್ರಿಂಗೇರಿ ಶಂಕರಾಚಾರ್ಯರ ಪೀಠದಲ್ಲಿ ವೇದ ವಿದ್ಯೆ, ಸಂಸ್ಕೃತ, ಕಲಿಯುವರೆ ಅನಂತ ಶಾಸ್ತ್ರಿಯು ಬಂದು ಸೇರಿದನು. ಆರು ವರ್ಷಗಳ ಪರ್ಯಂತ ಶ್ರಿಂಗೇರಿ ಪೀಠದಲ್ಲಿ ಅಧ್ಯಯನ

ಮಾಡಿ ಹದಿನೆಂಟನೇಯ ವಯಸ್ಸಿನಲ್ಲಿ ಆಗಿನ ಸಮಯದಲ್ಲಿ ವಿದ್ಯೆಯ ತವರು ಮನೆಯಂತಿದ್ದ ಮಹಾರಾಷ್ಟ್ರದ ಕೇಂದ್ರ ಸ್ಥಳವಾದ ಪೂಣಾ ಪಟ್ಟಣವನ್ನು ಅನಂತ ಶಾಸ್ತ್ರಿಯು ಸೇರಿದನು. ಆಗ ಎರಡನೇ ಬಾಜೀ ರಾಯನು ಪೇಶ್ವೆ ಯಾಗಿದ್ದನು. ಪೇಶ್ವೆಯವರ ರಾಜ ಪುರೋಹಿತನಾದ ರಾಮಚಂದ್ರ ಶಾಸ್ತ್ರೀ ಸಾಠೆ ಎಂಬಾತನು ಅನಂತ ಶಾಸ್ತ್ರೀಯ ಗುರುವಾಗಿದ್ದನು. ರಾಜ ಪುರೋಹಿತ ನಾದ ರಾಮಚಂದ್ರ ಶಾಸ್ತ್ರೀಯು ಪೇಶ್ವೆಯರ ಸ್ತ್ರೀಯರಿಗೆ ಸಂಸ್ಕೃತ ಸಾಹಿತ್ಯ ವನ್ನು ಕಲಿಸುವುದಕ್ಕಾಗಿ ನಿಯಮಿತನಾಗಿದ್ದನು. ಅನಂತ ಶಾಸ್ತ್ರಿಯು ತನ್ನ ಗುರುವಿನೊಂದಿಗೆ ಪೇಶ್ವೇ ದರ್ಬಾರಿನಲ್ಲಿ ನಿಕಟವರ್ತಿಯಾಗಿರು ತ್ತಿದ್ದನು.

೩. ಅನಂತ ಶಾಸ್ತ್ರಿಯ ವೈಭವೋನ್ನತಿ

ಹೀಗೆ ಅನಂತ ಶಾಸ್ತ್ರಿಯು ಕಾವ್ಯ, ತರ್ಕ ವ್ಯಾಕರಣಾದಿ ಸಾಹಿತ್ಯ ಭಾಗದಲ್ಲೂ ಪುರಾಣ ಧರ್ಮ ಶಾಸ್ತ್ರಗಳಲ್ಲೂ ಉಪನಿಷತ್ತುಗಳಲ್ಲೂ ಪ್ರವೀಣ ನಾದನು. ಪೇಶವೇ ಪತ್ನಿಯರೀಗೆ ಲೋಕರೂಢಿಗೆ ವಿರೋಧವಾಗಿ ಸಂಸ್ಕೃತ ವಿದ್ಯೆಯನ್ನು ತನ್ನಾಗುರುವು ಬೋಧಿಸುತ್ತಿದ್ದುದು ಸಮಂಜಸವೊ? ಎಂಬು ದಾಗಿ ಆಗ ಅನಂತ ಶಾಸ್ತ್ರಿ ತನ್ನಲ್ಲಿಯೇ ತರ್ಕಿಸಿದನು. ಆದರೆ ಪ್ರಾಚೀನ ಭಾರತದಲ್ಲಿ ಗಾರ್ಗಿ, ಮೈತ್ರೆಯಿ, ಸುಲಭಾ, ಲೋಪಾಮುದ್ರೆ, ಶಕುಂತಳಾ ಮುಂತಾದ ಆರ್ಯ ಸ್ತ್ರೀಯರು ದೇವ ಭಾಷೆಯಾದ ಸಂಸ್ಕೃತದಲ್ಲಿ ಉನ್ನತ ವಿದ್ಯಾಭ್ಯಾಸ ಪಡೆದು ನಾರೀ ಶಿರೋಮಣಿಗಳೆನಿಸಿದರು. ಆ ಸ್ತ್ರೀಯರಲ್ಲಿ ವೇದ ಋಚೆಗಳನ್ನು ತಯಾರಿಸುವಷ್ಟು ಯೋಗ್ಯತೆ ಇದ್ದುದು ಅನಂತ ಶಾಸ್ತ್ರಿಯ ಗೋಚರಕ್ಕೆ ಬಂದಿತು. ಹಾಗಾದರೆ ತಾನೂ ಸ್ವಗ್ರಾಮಕ್ಕೆ ಹೋಗಿ ತನ್ನ ಮನೆಯ ಸ್ತ್ರೀಯರಿಗೆ ಸಂಸ್ಕೃತವನ್ನು ಕಲಿಸಬೇಕೆಂಬುದಾಗಿ ಶಾಸ್ತ್ರಿ ಮಹಾಶಯನು ನಿಶ್ಚೈಸಿದನು.

1818ನೇ ಇಸವಿಯಲ್ಲಿ ಪೇಶ್ವೆಯರ ರಾಜ್ಯವು ನಷ್ಟವಾಗಿ ಎರಡನೇ ಬಾಜೀ ರಾಯನನ್ನು ಕಂಪೆನಿ ಸರಕಾರದವರು ಕಾನಪುರದ ಬಳಿ ಬಹ್ಮಾ ವರ್ತಕ್ಕೆ ಸ್ನಾನ ಸಂಧ್ಯಾದಿಗಳಲ್ಲಿ ಕಾಲಕಳೆಯಲಿಕ್ಕಾಗಿ ಕಳುಹಿಸಿದರು. ಅನಂತ ಶಾಸ್ತ್ರಿಯ ಗುರುಗಳೂ ಇತರ ಆಶ್ರಿತ ಜನರೂ ಬಾಜೀ ರಾಯನ ಒಟ್ಟಿಗೆ ಬ್ರಹ್ಮಾವರ್ತಕ್ಕೆ ಹೊರಟರು. ಈ ಸನ್ನಿವೇಶದಲ್ಲಿ ಅನಂತ ಶಾಸ್ತ್ರಿಯು

ಆ ಗುರುವು ತನ್ನ ಶಿಷ್ಯನಿಗೆ ಶಾಸ್ತ್ರಿ ಎಂಬ ಬಿರುದನ್ನು ಕೊಟ್ಟು ಗೌರವಿಸಿ ಸ್ವಗ್ರಾಮವನ್ನು ಕುರಿತು ಹೊರಡುವಂತೆ ನಿರೂಪ ಕೊಟ್ಟನು. ಅನಂತ ಶಾಸ್ತ್ರಿಯು ಹೀಗೆ ಪೂಣಾ ಪಟ್ಟಣದಿಂದ ಸ್ವಗ್ರಾಮವಾದ ಮೂಳ ಹೇರಂಜಿಗೆ ಬಂದು ಕೆಲಕಾಲ ಸಂಸಾರವನ್ನು ಹೂಡಿದನು. ತನ್ನ ತಂದೆಗೆ ತುಂಬಾ ಸಾಲವಾಗಿದ್ದುದನ್ನು ನೋಡಿ ಶಾಸ್ತ್ರಿಯು ದುಃಖಿತನಾದನು. ಅನಂತ ಶಾಸ್ತ್ರಿಗೆ ಒಂದು ಗಂಡು ಎರಡು ಹೆಣ್ಣು ಮಕ್ಕಳಾದರು. ತನ್ನ ತಂದೆಯು ಮಾಡಿಟ್ಟಿದ್ದ ಋಣಭಾರವನ್ನು ತೀರಿಸುವ ಉದ್ದೇಶದಿಂದ ಪುನಃ ಮನೆಯಿಂದ ಪ್ರಯಾಣ ಬೆಳೆಸಿ, ಮೈಸೂರು ಮಹಾರಾಜರ ಆಸ್ಥಾನವನ್ನು ಶಾಸ್ತ್ರೀ ಮಹಾಶಯನು ಸೇರಿದನು. ಆಗಿನ ಮೈಸೂರಿನ ಮಹಾ ರಾಜರು ವಿದ್ವಾಂಸರಿಗೆ ತನ್ನ ಆಸ್ಥಾನದಲ್ಲಿ ಗೌರವಯುಕ್ತವಾಗಿ ಆಶ್ರಯ ಕೊಡುತ್ತಿದ್ದರು. ಅನಂತ ಶಾಸ್ತ್ರಿಯ ಬಹುಶ್ರುತತ್ವ ಪಾಂಡಿತ್ಯ ಇತ್ಯಾದಿ ಗಳಿಗೆ ಮೆಚ್ಚಿದ ಆಗಿನ ಮಹಾರಾಜರು ಅನೇಕ ಧನ ಕನಕಾದಿಗಳನ್ನು, ಇಪ್ಪತ್ತ-ಐದು ಸಹಸ್ರ ರೂಪಾಯಿಗಳನ್ನೂ ಸಂಭಾವನೆ ಕೊಟ್ಟು ಅನಂತ ಶಾಸ್ತ್ರಿಯನ್ನು ಗೌರವಿಸಿದನು. ಹೀಗೆ ಮೈಸೂರಿನಲ್ಲಿ ಹತ್ತು ವರ್ಷಗಳ ಕಾಲ ಅನಂತ ಶಾಸ್ತ್ರಿಯು ಆಸ್ಥಾನ ಪಂಡಿತನಾಗಿದ್ದನು.

ಅನಂತರ ಅನಂತ ಶಾಸ್ತ್ರಿಯು ಸ್ವಗ್ರಾಮವನ್ನು ಕುರಿತು ಪ್ರಯಾಣ ಬೆಳೆಸಿ ತನ್ನ ಹಿರಿಯರು ಮಾಡಿಟ್ಟಿದ್ದ ಋಣಭಾರವನ್ನು ತೀರಿಸಿ ತನ್ನ ಮಕ್ಕಳ ಲಗ್ನಗಳನ್ನೂ ಪೂರೈಸಿ, ತನ್ನ ಮನೆಯವರನ್ನು ಕರೆದುಕೊಂಡು ಕಾಶೀ ಯಾತ್ರೆಗೆಂದು ಪುನಃ ಪ್ರಯಾಣ ಬೆಳೆಸಿದನು. ಆಗಿನ ಮುಂಬಯಿಯ ಗವರ್ನರನು ಶಾಸ್ತ್ರಿ ಮಹಾಶಯನಿಗೆ ಪ್ರಯಾಣದ ಪರವಾಗಿ ಪತ್ರವನ್ನೂ ಒಂದು ಪಲ್ಲಕಿ, ಎರಡು ಗಾಡಿ, ಮತ್ತು ಹನ್ನೆರಡು ಜನ ಸಿಪಾಯಿಗಳನ್ನೂ ಕಳುಹಿಸಿದ್ದನು. ಗವರ್ನರನ ಶಿಫಾರಸು ಪತ್ರದಲ್ಲಿ ಅನಂತ ಶಾಸ್ತ್ರಿಯನ್ನು ಒಳ್ಳೇ ಮರ್ಯಾದೆಯಿಂದ ಸ್ವಾಗತಿಸಬೇಕಾಗಿ ದೇಶೀಯ ರಾಜರುಗಳಿಗೆ ಮತ್ತೂ ಸರದಾರರಿಗೆ ಆದೇಶಕೊಡಲಾಗಿದ್ದಿತು. ಕಾಶೀ ಯಾತ್ರೆಯ ಪ್ರಯಾಣ ಸಮಯದಲ್ಲಿ ಅನಂತ ಶಾಸ್ತ್ರಿಯ ಹೆಂಡತಿ ಸೌ। ಯಮುನಾ ಬಾಯಿಯು ಸ್ವರ್ಗಸ್ಥಳಾದಳು. ಯಾತ್ರಾದಿಗಳನ್ನು ಪೂರೈಸಿದ ನಂತರ ತನ್ನ ಪರಿವಾರದವರನ್ನು ಮನೆಗೆ ಕಳುಹಿಸಿಕೊಟ್ಟು ಅನಂತ ಶಾಸ್ತ್ರಿಯು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಕಾಶಿಯಲ್ಲಿ ನಾಲ್ಕು ವರ್ಷಗಳ ಕಾಲ ನಿಂತನು.

ಕಾಶಿಯಲ್ಲಿ ಶಾಸ್ತ್ರಿ ಮಹಾಶಯನು ಆರು ದರ್ಶನ ಶಾಸ್ತ್ರಗಳಲ್ಲಿಯೂ ಪ್ರಾವೀಣ್ಯತೆಯನ್ನು ಸಂಪಾದಿಸಿದನು. ಈ ವರೇಗೆ ಅನಂತ ಶಾಸ್ತ್ರಿಯು ಶೈವಮತದವನಾಗಿದ್ದು ಅದ್ವೈತವಾದಿಯಾಗಿದ್ದನು, ಆದರೆ ದರ್ಶನ ಶಾಸ್ತ್ರದ ಅಭ್ಯಾಸದಿಂದ ಅವನ ಅದ್ವೈತವಾದದ ನಂಬಿಕೆಯು ನಷ್ಟವಾಯಿತು. ಭಗವಂತನ ಮತ್ತು ಪ್ರಾಣಿ ಸೃಷ್ಟಿಯ ಸೇವ್ಯ ಸೇವಕ ಭಾವವನ್ನು ಸಮರ್ಥಿಸುವ ವೈಷ್ಣವ ಮತದ ದೀಕ್ಷೆಯನ್ನು ಶಾಸ್ತ್ರಿಯು ಸ್ವೀಕರಿಸಿದನು.

ಮುಂದೆ ಅನಂತ ಶಾಸ್ತ್ರಿಯು ಕಾಶೀ ರಾಜನ ಆಸ್ಥಾನದಲ್ಲಿ ಕೆಲಕಾಲ ಇದ್ದು ಮಥುರಾ, ವೃಂದಾವನ, ಹರದ್ವಾರ, ಅಯೋಧ್ಯೆ ಮುಂತಾದ ಕಡೆಗಳಲ್ಲಿ ಸಂಚರಿಸಿ ನೇಪಾಳದ ಕಡೆಗೆ ಹೊರಟನು. ನೇಪಾಳದ ರಾಜನು ಶಾಸ್ತ್ರಿಯನ್ನು ಬಹಳವಾಗಿ ಗೌರವಿಸಿದನಲ್ಲದೆ ಆನೆ, ಕಸ್ತೂರಿ ಮೃಗ, ಅಸಂಖ್ಯ ದ್ರವ್ಯ ಇವುಗಳನ್ನೂ ರಾಜ ಮರ್ಯಾದೆಯ ಚಿಹ್ನೆಗಳನ್ನೂ ಕೊಟ್ಟನು. ನೇಪಾಳದಿಂದ ಏಕಾಕಿಯಾಗಿ ಹೊರಟು ದಕ್ಷಿಣ ದೇಶದ ಕಡೆಗೆ ಬರುತ್ತಾ 1840ನೇ ಇಸವಿಯಲ್ಲಿ ಪೈಠಣ ಎಂಬ ಊರಿನಲ್ಲಿ ಬಂದು ಅನಂತ ಶಾಸ್ತ್ರಿಯು ಕೆಲಕಾಲ ಕಳೆದನು. ದೈವಯೋಗದಿಂದ ಇದೇ ಸಮಯದಲ್ಲಿ ಕಾಶೀ ಯಾತ್ರೆಯ ಉದ್ದೇಶದಿಂದ ಹೊರಟ ಮಾಧವ ರಾವ್ ಅಭ್ಯಂಕರ ಎಂಬೊಬ್ಬ ಬ್ರಾಹ್ಮಣನು ಪೈಠಣದಲ್ಲಿಯೇ ತಂಗಿದ್ದನು. ಅವನೊಂದಿಗೆ ಒಂಭತ್ತು ವರ್ಷ ಪ್ರಾಯದ ಮಗಳೂ ಗರ್ಭಿಣಿಯಾದ ಹೆಂಡತಿ ಮತ್ತೂ ಇತರ ಪರಿವಾರವಿದ್ದಿತು. ಅನಂತ ಶಾಸ್ತ್ರಿಯಲ್ಲಿ ಸಹಜವಾಗಿರುತ್ತಿದ್ದ ವಿದ್ಯೆ, ರೂಪ, ಸಂಪತ್ತು, ಗಂಭೀರ ಸ್ವಭಾವ ಇತ್ಯಾದಿ ಗುಣಗಳು ಆ ಯಾತ್ರಿಕನಾದ ಬ್ರಾಹ್ಮಣನನ್ನು ಆಕರ್ಷಿಸಿದವು. ವಿಚಾರಿಸಲಾಗಿ ಅನಂತ ಶಾಸ್ತ್ರಿಯು ವಿಧುರನೆಂದೂ ತಿಳಿಯಿತು. ತನ್ನ ಒಂಭತ್ತು ವರ್ಷಗಳ ಬಾಲಿಕೆಯನ್ನು ಪರಿಗ್ರಹಿಸಬೇಕಾಗಿ ಆ ಬ್ರಾಹ್ಮಣನು ಅನಂತ ಶಾಸ್ತ್ರಿಯೊಡನೆ ಪ್ರಸ್ತಾಪಿಸಿದನು. ದೈವಯೋಗ ಒದಗಿ ಬಂದುದರಿಂದ ಅನಂತ ಶಾಸ್ತ್ರಿಯೂ ಅದಕ್ಕೆ ಒಪ್ಪಿದನು. ಹೀಗೆ ಪೈಠಣ ಮೊಕ್ಕಾಮಿನಲ್ಲಿ ಅನಂತ ಶಾಸ್ತ್ರಿಯ ದ್ವಿತೀಯ ವಿವಾಹವು ಸೌ। ಲಕ್ಷ್ಮೀ ಬಾಯಿಯೊಡನೆ ನೆರವೇರಿತು. ಇವಳೇ ಕಥಾನಾಯಿಕೆಯಾದ ಪಂ. ರಮಾಬಾಯಿಯ ಜನ್ಮದಾತೆಯಾದ ಸೌ। ಲಕ್ಷ್ಮೀ ಬಾಯಿ.

೪. ಮಾಳ ಹೇರಂಜಿಯಿಂದ ಗಂಗಾಮೂಲಕ್ಕೆ

ದ್ವಿತೀಯ ವಿವಾಹದ ಸಮಯ ಅನಂತ ಶಾಸ್ತ್ರಿಯ ವಯಸ್ಸು ನಾಲ್ವತ್ತ ನಾಲ್ಕಾಗಿತ್ತು. ತನ್ನ ಮಡದಿಯೊಂದಿಗೆ ಸ್ವಗ್ರಾಮವಾದ ಮಾಳ ಹೇರಂಜಿಗೆ ಶಾಸ್ತ್ರಿಯು ಬಂದು ಸೇರಿದನು. ಅನಂತ ಶಾಸ್ತ್ರಿಯ ವೃದ್ಧಮಾತೆಯು ತನ್ನ ಸೊಸೆಯನ್ನು ನೋಡಿ ಪರಮಾನಂದ ಪಟ್ಟಳೆಂದು ಹೇಳಬೇಕೇನು? ಅನಂತ ಶಾಸ್ತ್ರಿಯು ಹಳೆಯ ಸಂಪ್ರದಾಯದಲ್ಲಿ ಬೆಳೆದವನಾದರೂ ದೇಶ ಸಂಚಾರದ ವಿಶೇಷಾನುಭವ, ಸ್ವತಂತ್ರಬುದ್ಧಿಯಿಂದಾಗಿ ಅವನ ವರ್ತನೆಯಲ್ಲಿ ನವೀನತೆಯು ಕಂಡುಬರುತ್ತಿತ್ತು. ಭೂತಪ್ರೇತಗಳ ಆರಾಧನೆ, ಮಂತ್ರವಾದ ಮುಂತಾದ ಅಂಧಶ್ರದ್ಧೆಗಳನ್ನು ತೀವ್ರವಾಗಿ ಖಂಡಿಸುತ್ತಿದ್ದನಲ್ಲದೆ, ತನ್ನ ಮನೆಯಲ್ಲಿ ಕೂಡಾ ಇಂಥಾ ಮೂಢ ನಂಬಿಕೆಗಳನ್ನು ನಿಷೇಧಿಸಿದ್ದನು. ಸ್ತ್ರೀಯರನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಬಯಕೆಯನ್ನು ಈಗ ಕಾರ್ಯರೂಪಕ್ಕೆ ತಂದನು. “ಸ್ತ್ರೀಯರು ವಿದ್ಯೆ ಕಲಿಯಕೂಡದು. ಅದರಲ್ಲೂ ದೇವಭಾಷೆಯಾದ ಸಂಸ್ಕೃತವನ್ನೆಂತೂ ಸ್ವಪ್ನದಲ್ಲಿಯೂ ಓದಬಾರದು” ಎಂಬ ಭಾವನೆಯು ಸರ್ವತ್ರ ಪ್ರಚಾರದಲ್ಲಿದ್ದ ಆ ಕಾಲದಲ್ಲಿ ಅನಂತ ಶಾಸ್ತ್ರಿಯ ವರ್ತನೆಯು ನೆರೆಹೊರೆಯವರಿಂದಲೂ ಸ್ವಜನರಿಂದಲೂ ನಾನಾ ರೀತಿಗಳಲ್ಲಿ ದೋಷಾರೋಪಗಳನ್ನು ಹೊರಿಸುವುದಕ್ಕೆ ಆಸ್ಪದವಾಯಿತು. ಹೊರ ಪ್ರಪಂಚದ ಅರಿವು ಇಲ್ಲದ ಕೂಪಮಂಡೂಕಗಳಂತಿದ್ದ ಈ ಜನರು ಅನಂತ ಶಾಸ್ತ್ರಿಯನ್ನು ಬಹುವಾಗಿ ದ್ವೇಷಿಸತೊಡಗಿದರು. ಅನಂತ ಶಾಸ್ತ್ರಿಯು ಈ ಜನಗಳಿಗೆ “ಕರ್ತವ್ಯ ಅಕರ್ತವ್ಯಗಳ ಅರಿವು ನನ್ನ ಮಟ್ಟಿಗೆ ನನಗಿದೆ. ನಾನು ದೇವರಿಗೆ ಹೆದರಿ ನಡೆಯುವವನಲ್ಲದೆ ಸಮಾಜಕ್ಕೆ ಹೆದರುವವನಲ್ಲ. ಬೇಕಾದರೆ ನೀವು ನನ್ನ ಕೂಡೆ ವ್ಯವಹಾರವನ್ನು ಇಟ್ಟುಕೊಳ್ಳಿ ಅಥವಾ ಬಿಡಿ” ಎಂದು ಖಂಡತುಂಡವಾಗಿ ತಿಳಿಸಿದನು.

ತನ್ನ ಪತ್ನಿಗೆ ದೇವಭಾಷೆಯಾದ ಸಂಸ್ಕೃತವನ್ನು ಕಲಿಸುವ ಈ ವರ್ತಮಾನವು ಮಧ್ವಾಚಾರ್ಯರ ಪೀಠವಾದ ಉಡುಪಿಯ ತನಕ ಮುಟ್ಟಿತು. ಮಠಾಧಿಕಾರಿಗಳು ಅನಂತ ಶಾಸ್ತ್ರಿಯನ್ನು ಕರೆಸಿ ಈ ಧರ್ಮ ವಿರುದ್ಧವಾದ ವರ್ತನೆಯ ಕುರಿತು ವಿಚಾರಿಸಿದರು. ಇದಕ್ಕೆ ಶಾಸ್ತ್ರಿ ಮಹಾಶಯನು ನಾನು ಸಂಸ್ಕೃತವನ್ನು ಕಲಿಸುವುದು ನಿಜ. ಆದರೆ ಇದಕ್ಕೆ ಬೇಕಾದರೆ ಶಾಸ್ತ್ರಾಧಾರಗಳನ್ನು ತೋರಿಸಿ ಕೊಡುವುದಾಗಿ ಒಪ್ಪಿದನು. ಇದಕ್ಕೆ ಮಠಾಧಿಕಾರಿ

ಗಳು ಒಪ್ಪಿ ವಾದ-ವಿವಾದಕ್ಕೆ ಬೇಕಾದ ಅವಧಿಯನ್ನು ಕೊಟ್ಟು ಒಂದು ತರ್ಕ ಸಭೆಯನ್ನು ನಿಶ್ಚೈಸಿದರು.

ಕೆಲವು ದಿನಗಳ ನಂತರ ಶೀರೂರು ಎಂಬಲ್ಲಿ ಸಭೆಯು ಪ್ರಾರಂಭ ವಾಯಿತು. ಈ ವಾದವು ಬರಹ ಮೂಲಕ ಪ್ರಶ್ನೋತ್ತರ ರೂಪ ದ್ದಾಗಿದ್ದಿತು. ಕರ್ನಾಟಕದ ಮೂಲೆ ಮೂಲೆಗಳಿಂದಲೂ, ನಾಲ್ಕುನೂರು ಜನ ಶಾಸ್ತ್ರೀ ಪಂಡಿತರುಗಳು ಈ ತರ್ಕಸಭೆಯಲ್ಲಿ ಭಾಗವಹಿಸಿದ್ದರು. ಅನಂತ ಶಾಸ್ತ್ರಿಯು ಶ್ರುತಿ, ಸ್ಮೃತಿಗಳಿಂದಲೂ, ರಾಮಾಯಣ ಮಹಾಭಾರತ, ಮುಂತಾದ, ಇತಿಹಾಸಗಳಿಂದಲೂ, ಸ್ತ್ರೀಯರಿಗೆ ಸಂಸ್ಕೃತ ವಿದ್ಯೆ ಕಲಿಸ ಬಹುದಾಗಿ ಇದ್ದ ಆಧಾರಗಳನ್ನು ಬರೆದುಕೊಟ್ಟನು. ಶಾಸ್ತ್ರಿಯು ಹೀಗೆ, ತರ್ಕ ಸಭೆಯಲ್ಲಿ ವಿಜಯಿಯಾದನು. ಪ್ರಶ್ನೋತ್ತರ ರೂಪವಾದ ಆ ದಿನದ ತರ್ಕದ ಲೇಖನಕ್ಕೆ ಮಠದ ಕಡೆಯಿಂದ ವಿದ್ವಾಂಸರು ಸ್ವಾಕ್ಷರಿಯನ್ನು ಹಾಕಿದರು. ಮುಂದೆ ಅನೇಕ ವರ್ಷಗಳ ವರೆಗೆ ಅನಂತ ಶಾಸ್ತ್ರಿಯು ಈ ಲೇಖನವನ್ನು ಸಂಗ್ರಹಿಸಿ ಇಟ್ಟಿದ್ದರಿಂದು ಪಂ. ರಮಾಬಾಯಿಯು ತನ್ನ ಆತ್ಮ ಕಥನದಲ್ಲಿ ಬರೆದಿದ್ದಾಳೆ.

ಮುಂದೆ ಕೆಲವು ಕಾಲದ ನಂತರ ಅನಂತ ಶಾಸ್ತ್ರಿಯ ವೃದ್ಧಮಾತೆಯು ಸ್ವರ್ಗಸ್ಥಳಾದಳು. ತಾಯಿಯ ಕ್ರಿಯಾಕರ್ಮಗಳನ್ನು ಮುಗಿಸಿ ಅನಂತ ಶಾಸ್ತ್ರಿಯು ತನ್ನ ತೋಟ ಜಮೀನುಗಳನ್ನು ತನ್ನ ಹಿರಿಯ ಹೆಂಡತಿಯ ಮಕ್ಕಳಾದ ರಾಮಕೃಷ್ಣ ಶಾಸ್ತ್ರಿಗೂ, ರುಖುಮಾಬಾಯಿಗೂ, ಹಂಚಿಕೊಟ್ಟು ಏಕಾಂತ ವಾಸಕ್ಕೆಂದು, ಗಂಗಾಮೂಲಕ್ಕೆ ಲಕ್ಷ್ಮೀಬಾಯಿಯೊಂದಿಗೆ ಹೊರಟು ತುಂಗಾ ನದಿಯ ಸಮೀಪ, ರಮಣೀಯವಾದ ಒಂದು ಸ್ಥಳಕ್ಕೆ ಬಂದನು. ಹುಲಿರಾಯರು ಅದೇ ದಿನ ಈ ದಂಪತಿಗಳು, ವಿಶ್ರಮಿಸಿದ ಸ್ಥಳಕ್ಕೆ ಆರ್ಭಟಿ ಸುತ್ತಾ ಬಂದರು. ಶಾಸ್ತ್ರಿಯು, ಒಣ ಕಟ್ಟಿಗೆಗಳನ್ನು ರಾಶಿ ಹಾಕಿ, ಬೆಂಕಿ ಯನ್ನುರಿಸಿ, ತನ್ನ ಮಡದಿಗೆ ಧೈರ್ಯಕೊಟ್ಟು ಹೇಗೋ ಅಂದಿನಿರುಳನ್ನು ಕಳೆದನು. ಮರುದಿನದಿಂದಲೇ, ಊರಿನಿಂದ ಜನರನ್ನು ತರಿಸಿ, ವಾಸಿಸಲು ಯೋಗ್ಯವಾದ ಮನೆಯನ್ನು ನಿರ್ಮಾಣ ಮಾಡಿಸಲಿಕ್ಕೆ ಶುರುಮಾಡಿದನು. ತನ್ನ ಸೇವಕರಿಗೂ ಯಾತ್ರಾರ್ಥಿಗಳಿಗೂ, ಗುಡಿಸಲುಗಳನ್ನು ಕಟ್ಟಿಸಿದನು. ಕೆಲವೇ ದಿನಗಳಲ್ಲಿ, ಅಲ್ಲಿಗೆ ಅನೇಕ ವಿದ್ಯಾರ್ಥಿಗಳು, ಬಂದು ಸೇರಿದರು. ಯಾತ್ರಿಕರೂ, ಈಗ ಹೆಚ್ಚು ಹೆಚ್ಚಾಗಿ ಬರತೊಡಗಿದರು. ಬರಬರುತ್ತಾ

ಗಂಗಾಮೂಲವು ಒಂದು ಊರಿನ ರೂಪ ತಾಳಿತು. ನೂರಇಪ್ಪತ್ತೈದು ಜಾನುವಾರುಗಳು ಏಳು, ಎಂಟು, ಕೆಲಸಗಾರರ ಮನೆಗಳು, ಅನೇಕ ವಿದ್ಯಾರ್ಥಿಗಳು ಹೀಗೆ ಪರಿವಾರವಿದ್ದಿತು.

ಅನಂತ ಶಾಸ್ತ್ರಿಯ, ಈ ಆಶ್ರಮ ವಾಸವು, ಹನ್ನೆರಡು ವರ್ಷಗಳ ಕಾಲ ನಡೆಯಿತು. ಆಗ ಲಕ್ಷ್ಮೀಬಾಯಿಯ ವಯಸ್ಸು ಬರೇ ಹದಿನಾರು ಆಗಿತ್ತು. ಲಕ್ಷ್ಮೀಬಾಯಿಗೆ ಸಂಸ್ಕೃತ ಸಾಹಿತ್ಯದಲ್ಲಿಯೂ, ಮಹಾಭಾರತ, ರಾಮಾಯಣ ಮುಂತಾದ ಪುರಾಣ ಗ್ರಂಥಗಳಲ್ಲಿಯೂ, ಪ್ರಾವೀಣ್ಯತೆಯನ್ನು ಹೊಂದುವಷ್ಟು, ವಿದ್ಯಾಭ್ಯಾಸವು ಸಾಗಿತು. ಕಾವ್ಯ, ವ್ಯಾಕರಣ, ತರ್ಕ, ಮೀಮಾಂಸಗಳಲ್ಲಿ ಇತರರಿಗೆ ಪಾಠ ಹೇಳುವಷ್ಟು ಸಾಮರ್ಥ್ಯವು ಲಕ್ಷ್ಮೀಬಾಯಿಗೆ ಇದ್ದಿತು. ಯಾತ್ರಾರ್ಥಿಗಳೂ, ನೆಂಟರಿಷ್ಟರೂ, ಈ ಆಶ್ರಮದಲ್ಲಿ ಅನೇಕ ದಿನಗಳ ವರೆಗೆ, ಆದರಾತಿಥ್ಯಗಳನ್ನು ಪಡೆದು ಹೋಗುತ್ತಿದ್ದರು. ಲಕ್ಷ್ಮೀಬಾಯಿಯು ಇಷ್ಟು ಮಂದಿಗೂ ಆಹಾರಪಾನೀಯಗಳನ್ನು ಸಕಾಲಕ್ಕೆ ಒದಗಿಸಿಕೊಡುತ್ತಿದ್ದಳು. ಉಳಿದ ಸಮಯದಲ್ಲಿ, ಆಶ್ರಮದ ಹೂ ತೋಟ, ತರಕಾರಿಯ ತೋಟದಲ್ಲಿ ತನ್ನ ಪತಿಗೆ ಸಹಾಯವಾಗಿ ದುಡಿಯುತ್ತಿದ್ದಳು. ಈ ದಂಪತಿಗಳು ಪುರಾಣ ಕಾಲದ ಅರುಂಧತಿ ವಸಿಷ್ಠರಂತೆ ತೋರಿಬರುತ್ತಿದ್ದರು.

ಸೌ। ಲಕ್ಷ್ಮೀಬಾಯಿಗೆ ಒಟ್ಟು ಆರು ಮಂದಿ ಮಕ್ಕಳು ಹುಟ್ಟಿದರು. ಇವರಲ್ಲಿ ಮೂವರು ಬಾಲ್ಯದಲ್ಲಿಯೇ ಮೃತ್ಯುವಶರಾದರು. ಉಳಿದವರು, ಕೃಷ್ಣಾಬಾಯಿ, ಶ್ರೀನಿವಾಸ, ರಮಾಬಾಯಿ. ಲಕ್ಷ್ಮೀಬಾಯಿಯ ಕೊನೆಯ ಕೂಸಾದ ಪಂಡಿತಾ ರಮಾಬಾಯಿಯು 1858ನೇ ಇಸವಿಯ ಎಪ್ರಿಲ್ ಮಾಸದಲ್ಲಿ 23ನೇ ತಾರೀಕಿಗೆ ಹುಟ್ಟಿದರು. ಈ ಹನ್ನೆರಡು ವರ್ಷಗಳ ದೀರ್ಘ ಕಾಲದಲ್ಲಿ ಲಕ್ಷ್ಮೀಬಾಯಿಯ ವಿದ್ಯಾಭ್ಯಾಸವು ತಕ್ಕ ಮಟ್ಟಿಗೆ ಪೂರೈಸಿದುದರಿಂದಲೂ, ಗಂಗಾಮೂಲಕ್ಕೆ ಬಂದು ಸೇರುವಾಗ, ಇದ್ದ ನೂರ-ಎಪ್ಪತ್ತೈದು, ಸಹಸ್ರ ರೂಪಾಯಿಗಳಷ್ಟು ದ್ರವ್ಯವನ್ನು ಮಿತವ್ಯಯವನ್ನರಿಯದೆ ಖರ್ಚು ಮಾಡಿದುದರಿಂದಲೂ, ಇನ್ನು ಗಂಗಾಮೂಲದಲ್ಲಿ ಇರುವುದು ಅನಂತ ಶಾಸ್ತ್ರಿಗೆ ಅಸಾಧ್ಯವಾಯಿತು. ಸಂಸಾರ ಪೋಷಣೆಗೆ ಏನಾದರೂ ಸಂಪಾದನೆ ಮಾಡಿ ನಿರ್ವಹಣೆ ಮಾಡಬೇಕಾಗಿ ಬಂತು. ಒಂದು ದಿನ ಆರು ತಿಂಗಳ ಕೂಸಾದ ರಮಾಬಾಯಿಯನ್ನು ತೊಟ್ಟಿಲಲ್ಲಿ ಇಟ್ಟು ಸೇವಕನಿಂದ ಹೊರಿಸಿಕೊಂಡು ಎಲ್ಲರೂ ಗಂಗಾಮೂಲದಿಂದ ಹೊರಟರು.

೫. ರಮಾಬಾಯಿಯ ಬಾಲ್ಯ

ಗಂಗಾಮೂಲವನ್ನು ಬಿಟ್ಟುಬಂದ ಈ ಸಂಸಾರವು ಮುಂದೆ, ತೀರ್ಥ ಯಾತ್ರೆಗೆ ಹೊರಟಿತು. ಒಂದೊಂದು ಊರಿನಲ್ಲಿ ನಾಲ್ಕಾರು ತಿಂಗಳು ಹೆಚ್ಚೆಂದರೆ ಒಂದು ವರ್ಷದ ವರೆಗೆ ಇವರು ದೇವಸ್ಥಾನವನ್ನೋ, ಅಥವಾ ಛತ್ರಗಳನ್ನೋ ಆಶ್ರಯಿಸುತ್ತಿದ್ದರು. ಈ ಅವಧಿಯಲ್ಲಿ ಪುರಾಣ ಪಠಣ, ಉಪನ್ಯಾಸಾದಿಗಳನ್ನು ಮಾಡಿ ಇದರಿಂದ ಬರುತ್ತಿದ್ದ ಸಂಭಾವನೆಯಿಂದ ಇವರ ಜೀವನ ಸಾಗುತ್ತಿತ್ತು. ಲಕ್ಷ್ಮೀಬಾಯಿಯು ತನ್ನ ಮೃದು ಮಧುರ ವಾಣಿಯಿಂದ ಭಾಗವತ, ರಾಮಾಯಣಗಳ ಶ್ಲೋಕಗಳನ್ನು ಓದುತ್ತಿದ್ದುದೂ ಅನಂತ ಶಾಸ್ತ್ರಿಯು ತನ್ನ ಅಪೂರ್ವವಾದ ವರ್ಣನಾ ಪದ್ಧತಿಯಿಂದ ದೇಶ ಭಾಷೆಯಲ್ಲಿ ಈ ಶ್ಲೋಕಗಳ ಅರ್ಥ ಹೇಳುತ್ತಿದ್ದುದೂ ಕೇಳುವವರಿಗೆ ಅತ್ಯಾನಂದವನ್ನುಂಟುಮಾಡುತ್ತಿದ್ದಿತು. ಚಿಕ್ಕ ಮಗು ರಮಾಬಾಯಿಗೆ, ಲಕ್ಷ್ಮೀಬಾಯಿಯು ದೇವತೆಯರ ಸ್ತೋತ್ರಗಳನ್ನೂ ಅಮರವನ್ನೂ ಕಲಿಸ ಲಾರಂಭಿಸಿದಳು. ಅಲ್ಲದೆ ಪುರಾಣೋಕ್ತಗಳಾದ ಧ್ರುವ, ಪ್ರಹ್ಲಾದ, ಸೀತೆ, ಸಾವಿತ್ರೀ ಇತ್ಯಾದಿ ಪುಣ್ಯಶೀಲರ ಚರಿತ್ರೆಗಳನ್ನು ಚಿಕ್ಕ ರಮಾಬಾಯಿಗೆ ಕಥಾರೂಪವಾಗಿ ಬಾಯಿಪಾಠ ಮಾಡಿಸಿದಳು. ರಮಾಬಾಯಿಗೆ ಎಂಟನೆಯ ವಯಸ್ಸು ಆದೊಡನೆಯೇ ಅನಂತ ಶಾಸ್ತ್ರಿಯು ಕ್ರಮವಾಗಿ ವ್ಯಾಕರಣ, ಕಾವ್ಯ, ನಾಟಕಾದಿಗಳನ್ನು ಬೋಧಿಸತೊಡಗಿದನು. ಹೀಗೆ ರಮಾಬಾಯಿಗೆ ಹದಿನೈದು ವರ್ಷ ತುಂಬಿದ ವೇಳೆಗೆ, ಸಂಸ್ಕೃತದಲ್ಲಿ, ಮಾತನಾಡಲಿಕ್ಕೂ, ಪುರಾಣಾದಿಗಳನ್ನು ಓದಿ ಅರ್ಥಮಾಡಿಕೊಳ್ಳುವಷ್ಟು ಸಾಮರ್ಥ್ಯ ಬಂದಿತು.

ಹೀಗೆ ಈ ಕುಟುಂಬವು ಊರಿಂದೂರಿಗೆ ಭ್ರಮಣ ಮಾಡುತ್ತಾ 1863ರ ಸುಮಾರಿಗೆ ಕುಮಟಾ ಮಾರ್ಗವಾಗಿ ಮುಂಬಯಿಗೆ ತಲುಪಿತು. ಮುಂಬಯಿಯಲ್ಲಿ ತೆಗೆದ ಶಾಸ್ತ್ರೀ ಕುಟುಂಬದ ಒಂದು ಛಾಯಾ ಚಿತ್ರವು ಈಗಲೂ ಉಪಲಬ್ಧವಿರುತ್ತದೆ. ಈ ಫೋಟೋದಲ್ಲಿ ಅನಂತ ಶಾಸ್ತ್ರಿ, ಸೌ। ಲಕ್ಷ್ಮೀಬಾಯಿ, ಶ್ರೀನಿವಾಸ, ಕೃಷ್ಣಾಬಾಯಿ, ಮತ್ತು ರಮಾ ಇವರನ್ನು ಕಾಣಬಹುದು. ಈ ಛಾಯಾಚಿತ್ರವು ಡೋಂಗ್ರೇ ಕುಲ ವೃತ್ತಾಂತ ಎಂಬ ಪುಸ್ತಕದಲ್ಲಿ ಇದೆ. ಈ ಸಮಯ, ಅಂದರೆ, 1863ರ ಹೊತ್ತಿಗೆ ಸೂರ್ಯಕಿರಣ ಶಕ್ತಿಯಿಂದ ಫೋಟೊ ತೆಗೆಯುವ ಕಾರಖಾನೆಗಳು ಶುರು ಆಗಿದ್ದು ಹೀಗೆ ಫೋಟೊ ತೆಗೆಯುವ ಕಸಬುದಾರರು ಮುಂಬಯಿಯಲ್ಲಿ 30–40 ಮಂದಿ ಇದ್ದರೆಂದು ಆಧಾರದಿಂದ ತಿಳಿಯುತ್ತದೆ.

1864ನೇ ಇಸವಿಯಲ್ಲಿ ಅನಂತ ಶಾಸ್ತ್ರಿಯ ಕುಟುಂಬವು ಬೆಂಗಳೂರಿಗೆ ಬಂದು ಬಿಡಾರ ಮಾಡಿತು. ಆಗ ಕೃಷ್ಣಾಬಾಯಿಯ ವಯಸ್ಸು ಹದಿನಾಲ್ಕು, ಶ್ರೀನಿವಾಸನಿಗೆ ಹದಿನೆರಡು ವರ್ಷ, ಚಿಕ್ಕ ರಮೆಗೆ ಆರು ವರ್ಷಗಳಾಗಿದ್ದವು. ಅನಂತ ಶಾಸ್ತ್ರಿಯು ಸಮಯ ಸಿಕ್ಕಿದಾಗ ಮಕ್ಕಳಿಗೆ ವಿದ್ಯಾಭ್ಯಾಸ ಮಾಡು ತ್ತಿದ್ದನು. ಕೊನೆಯ ಕೂಸಾದ ರಮೆಯ ಮೇಲೆ ಅನಂತ ಶಾಸ್ತ್ರಿಗೆ ಹೆಚ್ಚು ಮಮತೆ ಇರುತ್ತಿದ್ದ ಕಾರಣ ಅವಳು ಅವರ ಬಳಿಯಲ್ಲಿಯೇ ಯಾವಾಗಲೂ ಇದ್ದು ತನ್ನ ಅಕ್ಕನಿಗೂ, ಅಣ್ಣನಿಗೂ ಹೇಳಿಕೊಡುತ್ತಿದ್ದ ಪಾಠಗಳನ್ನು ಕಿವಿ ಗೊಟ್ಟು ಕೇಳುತ್ತಿದ್ದಳು. ಇದರ ಅರ್ಥಬೋಧವು ಇವಳಿಗೆ ಆಗುತ್ತಿಲ್ಲ ವಾದರೂ, ತೀವ್ರವಾದ ಗ್ರಹಣಶಕ್ತಿಯಿಂದ ತಂದೆಯು ಹೇಳಿಕೊಡುತ್ತಿದ್ದ ಪಾಠಗಳನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳುತ್ತಿದ್ದಳು. ಕೆಲವೇ ದಿನಗಳಲ್ಲಿ ಅನಂತ ಶಾಸ್ತ್ರಿಯ ಖ್ಯಾತಿಯು ಬೆಂಗಳೂರಿನಲ್ಲೆಲ್ಲ ಹಬ್ಬಿತು. ಒಬ್ಬ ದೊಡ್ಡ ವಿದ್ವಾಂಸನು ಇಲ್ಲಿಗೆ ಬಂದಿರುವನೆಂದೂ ಇವನು ತನ್ನ ಮನೆಯಲ್ಲಿ ಸ್ತ್ರೀಯರಿಗೂ ಕೂಡಾ ಸಂಸ್ಕೃತ ವಿದ್ಯೆಯನ್ನು ಕಲಿಸುತ್ತಿರುವನೆಂದೂ, ಅಲ್ಲದೆ ಉಡುಪಿಯ ವಾದ ಸಭೆಯಲ್ಲಿ 400 ಜನ ಪಂಡಿತರನ್ನು ಇವನು ವಾದದಲ್ಲಿ ಗೆದ್ದಿರುವುದಾಗಿಯೂ ಅಲ್ಲಿಯ ಜನರಲ್ಲಿ ಸುದ್ದಿ ಹಬ್ಬಿತು. ಅನಂತ ಶಾಸ್ತ್ರಿಯ ಮನೆಯಲ್ಲಿ ಅನೇಕ ವಿದ್ವಾಂಸರು ಬಂದು ಸ್ತ್ರೀಯರಿಗೆ ಸಂಸ್ಕೃತ ವಿದ್ಯೆ ಕಲಿಸುವ ವಿಚಾರವಾಗಿ ವಾದ ಮಾಡಿ ಸೋತುಹೋಗುತ್ತಿದ್ದರು. ಈ ವಿದ್ವಾಂಸರ ವಾದವು ವ್ಯೋಮ ಸಂಹಿತೆಯ ಆಧಾರ ಶ್ಲೋಕವನ್ನು ಉಚ್ಚರಿಸುವಾಗ ಮುಕ್ತಾಯವಾಗು ತ್ತಿದ್ದಿತು. ವಾದ ವಿವಾದವು ಆಗಲೇ ಮುಗಿಯಿತೆಂದು ಚಿಕ್ಕ ವಯಸ್ಸಿನ ರಮೆಗೆ ಖಾತ್ರಿಯಾಗುತ್ತಿದ್ದಿತು.

॥ ಸ್ತ್ರೀ ಶೂದ್ರಬ್ರಹ್ಮಬಂಧೂನಾಂ । ತಂತ್ರಜ್ಞಾನೇಧಿಕಾರಿತಾ ॥

॥ ಏಕದೇಶೇ ಪರೋಕ್ಷೆ ತು । ನತು ಗ್ರಂಥಪುರಸ್ಸರಂ ॥

ತಾತ್ಪರ್ಯ: ಸ್ತ್ರೀಯರಿಗೂ, ಶೂದ್ರರಿಗೂ, ಕರ್ಮಬಾಹಿರರಾದ ಬ್ರಾಹ್ಮಣರಿಗೂ, ವೇದಗಳ ಹೊರತಾಗಿ ಧರ್ಮಶಾಸ್ತ್ರ ಗ್ರಂಥಗಳನ್ನು ಓದಿ ಅರ್ಥಮಾಡಿಕೊಳ್ಳುವ ಅಧಿಕಾರವಿದ್ದವರಿಂದ ಮಾತ್ರ ಇಂಥವರು ಉಪದೇಶ ವನ್ನು ಪಡೆಯಬಹುದು.

ಒಂದಾನೊಂದು ದಿನ ವಾಸುದೇವಾಚಾರ್ಯರೆಂಬವರು ಅನಂತ ಶಾಸ್ತ್ರಿಯವರ ಮನೆಗೆ ಬಂದು ಬಹಳ ಹೊತ್ತಿನ ವರೆಗೂ ವಿಚಾರ ವಿನಿಮಯ ಮಾಡಿದರು. ಹೊರಡುವಾಗ ಅನಂತ ಶಾಸ್ತ್ರಿಯನ್ನೂ, ಲಕ್ಷ್ಮೀಬಾಯಿಯನ್ನೂ ನಮಸ್ಕರಿಸಿ ಹೋದರು. ಈ ದಿನದ ಮಾತುಕತೆಯಲ್ಲಿ ಸೌಮ್ಯ ವಾತಾವರಣ ವನ್ನೂ ವ್ಯೋಮ ಸಂಹಿತೆಯ ಮೇಲಿನ ಶ್ಲೋಕದ ಪಾರಾಯಣದ ಅಭಾವ ವನ್ನೂ ನೋಡಿ ಚಿಕ್ಕ ವಯಸ್ಸಿನ ರಮೆಗೆ ಈ ಆಗಂತುಕ ಶಾಸ್ತ್ರಿಗಳು, ಹೆಚ್ಚು ತಿಳಿದವರಲ್ಲವೆಂಬ ಕಲ್ಪನೆಯುಂಟಾಯಿತು. ಈ ಸಂದೇಹವನ್ನು ಚಿಕ್ಕ ವಯಸ್ಸಿನ ರಮೆಯು, ಲಕ್ಷ್ಮೀಬಾಯಿಯ ಸಮೀಪ ಬಂದು ಕೇಳದೆ ಇರಲಿಲ್ಲ. ಮನೆಯಲ್ಲಿ ಯಾರೂ ಇಲ್ಲದ ಸಮಯ ರಮೆಯು ಲಕ್ಷ್ಮೀಬಾಯಿಯನ್ನು ಪ್ರಶ್ನಿಸಿದಳು:

ರಮೆ: ಅಮ್ಮಾ, ಈ ದಿನ ನಮ್ಮಲ್ಲಿ ಬಂದ ಗೃಹಸ್ಥರು ಯಾರು?

ಲಕ್ಷ್ಮೀಬಾಯಿ: ಅವರ ಹೆಸರು ವಾಸುದೇವಾಚಾರ್ಯರು ನಿನ್ನ ತಂದೆಯವರನ್ನು ಕಾಣಲು ಬಂದಿದ್ದರು.

ರಮೆ: ಅಮ್ಮಾ, ಆದರೆ ಅವರು ಹೆಚ್ಚು ತಿಳಿದವರಲ್ಲ ಎಂದು ಕಾಣುತ್ತದೆ.

ಲಕ್ಷ್ಮಿ: ಇಲ್ಲ, ಮಗೂ! ಅವರು ದೊಡ್ಡ ವಿದ್ವಾಂಸರು.

ರಮೆ: ಹಾಗಾದರೆ ಅವರು ವ್ಯೋಮಸಂಹಿತೆಯ ಶ್ಲೋಕವನ್ನು ಏಕೆ ಪಠನಮಾಡಲಿಲ್ಲ.

ಲಕ್ಷ್ಮಿ: ಆಹಾ! ಹುಚ್ಚಳೇ, ಅವರು ತುಂಬಾ ಓದಿದವರು, ವ್ಯೋಮ ಸಂಹಿತೆಗಿಂತಲೂ ಹೆಚ್ಚು, ಶಾಸ್ತ್ರಗಳನ್ನು ಓದಿದವರು. ಅವರೂ ನಿನ್ನ ತಂದೆಯವರೂ ಏಕಾಭಿಪ್ರಾಯವುಳ್ಳವರು.

ರಮೆ: ಆದರೆ, ಅಮ್ಮಾ! ಅವರು ಹೊರಡುವಾಗ ನಿಮ್ಮನ್ನೂ ನಮಸ್ಕರಿಸಿ, ಯಾಕೆ ಹೋದರು? ಬೇರೆ ಯಾರೂ ಈ ವರೆಗೆ ನಿಮ್ಮನ್ನು ನಮಸ್ಕರಿಸಿ ಹೋದುದಿಲ್ಲ. ಅದಕ್ಕಾಗಿಯೇ ನಾನು ಅವರನ್ನು ಹೆಚ್ಚು ಓದಿದವರೆಂದು ಭಾವಿಸುವುದಿಲ್ಲ.

ಲಕ್ಷ್ಮಿ: ಮಗಳೇ, ತುಂಬಿದ ಕೊಡ ತುಳುಕುವುದಿಲ್ಲ; ಯಾರು ನಿಜವಾದ ವಿದ್ಯಾವಂತರೋ, ಅವರು ಬಹಳ ನಮ್ರರಿರುತ್ತಾರೆ, ಅಂಥವರು ಸ್ತ್ರೀಯರಿಗೂ, ಸಮಾನವಾದ ಮರ್ಯಾದೆ ಕೊಡುತ್ತಾರೆ. ವಾಸುದೇವಾ

ಚಾರ್ಯರಲ್ಲಿ, ಒಣ ಅಭಿಮಾನವಿಲ್ಲದ ಕಾರಣ, ಅವರು ನನ್ನನ್ನೂ ನಮಸ್ಕರಿಸಿ ಹೋದರು. ಮನುಷ್ಯರಲ್ಲಿ ಹೀಗೆ ನಮ್ರತೆ ಇರಬೇಕು.

ಆ ದಿನದಿಂದ ವಿದ್ವಾಂಸರ ನಿಜವಾದ ಯೋಗ್ಯತೆಯನ್ನು ತಿಳಿದು ಕೊಳ್ಳುವ ಜ್ಞಾನವು ರಮಾಬಾಯಿಗೆ ಉಂಟಾಯಿತು.

ಅನಂತ ಶಾಸ್ತ್ರಿಯು ಬೆಂಗಳೂರಿನಲ್ಲಿ ಬಾಡಿಗೆಗೊಂದು ಬಿಡಾರವನ್ನು ವಹಿಸಿಕೊಂಡು ಇರುತ್ತಿದ್ದನು. ಆ ಮನೆಯ ಒಡೆಯರು ತನ್ನ ಒಬ್ಬ ಮಗಳನ್ನು ಗಂಡನ ಮನೆಯಿಂದ ತವರು ಮನೆಗೆ ಕರೆದುಕೊಂಡು ಬಂದಿದ್ದರು. ಇವಳಿಗೆ ರಮಾಬಾಯಿಯ ಸಮವಯಸ್ಕಳಾದ ತಿಪ್ಪಿ ಎಂಬ ಮಗಳಿದ್ದಳು. ಇವಳು ಯಾವಾಗಲೂ, ಹೆಚ್ಚು ಚಿನ್ನಾಭರಣಗಳನ್ನು ಧರಿಸಿಕೊಳ್ಳುತ್ತಿದ್ದಳು. ಒಂದು ದಿನ ತಮಾಷೆಗಾಗಿ ತಿಪ್ಪಿಯ ತಾಯಿಯು ಮೈ ಮೇಲಿನ ಒಡವೆಗಳನ್ನು ರಮಾ ಬಾಯಿಗೆ ತೊಡಿಸಿದಳು. ರಮಾಬಾಯಿಯು ಸಂತೋಷಭರಿತಳಾಗಿ ಕುಣಿ ಯುತ್ತ ಈ ಆಭರಣಗಳನ್ನು ತಾಯಿಯಾದ ಲಕ್ಷ್ಮೀಬಾಯಿಗೆ ತೋರಿಸಿದಳು. ಆಗ ಲಕ್ಷ್ಮೀಬಾಯಿಯು ಮಗಳನ್ನು ಹತ್ತಿರಕ್ಕೆ ಕರೆದು, ಬೆನ್ನು ಸವರುತ್ತಾ, ಮಗಳೇ ತನ್ನಲ್ಲಿ ಚಿನ್ನದಂತಹ ಗುಣಗಳಿದ್ದರೆ, ಈ ನಕಲೀ ನಗಗಳಿಗಿಂತಲೂ ಹೆಚ್ಚು ಶೋಭೆಬರುತ್ತದೆ ಎಂದಳು. ತಕ್ಷಣ, ರಮಾಬಾಯಿಯು ಈ ನಗ ಗಳನ್ನು ಕಳಚಿ, ಹಿಂದಕ್ಕೆ ಕೊಟ್ಟಳು. ರಮಾಬಾಯಿಯು ತಾಯಿಯ ಮಾತನ್ನು ಎಂದಿಗೂ ಮರೆಯಲಿಲ್ಲ. ತನ್ನ ಜೀವಮಾನ ಪರ್ಯಂತವೂ ರಮಾಬಾಯಿಯು ಆಭರಣಗಳನ್ನು ತೊಟ್ಟುಕೊಳ್ಳಲಿಲ್ಲ. ಲಗ್ನದ ಸಮಯದಲ್ಲಿ ತನ್ನ ಗಂಡ ಕೊಟ್ಟ ಒಂದು ಉಂಗುರವನ್ನು ಮಾತ್ರ ಜೋಪಾನವಾಗಿ ಇಟ್ಟುಕೊಂಡಿದ್ದಳು.

ಅನಂತ ಶಾಸ್ತ್ರಿಯು ಒಂದು ವರ್ಷಕಾಲ ಬೆಂಗಳೂರಿನಲ್ಲಿದ್ದು ಅನಂತರ ಸೌರಾಷ್ಟ್ರದ ದ್ವಾರಕೆಯ ಕಡೆಗೆ ಹೋದನು. ದ್ವಾರಕೆಯು ಶ್ರೀ ಕೃಷ್ಣನ ರಾಜಧಾನಿಯಾಗಿದ್ದು ಪಶ್ಚಿಮ ಸಮುದ್ರ ತೀರದಲ್ಲಿದೆ. ಈ ದ್ವಾರಕೆ ಯಲ್ಲಿಯೇ ಸಂತ ಮೀರಾಬಾಯಿಯು ಕೃಷ್ಣನ ಭಕ್ತಿಯಲ್ಲಿ ತಲ್ಲೀನಳಾದಳು. ಸ್ತ್ರೀದಾಸ್ಯ ವಿಮೋಚನೆಗಾಗಿ ಹೋರಾಡಿದ ಪ್ರಥಮ ಆರ್ಯ ಮಹಿಳೆ ಎಂಬುದಾಗಿ ರಮಾಬಾಯಿಗೆ ಮೀರಾಬಾಯಿಯಲ್ಲಿ ಆದರವಿದ್ದಿತು. ಶ್ರೀ ಕೃಷ್ಣನು ಒಂದೇ ರಾತ್ರಿಯ ಒಳಗೆ ದ್ವಾರಕಾ ನಗರಿಯನ್ನು ಸುವರ್ಣಮಯ ವಾಗಿ ಮಾಡಿದನೆಂದೂ, ಕೃಷ್ಣನ ಮರಣಾನಂತರ ದ್ವಾರಕೆಯು ಸಮುದ್ರದಲ್ಲಿ ಮುಳುಗಿ ಹೋಯಿತೆಂದೂ ಇತಿಹಾಸವಿದೆ. ನಿತ್ಯವೂ ಸಮುದ್ರ ಸ್ನಾನಕ್ಕಾಗಿ

ಈ ಪರಿವಾರವು ಇಲ್ಲಿಗೆ ಆಗಮಿಸಿದ್ದಿತು. ಇದೇ ಸಮಯದಲ್ಲಿ ಕಪಿಲಾಷ್ಟಮಿ ಯೋಗವು ಒದಗಿಬಂದಿತು. ಕಪಿಲಾಷ್ಟಮಿ ಯೋಗವು ಪ್ರತೀ ಆರ್ವತ್ತು ವರ್ಷಗಳಿಗೊಮ್ಮೆ ಬರುತ್ತದೆ. ಕಪಿಲಾಷ್ಟಮಿಯ ದಿನ ಭಕ್ತಿಪೂರ್ವಕವಾಗಿ ಸಮುದ್ರ ಸ್ನಾನಮಾಡಿ, ದಾನ, ಧರ್ಮ, ಪೂಜಾ, ಪುನಸ್ಕಾರಗಳನ್ನು ಮಾಡಿದರೆ ಶ್ರೀ ಕೃಷ್ಣನು ಸುವರ್ಣಮಯವಾದ ದ್ವಾರಕಾ ನಗರಿಯನ್ನು ತೋರಿಸುವನು ಎಂದು ಯಾತ್ರಿಕರು ಭಾವಿಸುತ್ತಿದ್ದರು.

ಕಪಿಲಾಷ್ಟಮಿಯ ದಿನ ಸಾವಿರಾರು ಜನರು ಸಮುದ್ರ ಸ್ನಾನಕ್ಕೆಂದು ದ್ವಾರಕೆಯಲ್ಲಿ ಒಟ್ಟುಗೂಡಿ, ಸಮುದ್ರ ಸ್ನಾನಮಾಡಿ, ದಾನಧರ್ಮಾದಿಗಳನ್ನು ಪೂರೈಸಿ, ಸುವರ್ಣ ನಗರಿಯನ್ನು ನೋಡಲಿಕ್ಕಾಗಿ ಆತುರಗೊಂಡರು. ಆಕಾಶದ ಕಾರ್ಮೋಡಗಳು ಒಂದರ ಹಿಂದೆ ಒಂದು ಕಾಣುತ್ತಿದ್ದುವೇ ಹೊರತು ಸುವರ್ಣ ನಗರಿಯು ಕಾಣಸಿಗಲಿಲ್ಲ. ಸಾಯಂಕಾಲದ ಹೊತ್ತಿಗೆ ಸೂರ್ಯ ಮುಳುಗುವ ವೇಳೆಯಲ್ಲಿ ನಾನಾ ಬಗೆಯ ಬಣ್ಣದ ಮೋಡಗಳು ತೋರಿ ಬರುತ್ತಿದ್ದುವು. ಶ್ರದ್ಧಾಳುಗಳಾದ ಕೆಲವರು, "ಅಗೋ! ಸುವರ್ಣ ನಗರಿಯು ಸ್ಪಷ್ಟವಾಗಿ ಗೋಚರಿಸುತ್ತದೆ" ಅನ್ನುತ್ತಿದ್ದರು. ಇನ್ನು ಕೆಲವರು "ಏನೂ ಇಲ್ಲ ಅವು ಸಾಯಂಕಾಲದ ಚಿತ್ರವಿಚಿತ್ರ ಬಣ್ಣದ ಮೋಡಗಳು" ಅನ್ನುತ್ತಿದ್ದರು. ಅನಂತ ಶಾಸ್ತ್ರಿಯ ಕುಟುಂಬವು ಏನೂ ಅಭಿಪ್ರಾಯಕೊಡ ಲಿಲ್ಲ. ಕಾರಣ, ಈ ಸುವರ್ಣ ನಗರಿಯು ಪಾಪಿಷ್ಟರಿಗೆ ಮಾತ್ರ ಗೋಚರ ವಾಗುತ್ತಿರಲಿಲ್ಲವಂತೆ? ಪಾಪಿಷ್ಟರ ಸಾಲಿಗೆ ಸೇರಲು ಯಾರೂ ಇಷ್ಟಪಡುವು ದಿಲ್ಲವೆಂದು ಬೇರೆ ಹೇಳಬೇಕಾದುದಿಲ್ಲ.

ತನಗೆ ಸುವರ್ಣಮಯವಾದ ದ್ವಾರಕಾ ನಗರಿಯ ದರ್ಶನವಾಗಲಿಲ್ಲ ವೆಂದು ರಮಾಬಾಯಿಯ ಅಣ್ಣ ಶ್ರೀನಿವಾಸನಿಗೆ ತುಂಬಾ ವ್ಯಥೆಯುಂಟಾ ಯಿತು. ಅದಕ್ಕಾಗಿ ಅವನು ಮಾರುತಿಯ ಉಪಾಸಕನಾದನು. ಅಂದಿನಿಂದ ಅವನು ಕಠಿಣವಾದ ಉಪವಾಸ ಮಾಡಲು ಶುರುಮಾಡಿದನು. ದಿನಕ್ಕೆ ಐವತ್ತು ಸಲ ಮಾರುತೀ ಸ್ತೋತ್ರವನ್ನು ಜಪಿಸಿದನು. ಏಳು ವಾರಗಳ ತನಕ ಒಂದು ಪಂಚಪಾತ್ರೆ ನೀರು, ಒಂದು ಚಮಚ ಸಕ್ಕರೆ ಅನಂತರ ಒಂದು ವಾರದ ವರೆಗೆ ಒಂದು ಪಂಚಪಾತ್ರೆ ಹಾಲು ಸೇವಿಸಿದನು. ಕಡೆಗೆ ನೀರು, ಸಕ್ಕರೆ, ಹಾಲು, ಏನೂ ಇಲ್ಲದೆ ಒಂದು ವಾರ ಉಪವಾಸ ಮಾಡಿದನು. ಆದರೂ, ಮಾರುತಿ ರಾಯನು ಪ್ರಸನ್ನನಾಗಲಿಲ್ಲ. ಇದರ ದೆಸೆಯಿಂದ ಗಟ್ಟಿಮುಟ್ಟಾದ ದೇಹ

ದಾರ್ಢ್ಯವುಳ್ಳವನಾದರೂ, ಶ್ರೀನಿವಾಸನು ಅತ್ಯಂತ ಕ್ಷೀಣನಾಗಿ ಹೋದನು. ಅವನಿಗೆ ನಡೆಯಲೂ ಸಹ ಕೂಡುತ್ತಿರಲಿಲ್ಲ. ಆದರೂ ಶ್ರೀನಿವಾಸನು ತನ್ನಿಂದಲೇ ಏನಾದರೂ ತಪಶ್ಚರ್ಯೆಯಲ್ಲಿ ನ್ಯೂನತೆ ಆಗಿದೆಯೆಂದು ಭಾವಿಸುತ್ತಿದ್ದನು. ಇನ್ನೂ ಹೆಚ್ಚಿನ ತಪಸ್ಸನ್ನು ಮಾಡುವೆನೆಂದು ಶ್ರೀನಿವಾಸನು ಹೇಳುತ್ತಿದ್ದನು. ಅವನಿಗೆ ನಡೆಯಲು ಸಾಧ್ಯವಾದ ಕೂಡಲೇ ಈ ಮಂಡಳಿಯು ದ್ವಾರಕೆಯಿಂದ ಕಾಲ್ದೆಗೆಯಿತು.

೬. ಮಾತಾಪಿತೃ ವಿಯೋಗ ಕಷ್ಟದಶೆ

ದ್ವಾರಕೆಯನ್ನು ಬಿಟ್ಟ ನಂತರ ಮದ್ರಾಸ್ ಪಟ್ಟಣದ ಸಮೀಪ ಘಟಿಕಾಚಲದಲ್ಲಿ ಈ ಕುಟುಂಬವು ಬಂದು ಸೇರಿತು. ಘಟಿಕಾಚಲದ ಬೆಟ್ಟದಲ್ಲಿ ಹನುಮಂತನ ದೇವಾಲಯವಿರುತ್ತದೆ. ಸಮೀಪದಲ್ಲಿಯೇ ಎರಡು ಮೈಲು ದೂರದಲ್ಲಿ ಇನ್ನೊಂದು ಬೆಟ್ಟದ ಮೇಲೆ ನೃಸಿಂಹಃ ಸ್ವಾಮಿಯ ದೇವಾಲಯವಿರುತ್ತದೆ. ಹತ್ತಿರದಲ್ಲಿಯೇ ವರಾಹ ಸ್ವಾಮಿಯ ಮಂದಿರವೂ ಇರುತ್ತದೆ. ಘಟಿಕಾಚಲದಲ್ಲಿ ಒಂದು ಘಟಿಕೆಯಲ್ಲಿ ಪಾಪಕ್ಷಾಲನವಾಗುತ್ತದೆ. ಇತರ ಕ್ಷೇತ್ರಗಳಲ್ಲಿ ವರ್ಷಗಟ್ಟಲೆಗಳಲ್ಲಿ ಆಗುವ ಪಾಪಕ್ಷಾಲನವು ಇಲ್ಲಿ ಇಪ್ಪತ್ತ-ನಾಲ್ಕು ಮಿನಿಟುಗಳಲ್ಲಿ ಆಗುವದು? ಶ್ರೀನಿವಾಸನ ವ್ರತವು ಅಲ್ಲಿ ಇನ್ನೂ ಅಧಿಕವಾಗಿ ಸಾಗಿತು. ಪ್ರತೀ ದಿನ ಬೆಳಿಗ್ಗೆ ಎದ್ದು ಸ್ನಾನಾದಿಗಳನ್ನು ತೀರಿಸಿ ಬೆಟ್ಟದ ಮೇಲೆ ಹೋಗಿ ದೇವರಿಗೆ ನೂರೊಂದು ಪ್ರದಕ್ಷಿಣೆ, ನೂರೆಂಟು ಸಾಷ್ಟಾಂಗ ನಮಃಸ್ಕಾರಗಳು ಅನಂತರ ಮಧ್ಯಾಹ್ನ ಮೂರು ಘಂಟೆಯ ವರೆಗೆ ಧ್ಯಾನಸ್ಥನಾಗಿ ಕುಳಿತುಕೊಳ್ಳುವನು. ಹೀಗೆ ಒಂದು ವರ್ಷದ ವರೆಗೆ ತಪಸ್ಸನ್ನು ಮಾಡಿದರೂ ಪ್ರಯೋಜನವಾಗಲಿಲ್ಲ. ಇತರ ಯಾತ್ರಿಕರಿಗೂ ಶ್ರೀನಿವಾಸನಂತೆಯೇ ಅನುಭವವಾಯಿತು. ದಾನ, ದಕ್ಷಿಣೆಗಳನ್ನು ತೆಗೆದುಕೊಳ್ಳುತ್ತಿದ್ದ ಅಲ್ಲಿಯ ಕ್ಷೇತ್ರವು ಪುರೋಹಿತರಿಗೆ ತುಂಬಾ ಪ್ರಯೋಜನವಾಯಿತು.

ಹಿಂದೆ ಅನಂತ ಶಾಸ್ತ್ರೀಯ ಕುಟುಂಬದವರು ಭಕ್ತಿಯುತರಾಗಿ ತೀರ್ಥಕ್ಷೇತ್ರಾದಿಗಳನ್ನು ಸಂಚರಿಸುತ್ತಿದ್ದರು. ಈಗೀಗ ಅವರ ಕ್ಷೇತ್ರಾದಿಗಳ ಮೇಲಿನ ನಂಬಿಕೆಯು ಮೆಲ್ಲಮೆಲ್ಲನೆ ಕಡಿಮೆಯಾಗತೊಡಗಿತು. ಈ ವಿಚಾರದಲ್ಲಿ ಮನೆಯಲ್ಲಿ ಯಾವಾಗಲೂ ಚರ್ಚೆ ನಡೆಯುತ್ತಾ ಇತ್ತು. ಕ್ಷೇತ್ರಾದಿಗಳಲ್ಲಿ ದೊಡ್ಡವರಿಗೆ ಸಿಗುವ ಮಾನ ಮರ್ಯಾದೆಗಳನ್ನೂ ಬಡವರಿಗೆ ಆಗುವ

ತೊಂದರೆಗಳನ್ನೂ ದೇವರು ದುಡ್ಡಿಗೆ ಪ್ರಾಧಾನ್ಯವನ್ನು ಕೊಟ್ಟು ಶ್ರೀಮಂತರಿಗೆ ಮಾತ್ರ ಸುಲಭನಾಗುವನೇ? ಎಂಬ ಪ್ರಶ್ನೆಗೆ ಅನಂತ ಶಾಸ್ತ್ರಿಯು ಉತ್ತರ ಕೊಡಲಾರದವನಾದನು. ತೀರ್ಥಕ್ಷೇತ್ರಾದಿಗಳಲ್ಲಿ ವಿಶೇಷವಾಗಿ ಹೇಳಲ್ಪಡುವ ಸ್ಥಳ ಮಹಾತ್ಮೆಗಳನ್ನೂ ಪ್ರತ್ಯಕ್ಷವಾಗಿ ಅಲ್ಲಿ ಕಂಡುಬರುತ್ತಿದ್ದ ವಿದ್ಯಮಾನಗಳನ್ನೂ ನೋಡಿ ಅವರು ಬೇಸರ ಪಟ್ಟರು. ಮಹಾ ಪಾಪ ನಾಶಕಗಳೆಂದು ಹೇಳಲ್ಪಡುವ ಕೆಲವು ತೀರ್ಥಗಳ ನೀರು ಕೈಯಿಂದ ಮುಟ್ಟಲೂ ಕೂಡ ಅಸಹ್ಯವಾಗುವಷ್ಟು ಕಶ್ಮಲವಾಗಿರುವುದರಿಂದ ಅವುಗಳಲ್ಲಿ ಸ್ನಾನ ಆಚಮನಾದಿಗಳನ್ನು ಮಾಡಲು ಅವರ ಮನಸ್ಸು ಹೇಸಿತು. ತಿರುಪತಿ ಮುಂತಾದ ದೊಡ್ಡ ದೊಡ್ಡ ಯಾತ್ರಾ ಸ್ಥಳಗಳಲ್ಲಿ ಯಾತ್ರಿಕರಿಂದ ನ್ಯಾಯಾನ್ಯಾಯ, ಸತ್ಯಾಸತ್ಯ, ಪುಣ್ಯ, ಪಾಪ ಇದನ್ನು ಲೆಕ್ಕಿಸದೆ ಕೇವಲ ದ್ರವ್ಯ ಸಂಗ್ರಹದಲ್ಲಿಯೇ ಮಗ್ನರಾಗಿದ್ದ ಕ್ಷೇತ್ರವಾಸೀ ಅರ್ಚಕರ ಈ ಚರ್ಯೆ ಅವರನ್ನು ಬೇಸರಗೊಳಿಸಿತು.

ಘಟಿಕಾಚಲದಿಂದ ಮುಂದೆ ಸಾಗಿದ ಶಾಸ್ತ್ರೀ ಕುಟುಂಬವು 1873–1874ರಲ್ಲಿ ಮದ್ರಾಸು ಪ್ರಾಂತ್ಯದ ತಿರುಪತೀ ಕ್ಷೇತ್ರವನ್ನು ಮುಟ್ಟಿತು. ಈ ವೇಳೆಗೆ ಅನಂತ ಶಾಸ್ತ್ರಿಯು ಬಹು ವೃದ್ಧನಾದನು. ಎಡೆಬಿಡದೆ ಮಾಡುತ್ತಿದ್ದ ದೇಶ ಸಂಚಾರ ಮಿತಿ ಇಲ್ಲದೆ ಅನುಭವಿಸಿದ ಕಷ್ಟತಾಪತ್ರಯಗಳು ಇದರಿಂದ ದೇಹಪಟುತ್ವವು ಕುಂದಿತು. ದೃಷ್ಟಿಪಾಟವವು ಕಡಿಮೆಯಾಯಿತು. ನಡೆಯಲೂ ಕೂಡದಂತಾಯಿತು. ಪುರಾಣ ಪ್ರವಚನಾದಿಗಳಿಂದ ಕುಟುಂಬ ಪೋಷಣೆ ಮಾಡಲು ಅಸಾಧ್ಯವಾಯಿತು. ಕೇವಲ ಹದಿನಾರು ವರ್ಷಗಳ ಶ್ರೀನಿವಾಸನು ದ್ರವ್ಯ ಸಂಪಾದನೆ ಮಾಡಲು ಅಸಮರ್ಥನಾಗಿದ್ದನು. ಬೇರೆಯವರ ಸೇವಾವೃತ್ತಿಯಿಂದ ಜೀವಿಸುವುದು ಅವರಂತಹ ವಿದ್ವಾಂಸರಿಗೆ ಹಿತವೆನಿಸಲಿಲ್ಲ. ಭಿಕ್ಷೆ ಬೇಡುವುದನ್ನಂತೂ ಅವರು ಸ್ವಪ್ನದಲ್ಲಿಯೂ ಅರಿಯರು. ಕೆಲವು ಕಾಲದ ಹಿಂದೆ ದ್ರವ್ಯ ಸಂಪಾದನೆಯಾಗುತ್ತಿದ್ದರೂ, ತನ್ನ ಕುಟುಂಬದ ಜೀವನಕ್ಕೆ ಬೇಕಾದ್ದನ್ನು ವ್ಯಯಿಸಿ ಉಳಿದುದನ್ನು ಆ ವೈರಾಗ್ಯ ವೃತ್ತಿಯ ಬ್ರಾಹ್ಮಣನು ದಾನವಾಗಿ ದೀನದರಿದ್ರರಿಗೆ ಹಂಚುತ್ತಿದ್ದನು. ಉಳಿದ ಕೆಲವು ದ್ರವ್ಯವು ಕಳ್ಳರಿಂದ ಅಪಹಾರವಾಯಿತು; ಮತ್ತೆ ಉಳಿದ ಸ್ಥಿರಚರ ಸೊತ್ತುಗಳನ್ನು ವಿಕ್ರಯಿಸಿ ಹೇಗೊ ಕೆಲವು ಕಾಲ ಕಳೆದರು.

ಮದ್ರಾಸು ಆಧಿಪತ್ಯದಲ್ಲಿ ಈ ಕಾಲದಲ್ಲಿಯೇ ದೊಡ್ಡ ಕ್ಷಾಮವು ಸಂಭವಿಸಿತು. ಈ ಕ್ಷಾಮದಲ್ಲಿ ಸಾವಿರಾರು ಜನರು ಅನ್ನ ನೀರಿಲ್ಲದೆ ಮರಣ ಪಟ್ಟರು. ಅನಂತ ಶಾಸ್ತ್ರಿಯ ಕುಟುಂಬವು ಈ ಕ್ಷಾಮದಲ್ಲಿ ಸಿಲುಕಿಕೊಂಡಿತು. ಇಂಥಾ ಹೀನ ಸ್ಥಿತಿಯಲ್ಲಿರುವಾಗ ಎಲ್ಲರೂ ಆಲೋಚಿಸಿ ಒಂದು ನಿರ್ಣಯ ವನ್ನು ಮಾಡಿದರು. ಈ ವರೆಗೆ ಗೌರವಯುತವಾದ ಜೀವನವನ್ನು ಸಾಗಿಸಿ ಇನ್ನು ಈ ಊರಿನಲ್ಲಿ ಉಪವಾಸ ಬಿದ್ದು ಸಾಯುವುದಕ್ಕಿಂತ ಕಾಡಿಗೆ ಹೋಗಿ ಯಾದರೂ, ಅನ್ನಾಹಾರವಿಲ್ಲದೆ ಸಾಯುವುದುತ್ತಮವೆಂದು ನಿಶ್ಚಯ ಮಾಡಿ ದರು. ಹೀಗೆ ನಿಶ್ಚಯಿಸಿ ಸಮೀಪದ ಒಂದು ಕಾಡನ್ನು ಸೇರಿದರು. ಅಲ್ಲಿ ಕಾಡಿನ ಹಣ್ಣು ಗೆಡ್ಡೆಗಳನ್ನು ಬೀಜ ಸಿಪ್ಪೆ ಸಹಿತವಾಗಿ ನುಂಗಿ ಹನ್ನೊಂದು ದಿನ ಕಳೆದರು.

ಶ್ರೀನಿವಾಸನಿಗೆ ತನ್ನ ತಾಯಿತಂದೆಗಳ ಈ ರೀತಿಯ ಮರಣವು ತುಂಬಾ ಬೇಸರವನ್ನುಂಟು ಮಾಡಿತು. ಅವನು ತನ್ನ ತಾಯಿತಂದೆಗಳೊಡನೆ ಊರಿಗೆ ಹೋಗಿ ಏನಾದರೂ ಕೂಲಿ ಕೆಲಸವನ್ನಾದರೂ ಮಾಡಿ ಎಲ್ಲರ ಯೋಗಕ್ಷೇಮ ವನ್ನು ನೋಡುತ್ತೇನೆಂಬುದಾಗಿ ಪರಿಪರಿಯಾಗಿ ಹೇಳಿದನು. ಎಲ್ಲರೂ ಅದಕ್ಕೊಪ್ಪಿ ಅರಣ್ಯದಿಂದ ಬಹು ಕಷ್ಟದಿಂದ ಹಿಂತಿರುಗಿದರು. ಆಗ ಶಾಸ್ತ್ರಿಗೆ ನಡೆಯಲೂ ಸಹ ಕೂಡುತ್ತಿರಲಿಲ್ಲ ಅಲ್ಲದೆ ದೃಷ್ಟಿಮಾಂದ್ಯ ಬೇರೆ. ಪ್ರಯಾಸ ದಿಂದ ನಡೆದು ಒಂದು ಊರಿನ ದೇವಾಲಯವನ್ನು ಆಶ್ರಯಿಸುವುದು ಎಂಬುವಷ್ಟರಲ್ಲಿ ಇವರು ಬ್ರಾಹ್ಮಣರು ಹೌದೋ, ಅಲ್ಲವೋ ಎಂಬ ಸಂಶಯ ಪಟ್ಟು ಅಲ್ಲಿಯ ಪೂಜಾರಿಗಳು ಇವರನ್ನು ಓಡಿಸಿದರು. ಕಡೆಗೆ ಒಂದು ಹಾಳುಬಿದ್ದ ದೇವಸ್ಥಾನವನ್ನು ಆಶ್ರಯಿಸಿದರು. ದಿನೇದಿನೇ ಅನಂತ ಶಾಸ್ತ್ರಿಯ ಬಳಲಿಕೆಯು ಹೆಚ್ಚಿತು.

ಈ ಸ್ಥಿತಿಯಲ್ಲಿದ್ದ ಅನಂತ ಶಾಸ್ತ್ರಿಯು ಆತುರ ಸನ್ಯಾಸವನ್ನು ಸ್ವೀಕರಿಸಿ ದನು. (ಮರಣ ಕಾಲದಲ್ಲಿ ತೆಗೆದುಕೊಳ್ಳುವ ಸನ್ಯಾಸ) ಇದಾದ ಮೇಲೆ ಹತ್ತಿರದ ಒಂದು ಕೊಳದಲ್ಲಿ ಒಬ್ಬರ ಹಿಂದೆ ಒಬ್ಬರು ಜಲಸಮಾಧಿ ಹೊಂದಿ ಸಾಯುವುದು ಎಂತ ನಿಶ್ಚಯಿಸಿದರು. ಅನಂತ ಶಾಸ್ತ್ರಿಯು ಒಬ್ಬೊಬ್ಬರನ್ನೇ ಹತ್ತಿರ ಕರೆದು ತನ್ನ ಕಡೆಯ ಮಾತುಗಳನ್ನು ಹೇಳಿದನು. ಕಡೆಗೆ ರಮೆಯನ್ನು ಕರೆದು ಪ್ರೀತಿಯಿಂದ ಆಲಿಂಗಿಸಿ, ತಲೆಯ ಮೇಲೆ ಕೈಯಿಟ್ಟು ಕ್ಷೀಣ ಧ್ವನಿ ಯಿಂದ ಹೀಗೆ ಹೇಳಿದನು. "ಮಗಳೇ, ನಾನು ಈಗ ಹೊರಡುವೆನು. ನಿನ್ನ

ಮೇಲೆ ನನಗೆ ಎಷ್ಟು ವಾತ್ಸಲ್ಯವಿತ್ತು ಎಂಬುದನ್ನು ನೀನು ಸದಾ ಸ್ಮರಿಸುತ್ತಿರು. ಯಾವುದು ಸತ್ಯವೋ ಅದನ್ನೇ ಆಚರಿಸು, ದೇವರ ಸೇವೆ ಮಾಡುವುದು ನಿನ್ನ ಧ್ಯೇಯವಾಗಿರಲಿ, ಎಲೈ ಮುದ್ದು ಮಗಳೇ ನೀನು ನನ್ನ ಮಕ್ಕಳಲ್ಲಿ ಎಲ್ಲ ರಿಂದಲೂ ಕಿರಿಯುವಳು, ಆದುದರಿಂದಲೇ ಎಲ್ಲರಿಗಿಂತ ನೀನು ನನಗೆ ಪ್ರೀತಿಯುವಳು, ನಿನ್ನನ್ನು ದೇವರ ವಶಕ್ಕೊಪ್ಪಿಸುತ್ತೇನೆ, ಅವನೇ ನಿನ್ನನ್ನು ಕಾಪಾಡುವನು.

ಆದರೆ ಮೃತ್ಯು ವೇಳೆ ಬಂದೊದಗಲಿಲ್ಲ; ಪುನಃ ಒಂದೆರಡು ದಿನಗಳು ಕಳೆದವು, ಈಗ ಶಾಸ್ತ್ರಿಯ ಬೇನೆಯು ಹೆಚ್ಚುತ್ತಾ ಬಂತು. ಅವಸಾನ ಕಾಲದಲ್ಲಿ ಸಕ್ಕರೆ ನೀರನ್ನು ಕೇಳಿದನು. ಅಸಹಾಯರಾದ ಮಕ್ಕಳಿಂದ ಇದನ್ನು ಕೊಡ ಲಿಕ್ಕೂ ಆಗಲಿಲ್ಲ. ಆ ಕ್ಷಣವೇ ಅನಂತ ಶಾಸ್ತ್ರಿಯು ತನ್ನ ಜೀವನ ಯಾತ್ರೆ ಯನ್ನು ಮುಗಿಸಿಕೊಂಡನು. ಆ ಊರಿನ ಜನರು ಯಾರೂ ಶವ ಸಂಸ್ಕಾರಕ್ಕೆ ಹತ್ತಿರ ಬರಲಿಲ್ಲ; ಕಡೆಗೆ ಈ ಚಿಕ್ಕ ಮಕ್ಕಳೇ ಒಂದು ಧೋತರದಲ್ಲಿ ಶವವನ್ನು ಕಟ್ಟಿ ಹೇಗೋ ಹೊತ್ತುಕೊಂಡು ಸಂಸ್ಕಾರ ಮಾಡಿದರು. ದಯಾಳುವಾದ ಒಬ್ಬ ಬ್ರಾಹ್ಮಣನು ಮಾತ್ರ ಇವರನ್ನು ಹಿಂಬಾಲಿಸಿ ಬಂದಿದ್ದನು.

ಅನಂತ ಶಾಸ್ತ್ರಿಯ ಮರಣದ ನಂತರ ಹೊಟ್ಟೆ ತುಂಬಾ ಅನ್ನಾಹಾರ ವಿಲ್ಲದೆ ಕಂಗೆಟ್ಟ ಈ ಕುಟುಂಬವು ಅತೀವ ಕಷ್ಟದಿಂದ ತಿರುಪತಿಯಿಂದ ರಾಯಚೂರು ವರೆಗೆ ಬಂದಿತು. ಲಕ್ಷ್ಮೀಬಾಯಿಯು ಅನಂತ ಶಾಸ್ತ್ರಿಯಿಂದ ತೀರಾ ಚಿಕ್ಕವಳಾದರೂ ಕ್ಷಾಮಕಾಲದ ಉಪವಾಸದಿಂದಲೂ, ಪತಿ ನಿಧನದ ವ್ಯಥೆಯಿಂದಲೂ, ಜ್ವರದಿಂದ ಹಾಸಿಗೆ ಹಿಡಿದಳು. ಗಟ್ಟಿಮುಟ್ಟಾದ ದೇಹ ದಾರ್ಢ್ಯವುಳ್ಳ ಶ್ರೀನಿವಾಸನೂ ನಿಶ್ಶಕ್ತನಾಗಿದ್ದನು. ಏನಾದರೂ ಉದ್ಯೋಗ ಮಾಡಿ ಜೀವಿಸಲಿಕ್ಕೂ ಅನಾನುಕೂಲವಾಯಿತು. ಲಕ್ಷ್ಮೀಬಾಯಿಯು ದಿನೇದಿನೇ ನಿತ್ರಾಣಳಾಗುತ್ತಾ ಬಂದಳು. ನಾನು ಇದರಲ್ಲಿ ಬದುಕುವುದಿಲ್ಲ ವೆಂದು ಮಕ್ಕಳ ಹತ್ತಿರ ಹೇಳಿದಳು. ಕಡೆಗೊಂದು ದಿನ ನನಗಾಗಿ ನೆರೆಮನೆ ಯಿಂದ ಒಂದು ರೊಟ್ಟಿಯ ಚೂರನ್ನು ಕೇಳಿ ತೆಗೆದುಕೊಂಡು ಬಾ ಎಂದು ರಮಾಬಾಯಿಯ ಹತ್ತಿರ ಹೇಳಿದಳು. ರಮಾಬಾಯಿಗೆ ಈ ಕೆಲಸವು ಬಹು ಕಷ್ಟತರವಾಗಿ ಕಾಣಿಸಿತು. ಜನ್ಮದಾರಭ್ಯ ಇವರು ಒಬ್ಬರ ಕೂಡೆ ಯಾಚಿಸಿ ದವರಲ್ಲ. ಕಷ್ಟದಿಂದ ಹೋಗಿ ನೆರೆಮನೆಯಲ್ಲಿ ಕಣ್ಣೀರು ಸುರಿಸತೊಡಗಿದಳು. ಆ ಮನೆಯ ಯಜಮಾನಿಯು ರಮಾಬಾಯಿಯ ಭಾವವನ್ನು ತಿಳಿದು, ನಿನಗೇ

ನಾದರೂ ಬೇಕಾಗಿದೆಯೋ, ಎಂತ ಕೇಳಿದಳು. ರಮಾಬಾಯಿಯು ತನ್ನ ತಾಯಿಗೋಸ್ಕರ ಒಂದು ರೊಟ್ಟಿ ತುಂಡು ಬೇಕಾಗಿದೆ ಎಂದು ಕೇಳಿದಳು. ರೊಟ್ಟಿಯನ್ನು ತೆಗೆದುಕೊಂಡು ಮನೆಗೆ ಓಡಿಬಂದಳು. ಆದರೆ ಲಕ್ಷ್ಮೀ ಬಾಯಿಗೆ ಸ್ಮೃತಿ ತಪ್ಪಿಹೋಗಿತ್ತು. ರೊಟ್ಟಿಯನ್ನು ತಿನ್ನಲಿಕ್ಕೆ ಅವಳು ಉಳಿಯಲಿಲ್ಲ. ತತ್‍ಕ್ಷಣವೇ ಪ್ರಾಣ ಬಿಟ್ಟಳು.

ತಂದೆತಾಯಿಗಳನ್ನು ಕಳಕೊಂಡ ಈ ಅನಾಥ ಮಕ್ಕಳು ಕಿಂ ಕರ್ತವ್ಯತಾ ಮೂಢರಾಗಿ ಅಲೆದಾಡಿದರು. ಉತ್ತರದಲ್ಲಿ ಕಾಶ್ಮೀರದಿಂದ ಪೂರ್ವಕ್ಕೆ ಕಲಕತ್ತಾ ವರೆಗೆ ಇವರ ಪ್ರಯಾಣವು ಸಾಗಿತು. ಆಗ ಅವರು ಏನಾದರೂ ಉದ್ಯೋಗ ಸಿಕ್ಕಿದರೆ ಅರೆಹೊಟ್ಟೆಯಲ್ಲಿ, ಇಲ್ಲದಿದ್ದರೆ ಉಪವಾಸ ದಲ್ಲಿ ಕಾಲಕಳೆಯುತ್ತಿದ್ದರು. ಶ್ರೀನಿವಾಸನಿಗೆ ಉದ್ಯೋಗ ಸಿಕ್ಕಿದ ವೇಳೆ ತಿಂಗಳಿಗೆ ನಾಲ್ಕು ರೂಪಾಯಿ, ಅಥವಾ ಅದಕ್ಕಿಂತಲೂ ಕಡಿಮೆ ವೇತನ ದೊರಕುತ್ತಿತ್ತು. ಉದ್ಯೋಗ ಇಲ್ಲದ ವೇಳೆಯಲ್ಲಿ, ಕಾಡಿನ ಹಣ್ಣು ಹಂಪಲು ಗಳನ್ನು ತಿಂದು ಇವರು ಜೀವಿಸುತ್ತಿದ್ದರು. ರಾತ್ರಿಯ ವೇಳೆ ಇವರು ರಸ್ತೆ ಬದಿಯಲ್ಲಿಯೋ, ಸೇತುವೆಗಳ ಕಮಾನಿನ ಅಡಿಯಲ್ಲಿಯೋ, ಮಲಗುತ್ತಿದ್ದರು. ಇವರಿಗೆ ಮೈ ತುಂಬಾ ಬಟ್ಟೆಗಳಾಗಲೀ, ಇರಲಿಲ್ಲ. ರಮಾ ಮತ್ತು ಅಕ್ಕ ಕೃಷ್ಣಾಬಾಯಿ ಮೈ ಮೇಲಿನ ಬಟ್ಟೆಯನ್ನು ಒಗೆಯುವಾಗ ಅರ್ಧ ಸೀರೆ ಒಗೆದು ಒಣಗಿಸಿ, ನಂತರ ಅರ್ಧ ಸೀರೆಯನ್ನು ಒಗೆಯುತ್ತಿದ್ದರು. ಪಂಜಾಬಿನಲ್ಲಿರು ವಾಗ ಝೇಲಮ್ ನದೀ ತೀರದಲ್ಲಿ ಭಯಂಕರ ಥಂಡೀ ಸಮಯದಲ್ಲಿ ಕುತ್ತಿಗೆ ವರೆಗೆ ಮರಳಿನಲ್ಲಿ ಹೊಂಡ ಮಾಡಿ, ಆ ಹೊಂಡದಲ್ಲಿ ನಿಂತು ಶೀತಬಾಧೆಯನ್ನು ನಿವಾರಿಸುತ್ತಿದ್ದರು. ರಮಾಬಾಯಿಗೆ ಶೀತಬಾಧೆಯಿಂದುಟಾದ ಕಿವುಡತನ ಮುಂದೆ ಶಾಶ್ವತವಾಗಿ ಉಳಿಯಿತು. ಕೆಲವು ತಿಂಗಳ ನಂತರ ಕೃಷ್ಣಾ ಬಾಯಿಯು ಸ್ವರ್ಗಸ್ಥಳಾದಳು. ಹೀಗೆ ಆರು ತಿಂಗಳೊಳಗೆ ತಂದೆ–ತಾಯಿ– ಅಕ್ಕ ಈ ಮೂವರೂ ಮೃತ್ಯುವಶರಾಗಿ ಶ್ರೀನಿವಾಸ ಮತ್ತು ರಮಾಬಾಯಿ ಇವರಿಬ್ಬರು ಮಾತ್ರ ಉಳಿದರು.

೭. ಕಲಕತ್ತಾದಲ್ಲಿ ಪದಾರ್ಪಣ

ಶ್ರೀನಿವಾಸ ಮತ್ತು ರಮಾಬಾಯಿ ದೇಶಾಟನೆ ಮಾಡುತ್ತಾ 1878ರಲ್ಲಿ ಕಲಕತ್ತಾ ಪಟ್ಟಣಕ್ಕೆ ಬಂದು ಸೇರಿದರು. ಆಗ ಕಲಕತ್ತಾ ಪಟ್ಟಣವು

ಭಾರತದ ರಾಜಧಾನಿಯಾಗಿದ್ದು ಸಮಸ್ತ ವಿದ್ಯೆಗಳ ಕೇಂದ್ರ ಸ್ಥಾನವಾಗಿದ್ದಿತು. ಅಲ್ಲದೆ ಎಲ್ಲಾ ಸಾಮಾಜಿಕ, ರಾಜಕೀಯ ಚಳವಳಿಗಳ ಸ್ಫೂರ್ತಿ ಸ್ಥಾನ ದಂತಿತ್ತು. ರಾಜಾರಾಮಮೋಹನ ರಾಯರ ಕರ್ಮಭೂಮಿಯು ಅದೇ ಆಗಿತ್ತು. ಸತೀ ಸಹಗಮನದ ನಿಷೇಧವು ಅಲ್ಲಿಂದಲೇ ಶುರು ಆಗಿತ್ತು. ಸ್ತ್ರೀ ಸ್ವಾತಂತ್ರ್ಯದ ಪುರಸ್ಕಾರ ಮಾಡುವ ಮುಂದಾಳುಗಳು ಅಲ್ಲಿಯೇ ಬೆಳಕಿಗೆ ಬಂದರು. ಪ್ರಾಚೀನ ಮನು ಧರ್ಮ ಶಾಸ್ತ್ರವನ್ನು ಏನೂ ವ್ಯತ್ಯಾಸವಿಲ್ಲದೆ ಆಚರಿಸಬೇಕೆಂದು ವಾದಿಸುತ್ತಿರುವ ಕಟು ಸನಾತನಿಗಳು ಅಲ್ಲಿ ಬಹಳವಾಗಿ ದ್ದರು. ಆದರೆ ಪ್ರಾಚೀನ ಹಿಂದೂ ಧರ್ಮವನ್ನು ಈಗಿನ ಕಾಲಾನುರೂಪ ಬದಲಾವಣೆ ಮಾಡಿ ಅದರಲ್ಲಿದ್ದ ಉಚ್ಚ ಸಂಗತಿಗಳನ್ನು ಮಾತ್ರ ಆಚರಿಸ ಬೇಕೆಂಬುದಾಗಿ ಹೇಳುವ ಸುಧಾರಕ ವಿದ್ವಾಂಸರೂ ಅಲ್ಲಿರುತ್ತಿದ್ದರು. ಇವರಲ್ಲಿ ರಾಜಾರಾಮ ಮೋಹನ ರಾಯರೇ ಅಗ್ರಗಣ್ಯರು. ಕೇಶವ ಚಂದ್ರ ಸೇನ, ಕಾಲೀಚರಣ ಬೆನರ್ಜಿ, ಪಂಡಿತ ಮಹೇಶಚಂದ್ರ ನ್ಯಾಯರತ್ನ ಇವರೆಲ್ಲರೂ ಸುಧಾರಣಾಪ್ರಿಯರೇ ಆಗಿದ್ದರು. ಇವರೆಲ್ಲರ ಪ್ರಯತ್ನದಿಂದ ಹಿಂದೂ ಧರ್ಮದಲ್ಲಿ ನವಚೇತನವನ್ನುಂಟುಮಾಡುವ ಸಲುವಾಗಿ ಬ್ರಹ್ಮ ಸಮಾಜವು ಸ್ಥಾಪಿಸಲ್ಪಟ್ಟಿತು.

ರಮಾಬಾಯಿ ಮತ್ತು ಅವಳ ಅಣ್ಣ ಶ್ರೀನಿವಾಸನ ನಿಜವಾದ ಯೋಗ್ಯ ತೆಯು ಕಲಕತ್ತಾದ ಜನರಿಗೆ ಗೊತ್ತಾಯಿತು. ಇವರು ಕಷ್ಟಕಾರ್ಪಣ್ಯ ಗಳನ್ನು ಅನುಭವಿಸಿದವರಾಗಿದ್ದರೂ, ಇವರ ಜ್ಞಾನಭಂಡಾರ, ನೀತಿಯುತ ಆಚರಣೆ, ಉಜ್ವಲವಾದ ಸಂಸ್ಕೃತಿ ಇವೆಲ್ಲವೂ ಇವರ ಮುಖದಲ್ಲಿ ವರ್ಚಸ್ಸನ್ನು ಬೀರುತ್ತಿದ್ದುವು. ಕಲಕತ್ತಾದಲ್ಲಿ ಕೆಲವು ಕಡೆ ರಮಾಬಾಯಿಯ ಪುರಾಣ ವಾಚನ ನಡೆಯಿತು. ತನ್ನ ಓಜಸ್ವೀ ವಾಣಿಯಿಂದ ಭಾಗವತಾದಿ ಪುರಾಣಗಳ ಕಥೆಗಳನ್ನು ಹೇಳುತ್ತಿದ್ದಳು. ಅಣ್ಣ ಶ್ರೀನಿವಾಸನು ಇದನ್ನು ಭಾಷಾಂತರಿಸು ತ್ತಿದ್ದನು. ಭಾಗವತದ ಹದಿನೆಂಟು ಸಹಸ್ರ ಶ್ಲೋಕಗಳು ರಮಾಬಾಯಿಗೆ ಬಾಯಿಪಾಠವಾಗಿ ಬರುತ್ತಿದ್ದವು. ವ್ಯಾಕರಣ ಗ್ರಂಥವಾದ ಸಿದ್ಧಾಂತ ಕೌಮುದಿಯಲ್ಲಿ ಯಾವ ವೈಯ್ಯಾಕರಣಿಯನ್ನಾದರೂ ಚಕಿತಗೊಳಿಸುವಂತಹ ಪ್ರಾವೀಣ್ಯತೆಯು ರಮಾಬಾಯಿಯಲ್ಲಿತ್ತು.

ಇವರ ಈ ಅಸಾಧಾರಣ ಪಾಂಡಿತ್ಯವನ್ನು ನೋಡಿದ ಕಲಕತ್ತಾದ ಸಂಸ್ಕೃತ ಪಂಡಿತರೂ, ಮಹಾಜನರೂ, ಅತ್ಯಂತ ಆಶ್ಚರ್ಯಗೊಂಡರು.

ಕೆಲವೇ ದಿನಗಳಲ್ಲಿ ಕಲಕತ್ತಾ ಪಟ್ಟಣದಲ್ಲಿಯು ಇತರ ಕಡೆಗಳಲ್ಲಿಯೂ ಇವರ ಕೀರ್ತಿಯು ಪಸರಿಸಿತು. ಕಲಕತ್ತಾ ಪಟ್ಟಣದ ವಿಶ್ವವಿದ್ಯಾನಿಲಯದ ಸಭಾ ಭವನದಲ್ಲಿ ದೊಡ್ಡದೊಂದು ಸಭೆ ಕರೆಯಿಸಿ, ಇಲ್ಲಿಯ ಧುರೀಣರು ರಮಾಬಾಯಿಯನ್ನು ಬರಮಾಡಿದರು. ಇವರಲ್ಲಿ ಕಲಕತ್ತಾ ವಿಶ್ವವಿದ್ಯಾ ನಿಲಯದ ಆಂಗ್ಲೇಯ ಪ್ರಾಧ್ಯಾಪಕರೂ, ಪಂಡಿತ ಮಹೇಶಚಂದ್ರ ನ್ಯಾಯ ರತ್ನ ಮುಂತಾದವರೂ ಪ್ರಮುಖರಾಗಿದ್ದರು. ಸಭಾ ಭವನದಲ್ಲಿ ರಮಾ ಬಾಯಿಯನ್ನು ಸ್ವಾಗತಿಸಿ, ಸಂಸ್ಕೃತದಲ್ಲಿ ಒಂದು ಬಹುಮಾನ ಪತ್ರವನ್ನು ಸಲ್ಲಿಸಿದರು. ಈ ಬಹುಮಾನ ಪತ್ರದ ಪ್ರಥಮ ಶ್ಲೋಕವು ಹೀಗಿತ್ತು:

॥ ಯುಯಾಭವತ್ಯಾಚಕಿತಾಃ । ಪಂಡಿತಾ ಈದೃಶಾವಯಂ ॥
॥ ತತೋ ಮನ್ಯಾಮಹೇ । ಸಾಕ್ಷಾತ್ ವರ್ತತೇತ್ರ ಸರಸ್ವತೀ ॥

ಭಾವಾರ್ಥ: ಯಾವ ತನ್ನ ಪಾಂಡಿತ್ಯದಿಂದ ದೊಡ್ಡ ದೊಡ್ಡ ಪಂಡಿತ ರನ್ನು ನೀವು ಚಕಿತಗೊಳಿಸಿದ್ದೀರೋ? ಅಂಥಾ ಮಹಿಮೆಯುಳ್ಳ ನೀವು ಸಾಧಾರಣ ಮನುಷ್ಯ ವರ್ಗಕ್ಕೆ ಸೇರಿದವರೆಂದು ನಾವು ಭಾವಿಸುವುದಿಲ್ಲ. ಸರಸ್ವತೀ ದೇವಿಯೇ ಸಾಕ್ಷಾತ್ ನಮ್ಮ ಮುಂದೆ ಬಂದು ನಿಂತಿರುವಳೆಂದು ನಾವು ಭಾವಿಸುತ್ತೇವೆ.

ಈ ಮಾನಪತ್ರಕ್ಕೆ ನಿಂತಲ್ಲಿಯೇ ಶ್ಲೋಕ ರಚಿಸಿ ರಮಾಬಾಯಿಯು ಉತ್ತರಿಸಿದಳು:

॥ ಭವದ್ಭಿರ್ಯಾನಿ ಪುಷ್ಪಾಣಿ । ಪ್ರಕ್ಷಿಪ್ತಾನಿ ಮಮೋಪರಿ ॥
॥ ಅಹಂ । ನತತ್ ಪಾತ್ರಭೂತಾ । ನ ತಥೈವಾಸ್ಮಿ । ಪಂಡಿತಾ ॥
॥ ಪರ್ವತಾಕಾರ ಸದೃಶಾ । ಭವದ್ಭಿರ್ಮೇಗುಣಾಃ ಸ್ಮೃತಾಃ ॥
॥ ಪರಮಾಣು ಸಮಾಸ್ತೇಶುಃ । ಕಿಂ ತ್ವೇತತ್ ಗುಣಗೌರವಂ ॥
॥ ನಾಹಂ ಸರಸ್ವತೀ । ಸಾಕ್ಷಾತ್ ಮನ್ಯದ್ವೇಮಾಂ ನ ಶಾರದಾಂ ॥
॥ ಕಿಂ ತು ತಸ್ಯಾಃ । ಸಭಾಮಧ್ಯೇ ಏಕಾಹಂ । ಪರಿಚಾರಿಕಾ ॥

ಭಾವಾರ್ಥ: ಮಹನೀಯರೇ, ನೀವು ಅಪ್ಪಣೆ ಕೊಡಿಸಿದ ಸ್ತುತಿ ಸ್ತೋತ್ರಗಳಿಗೆ ನಾನು ಅಪಾತ್ರಳು ಇಷ್ಟು ಮಾತ್ರ ಹೇಳಬಲ್ಲೆ. ಸರಸ್ವತೀ ದೇವಿಯ ಭವ್ಯ ಆಸ್ಥಾನದಲ್ಲಿ ನಾನೋರ್ವ ಬಡ ಸೇವಕಿ ಮಾತ್ರ ಆಗಿದ್ದೇನೆ.

ನಿಮ್ಮ ಈ ಸ್ತುತಿಯು, ನಿಮ್ಮ ಒಳ್ಳೆತನವನ್ನೂ ಗುಣಗ್ರಾಹಕತೆಯನ್ನೂ ತೋರಿಸುತ್ತದೆ. ತಮ್ಮಂತಹ ವಿದ್ವಾಂಸರು ನನ್ನ ವಿಷಯದಲ್ಲಿ ಉಚ್ಚರಿಸಿದ ಮಾತುಗಳಿಂದ ನಿಮ್ಮಂತಹವರು ಇರುವ ಈ ನಗರಕ್ಕೆ ಬಂದ ನಾನು ಧನ್ಯಳು. ಈ ಸಭೆಯಲ್ಲಿ ಇನ್ನೂ ಅನೇಕ ಕವಿತೆಗಳನ್ನು ರಚಿಸಿ ರಮಾಬಾಯಿಯು ನಿಂತಲ್ಲಿಯೇ ಹಾಡಿ ತೋರಿಸಿದಳು. ಅಲ್ಲಿ ಸೇರಿದ ವಿದ್ವಾಂಸರೆಲ್ಲರೂ ರಮಾ ಬಾಯಿಯ ಶೀಘ್ರ ಕವಿತಾ ಶಕ್ತಿಯನ್ನು ಮೆಚ್ಚಿ ಪಂಡಿತಾ ಸರಸ್ವತೀ ಎಂಬ ಬಿರುದನ್ನಿತ್ತು ಗೌರವಿಸಿದರು. ಅಂದಿನಿಂದ ರಮಾಬಾಯಿಗೆ ಪಂಡಿತಾ ರಮಾಬಾಯಿ ಸರಸ್ವತೀ ಎಂಬ ಬಿರುದು ಸರ್ವತ್ರ ಪ್ರಚಾರಕ್ಕೆ ಬಂತು.

ರಮಾಬಾಯಿಯು ಕಲಕತ್ತಾದಲ್ಲಿರುವಾಗ ಇನ್ನೂ ಅನೇಕ ಸಭೆಗಳಲ್ಲಿ ವ್ಯಾಖ್ಯಾನಗಳು ನಡೆದವು. ಈ ಸಭೆಗಳಿಗೆ ಸ್ತ್ರೀಯರೂ ಬರುತ್ತಿದ್ದರು. ಪ್ರಾಚೀನ ಕಾಲದ ಸ್ತ್ರೀಯರ ಸ್ಥಾನವನ್ನೂ ಸಮಕಾಲೀನ ಸ್ಥಿತಿಯನ್ನೂ ಹೋಲಿಸಿ ಸ್ತ್ರೀಯರ ಸರ್ವತೋಮುಖ ಸುಧಾರಣೆಯನ್ನು ಪ್ರತಿಪಾದಿಸಿದಳು. ಇದರ ಪರಿಣಾಮವಾಗಿ ಆನಂದ ಮೋಹನ ಬೋಸರೆಂಬವರು ಒಂದು ಮಹಿಳಾ ಸಭೆಯನ್ನು ಏರ್ಪಡಿಸಿ, ಪಂ. ರಮಾಬಾಯಿಯನ್ನು ವ್ಯಾಖ್ಯಾನಕ್ಕೆ ಕರೆದರು. ಕಲಕತ್ತಾದಲ್ಲಿ ಸೇರಿದ ಮಹಿಳೆಯರ ಸಭೆಯು ಇದೇ ಪ್ರಥಮ ದ್ದಾಗಿದ್ದಿತು. ಈ ಸಭೆಯ ಮಹಿಳೆಯರು ಪಂ. ರಮಾಬಾಯಿಗೆ ವಂಗ ಭಾಷೆಯಲ್ಲಿ ಮಾನಪತ್ರವನ್ನು ಸಮರ್ಪಿಸಿದರು. ಅದರಲ್ಲಿ ಹೀಗೆಂದು ಬರೆದಿದ್ದಿತು—

ಆರ್ಯ ಮಹಿಳೇ, ನೀನು ಭಾರತ ದೇಶದ ಸ್ತ್ರೀಯರ ಭೂಷಣ ವಾಗಿರುವೇ, ನಿನ್ನಲ್ಲಿರುವ ಅಸಾಧಾರಣ ವಿದ್ಯಾ ಮಹಿಮೆಗೆ ಗೌರವ ಸಿಗುವುದು ನಮಗೆಲ್ಲರಿಗೂ ಸಂತೋಷವನ್ನುಂಟುಮಾಡಿದೆ. ಉಚ್ಚ ಶಿಕ್ಷಣದಿಂದಾಗಿ ಮಹಿಳೆಯರು ಹೇಗೆ ಶೋಭಾಯಮಾನರಾಗುತ್ತಾರೆ, ಎಂದು ನಿನ್ನ ಉದಾಹರಣೆಯಿಂದ ತಿಳಿಯುತ್ತದೆ. ಈಗಿನ ಕಾಲದಲ್ಲಿ ಆದರ್ಶ ಮಹಿಳೆಯರ ದೃಷ್ಟಾಂತವನ್ನು ಕೊಡುವುದಾದರೆ ಪರದೇಶಗಳ ಕಡೆಗೆ ನೋಡಬೇಕಾಗು ತ್ತದೆ. ನಮ್ಮ ಪ್ರಾಚೀನ ಸಂಸ್ಕೃತಿಯಂತೇ ಶಿಕ್ಷಣ ಪಡೆದರೆ ಹೇಗೆ ಮುಂದು ವರಿಯಬಹುದೆಂಬುದಾಗಿ ನಿನ್ನ ಉದಾಹರಣೆಯಿಂದ ಗೊತ್ತಾಗುತ್ತದೆ. ಪ್ರಾಚೀನ ಕಾಲದ ಅನೇಕ ಹೆಸರಾಂತ ಸ್ತ್ರೀಯರ ವಿಷಯವಾಗಿ ನಾವು ಓದಿದ್ದೇವೆ. ಪ್ರಾಚೀನ ಕಾಲದ ಸ್ತ್ರೀಯರ ಆದರ್ಶ ನಮಗೆ ನಿನ್ನಲ್ಲಿ ಕಂಡು

ಬರುತ್ತದೆ ಎಂದು ಮುಂತಾಗಿ ಬರೆದಿದ್ದಿತು. ಓರ್ವ ಪಂಡಿತನು ಈ ಮಾನ ಪತ್ರದ ಭಾಷಾಂತರವನ್ನು ರಮಾಬಾಯಿಗೆ ಸಂಸ್ಕೃತದಲ್ಲಿ ಹೇಳಿದನು. ತಕ್ಷಣವೇ ರಮಾಬಾಯಿಯು ಸಂಸ್ಕೃತದಲ್ಲಿಯೇ ಅದನ್ನುತ್ತರಿಸಿದಳು. ಈಗ ರಮಾಬಾಯಿಯ ಕೀರ್ತಿಯು ದೇಶದಾದ್ಯಂತ ಹಬ್ಬಿತು. ಅನೇಕಾನೇಕ ಪತ್ರಿಕೆಗಳು ರಮಾಬಾಯಿಯನ್ನು ಪ್ರಶಂಸಿಸಿದುವು. ಕಲಕತ್ತಾದಲ್ಲಿರುವಾಗ, ಕೇಶವ ಚಂದ್ರಸೇನರು, ಕಾಲೀ ಚರಣ ಬೆನರ್ಜಿಯವರು, ಪಂ. ರಮಾಬಾಯಿಯನ್ನು ಮನೆಗೆ ಕರೆದುಕೊಂಡು ಬಂದು ತಮ್ಮ ಹೆಂಗಸರಿಗೆ ಪರಿಚಯ ಮಾಡಿಕೊಟ್ಟರು. ಕೇಶವ ಚಂದ್ರಸೇನರು ಋಗ್ವೇದದ ಒಂದು ಪ್ರತಿಯನ್ನೂ, ಉಪನಿಷತ್ತುಗಳನ್ನೂ ರಮಾಬಾಯಿಗೆ ಕೊಟ್ಟರು. ಇದಕ್ಕೆ ರಮಾಬಾಯಿಯು ಧರ್ಮಶಾಸ್ತ್ರಗಳಲ್ಲಿ ಸ್ತ್ರೀಯರಿಗೆ ವೇದಾಧಿಕಾರವಿಲ್ಲವೆಂದು ಬರೆದಿದೆ ಎಂದಳು, ಅದಕ್ಕೆ ಕೇಶವ ಚಂದ್ರಸೇನರು ನಕ್ಕು ಸ್ತ್ರೀಯರು ವೇದಾಧ್ಯಯನ ಮಾಡಬಹುದಾಗಿ ಹೇಳಿದರು, ಅಂದಿನಿಂದ ರಮಾಬಾಯಿಯು ವೇದವನ್ನೂ ಉಪನಿಷತ್ತುಗಳನ್ನೂ ಓದಲಿಕ್ಕೆ ಪ್ರಾರಂಭಿಸಿದಳು.

ರಮಾಬಾಯಿಯ ಭಾಷಣಗಳಿಗೆ ಅನೇಕ ಕಡೆಗಳಿಂದ ಕರೆ ಬರತೊಡಗಿತು. ಹಾಗೆಯೇ ಅವರು, ಡಾಕ್ಕಾ ಮುಂತಾದ ಕಡೆಗಳಲ್ಲಿ ಸಂಚರಿಸಿ, ಅಸ್ಸಾಮಿನ ಶಿಲ್ಹಟ್ಟ್, ಜಿಲ್ಲೆಗೆ 1879ನೇ ಸಪ್ಟಂಬರ 17ನೇ ತಾರೀಕಿಗೆ ತೆರಳಿದರು. ಪಂ. ರಮಾಬಾಯಿ, ಅವಳ ಅಣ್ಣ ಶ್ರೀನಿವಾಸನೂ ಶಿಲ್ಹಟ್ಟಿಗೆ ಮುಟ್ಟುವ ಮೊದಲೇ ಅಲ್ಲಿ ಸ್ವಾಗತ ಸಮಿತಿಯು ಏರ್ಪಟ್ಟಿತ್ತು. ಇವರನ್ನು ಮೆರವಣಿಗೆಯಿಂದ ಪಟ್ಟಣಕ್ಕೆ ಕರೆದೊಯ್ದರು. ಅಲ್ಲಿಯ ಮಹನೀಯರೆಲ್ಲರೂ ಈ ಸ್ವಾಗತದಲ್ಲಿ ಭಾಗವಹಿಸಿದ್ದರು. ಮೆರವಣಿಗೆಯು ಅಲ್ಲಿಯ ನಾಟ್ಯಮಂದಿರಕ್ಕೆ ಹೋಯಿತು. ನಾಟ್ಯಮಂದಿರದಲ್ಲಿ ದೊಡ್ಡ ಸಭೆಸೇರಿತು. ಸಂಸ್ಕೃತದಲ್ಲಿ ಮಾನಪತ್ರವನ್ನೂ, ನಿಧಿಯನ್ನೂ ಅರ್ಪಿಸಲಾಯಿತು. ಕಾಲೀ ಚರಣದಾಸ್ ಎಂಬವರು ಮಾನಪತ್ರವನ್ನು ಓದಿದರು. ಪಂ. ರಮಾಬಾಯಿಯು ಈ ಮಾನಪತ್ರಕ್ಕೆ ದೀರ್ಘವಾದ ಉತ್ತರ ಭಾಷಣವನ್ನು ಸಂಸ್ಕೃತದಲ್ಲಿ ಕೊಟ್ಟಳು. ಅಧ್ಯಕ್ಷ ಸ್ಥಾನದಲ್ಲಿ ಶಿಲ್ಹಟ್ ಜಿಲ್ಲಾ ಡೆಪ್ಯುಟಿ ಕಮೀಷನರ್ ಮಿ. ಜಾನ್ಸನ್‌ರವರು ಇದ್ದರು. ಅಲ್ಲಿಯ ಪಂಡಿತರು ಸಂಸ್ಕೃತಸಾಹಿತ್ಯದಲ್ಲಿ ಪರಿಪರಿಯಾಗಿ ಪಂಡಿತೆಯನ್ನು ಪರೀಕ್ಷಿಸಿದರು. ಎಲ್ಲದಕ್ಕೂ ಪಂ. ರಮಾಬಾಯಿ ಸಮರ್ಪಕವಾದ ಉತ್ತರಗಳನ್ನು ಕೊಟ್ಟಳು. ಶಿಲ್ಹಟ್ಟ್, ಜಿಲ್ಲಾ

ಸ್ಕೂಲ್, ವಿದ್ಯಾರ್ಥಿಗಳು ತಮ್ಮ ಸ್ಕೂಲಿನಲ್ಲಿ ಉಪನ್ಯಾಸವನ್ನು ಮಾಡುವಂತೆ, ರಮಾಬಾಯಿಯನ್ನು ವಿನಂತಿಸಿದರು. ಅಲ್ಲಿ ಅವಳಿಗೆ ಚಿನ್ನದ ಉಂಗುರವನ್ನು ಬಹುಮಾನವಾಗಿಕೊಟ್ಟರು. ಅನಂತರ ಗಿರೀಶ ವಿದ್ಯಾಲಯದಲ್ಲಿ ವ್ಯಾಖ್ಯಾನಕ್ಕೆ ಆಮಂತ್ರಣ ಬಂದಿತು. ಗಿರೀಶ ವಿದ್ಯಾಲಯುವನ್ನು ತೋರಣಗಳಿಂದ ಶೃಂಗರಿಸಿದ್ದರು. ಮಹಾದ್ವಾರದ ಎದುರು ಹೀಗೆ ಬರೆದಿತ್ತು—

"ರಮೇರಮಾ ಸಮಾಗಚ್ಛ ಕೃಪಯಾ ಛಾತ್ರ ಮಂದಿರೇ."

ಈ ಸಭೆಗೆ ಡೆಪ್ಯೂಟಿ ಕಮಿಷನರರು, ಸರಕಾರಿ ಅಧಿಕಾರಿಗಳೂ, ಆಂಗ್ಲೇಯರೂ, ಹಾಜರಿದ್ದರು. ಸ್ವಾಗತ ಭಾಷಣವನ್ನು ಶ್ರೀ ಬಿಪೀನ ವಿಹಾರಿದಾಸ್ ಮೇಧಾವಿ ಎಂಬವರು ಮಾಡಿದರು. ಇವರು ರಮಾಬಾಯಿಯ ಪೂರ್ವ ಚರಿತ್ರೆಯನ್ನು ಒಳ್ಳೆ ಪ್ರಭಾವಶಾಲಿಯಾಗಿ ವರ್ಣಿಸಿದರು. ಇದೇ ಸಮಯದಲ್ಲಿ ಶ್ರೀನಿವಾಸನಿಗೂ ಬಿಪಿನ್ ವಿಹಾರಿದಾಸರಿಗೂ ಪರಿಚಯವಾಗಿ ದೃಢ ಸ್ನೇಹದಲ್ಲಿ ರೂಪಾಂತರಗೊಂಡಿತು.

೮. ದಾಂಪತ್ಯ ಜೀವನ

ಇಪ್ಪತ್ತು ವರ್ಷ ವಯಸ್ಸಾದರೂ ಇನ್ನೂ ಅವಿವಾಹಿತಳಾಗಿದ್ದ ಪಂ. ರಮಾಬಾಯಿಯ ವಿಷಯ ಜನರಿಗೆ ಒಂದು ಚರ್ಚಾ ಸಂಗತಿಯಾಗಿತ್ತು. ಅನಂತ ಶಾಸ್ತ್ರಿಯು ಜೀವಂತವಿರುವಾಗಲೇ ರಮಾಬಾಯಿಯ ಲಗ್ನದ ವಿಚಾರವನ್ನು ಮಾಡಲಿಲ್ಲ. ಅವಳು ವಿದ್ಯಾವಂತೆಯಾದ ಮೇಲೆ ತನಗೆ ಅನುರೂಪನಾದ ಗಂಡನನ್ನು ವರಿಸುವಳು ಎಂದು ಅವನು ಯೋಚಿಸಿದ್ದನು. ರಮಾಬಾಯಿಯ ಅಕ್ಕ ಕೃಷ್ಣಾಬಾಯಿಗೆ ಗಂಗಾಮೂಲದಲ್ಲಿರುವಾಗ ಲಗ್ನ ಮಾಡಿ ಶಾಸ್ತ್ರಿಯು ನಿರಾಶನಾಗಿದ್ದನು. ಕೃಷ್ಣಾಬಾಯಿಯ ಗಂಡನು ವಿದ್ಯಾಭ್ಯಾಸಕ್ಕಾಗಿ ಗಂಗಾಮೂಲದಲ್ಲಿಯೇ ಇದ್ದು ಒಂದು ದಿನ ಹೇಳದೇ ಕೇಳದೆ ಪಲಾಯನ ಮಾಡಿದ್ದನು. ಅವನಾದರೋ. ಉಂಡು ತಿರುಗಾಡುವ ಸೋಮಾರಿಯಾಗಿದ್ದನು. ತನ್ನ ಕುಟುಂಬದ ಪಾಲನಪೋಷಣೆಗೆ ಅಸಮರ್ಥನಾಗಿದ್ದನು. ಇದರಿಂದಾಗಿ ಕೃಷ್ಣಾಬಾಯಿಯು ತಂದೆಯ ಸಮೀಪದಲ್ಲಿಯೇ ಕಾಲಕಳೆಯಬೇಕಾಯಿತು. ಅನಂತ ಶಾಸ್ತ್ರಿಯು ಅಂತ್ಯಕಾಲದಲ್ಲಿಯೇ ರಮಾಬಾಯಿಯನ್ನು ಕರೆದು "ಮಗಳೇ,! ನಿನ್ನನ್ನು ದೇವರೇ ಕಾಪಾಡುವನು" ಎಂದು ಹೇಳಿದ್ದನು. ಇದನ್ನು ತಿಳಿದ ಅನೇಕ ಜನರು ರಮಾಬಾಯಿಯನ್ನು

ಶಾಸ್ತ್ರಿಯು ಪಂಢರಪುರದ ವಿಠೋಬ ದೇವರಿಗೆ ದೇವದಾಸಿಯಾಗಿ ಬಿಟ್ಟಿದ್ದನೆಂದೂ ಆಡಿಕೊಳ್ಳುತ್ತಿದ್ದರು. ಇನ್ನು ಕೆಲವರು ಇವಳ ಯುಕ್ತಿವಂತನಾದ ತಂದೆ ವೈಧವ್ಯಯೋಗವನ್ನು (ಲಗ್ನ ಕುಂಡಲಿಯಲ್ಲಿ ಸಪ್ತಮ ಸ್ಥಾನದಲ್ಲಿ ಅಂಗಾರಕನಿರುವುದು) ತಪ್ಪಿಸಲಿಕ್ಕಾಗಿ ವಿವಾಹಮಾಡಿಕೊಡಲಿಲ್ಲ ಎಂದು ನಾನಾ ರೀತಿಯಿಂದ ಆಡಿಕೊಳ್ಳುತ್ತಿದ್ದರು. ವಾಸ್ತವಿಕವಾಗಿ ನೋಡಿದರೆ ಅನಂತ ಶಾಸ್ತ್ರಿಯು ಇಂಥ ಮೂಢ ನಂಬಿಕೆಯುಳ್ಳವನಲ್ಲ. ದಕ್ಷಿಣದೇಶದ ಪದ್ಧತಿಯಂತೆ ಭೂತಗಳನ್ನು ನಂಬುವುದೂ, ದೇವದೇವಿಯರ ಹೆಸರಿನಲ್ಲಿ ಹುಡುಗಿಯರನ್ನು ಬಿಡುವುದೂ ಹುಚ್ಚುತನವೆಂದು ಹೇಳುತ್ತಿದ್ದುದನ್ನು ರಮಾಬಾಯಿಯೇ ಕೇಳಿದ್ದಳು. ಸ್ವಜನರಿಗೂ, ಸಮಾಜಕ್ಕೂ ವಿರೋಧವಾಗಿ ಸ್ತ್ರೀಯರಿಗೆ ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡುತ್ತಿದ್ದನು. ನಿಸ್ಪೃಹಸ್ಯತೃಣಂ ಜಗತ್, ಎಂಬಂತೆ ಅನಂತ ಶಾಸ್ತ್ರಿಯು ನಿಸ್ಪೃಹನಾಗಿದ್ದುದರಿಂದ ಸಮಾಜವು ನಾನಾ ರೀತಿಯ ತೊಂದರೆ ಕೊಟ್ಟರೂ ಅವನು ಹೆದರಲಿಲ್ಲ. ಹೀಗೆ ಅಣ್ಣತಂಗಿಯರು ಬಂಗಾಲ ದೇಶವನ್ನೆಲ್ಲಾ ಸಂಚರಿಸಿ 1880ರಲ್ಲಿ ಡಾಕ್ಕಾ ಪಟ್ಟಣಕ್ಕೆ ಬಂದು ಸೇರಿದರು. ರಮಾಬಾಯಿಯ ಅಣ್ಣ ಶ್ರೀನಿವಾಸ ಶಾಸ್ತ್ರಿಗೂ ಶಿಲ್ಹಟ್ ಜಿಲ್ಲೆಯ ಬಿಪೀನ್ ವಿಹಾರಿದಾಸನಿಗೂ ಸ್ನೇಹಾಚಾರ ಇದ್ದುದು ಈ ಮೊದಲೇ ಸೂಚಿಸಿದೆಯಷ್ಟೇ? ಬಿಪೀನ್ ಬಾಬೂ ಆಗಾಗ ಇವರನ್ನು ಭೇಟಿಮಾಡಿ ಸ್ಫುರದ್ರೂಪಿಯಾದ ರಮಾಬಾಯಿಯೊಡನೆ "ನನ್ನನ್ನು ವರಿಸಿ ಗೃಹಲಕ್ಷ್ಮಿಯಾಗು" ಎಂದು ಕೇಳಿಕೊಳ್ಳುತ್ತಿದ್ದನು. ಎಮ್. ಎ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಸ್ವತಂತ್ರೋದ್ಯೋಗದಲ್ಲಿದ್ದ ಆ ತರುಣ ನ್ಯಾಯವಾದಿಯನ್ನು ಮದುವೆಯಾಗಲು ಯಾವ ಆತಂಕವೂ ಇರಲಿಲ್ಲವಾದರೂ ರಮಾಬಾಯಿಯು ಬಿಪೀನ್ ಬಾಬುವಿಗೆ ಹೀಗೆಂದು ಉತ್ತರಿಸಿದಳು. "ಇಲ್ಲ! ಇಲ್ಲ! ನಾನು ಇನ್ನೂ ಮದುವೆಯ ಯೋಚನೆ ಮಾಡಲಿಲ್ಲ, ಈ ವಿಷಯದಲ್ಲಿ ನನ್ನ ಅಣ್ಣನ ಮತವನ್ನು ಅನುಮೋದಿಸಬೇಕಾಗುತ್ತದೆ. ಹಾಗೆ ಮದುವೆಯ ಯೋಚನೆಯನ್ನು ಮಾಡುವಾಗ ನಿಮ್ಮನ್ನೇ ಖಂಡಿತ ವರಿಸುತ್ತೇನೆ ಎಂದು ವಾಗ್ದಾನ ಮಾಡಿದಳು. ಡಾಕ್ಕಾದಲ್ಲಿರುವಾಗ ಶ್ರೀನಿವಾಸನು ತುಂಬಾ ನಿತ್ರಾಣಿಯಾಗಿದ್ದನು. ಮದ್ರಾಸಿನಲ್ಲಿರುವಾಗ ಅನುಭವಿಸಿದ ಕ್ಷಾಮದ ಕಷ್ಟ ಅಲ್ಲದೆ, ನಾಲ್ಕು ಸಾವಿರ ಮೈಲುಗಳ ಕಾಲ್ನಡಿಗೆಯ ಪ್ರವಾಸ, ಇದರಿಂದಾಗಿ ಶ್ರೀನಿವಾಸನು ತುಂಬಾ ಬಳಲಿದ್ದನು.

ಈ ಕಾರಣಗಳಿಂದಾಗಿ ಅವನು ಹಾಸಿಗೆ ಹಿಡಿದನು. ತರುಣ ವಯಸ್ಸಿನ ತಂಗಿಯ ಭವಿತವ್ಯದ ಕುರಿತು ವ್ಯಸನ ಪಟ್ಟು ದೇವರ ಮೇಲೆ ಭಾರ ಹಾಕಿ 1880ನೇ ಇಸವಿಯ ಮೇ ತಿಂಗಳು 8ನೇ ತಾರೀಕಿಗೆ ದೈವಾಧೀನನಾದನು. ಅಣ್ಣನ ಮರಣಾನಂತರ ರಮಾಬಾಯಿಯು ಅತ್ಯಂತ ಶೋಕಾಕುಲಿತಳಾದಳು. ಅನಂತರ ಅವಳು ಪೂರತ್ತಿಗೆ ಹೋಗಿ ದಯಾನಂದ ಸರಸ್ವತಿಯವರನ್ನು ಭೇಟಿಯಾದಳು. ಶ್ರೀನಿವಾಸನ ಮರಣದ ವಾರ್ತೆಯು ಆಗ ಮಹಾರಾಷ್ಟ್ರದಲ್ಲಿ ಕೂಡಾ ಹಬ್ಬಿತು. ಮುಂಬಯಿ ಕಡೆಯ ಕೆಲವು ಮಹನೀಯರು ರಮಾಬಾಯಿಯನ್ನು ಭೇಟಿಯಾಗಿ ಅವಳು ವಿವಾಹಿತಳಾಗಿ ಮುಂಬೈಯ ಒಂದು ಕನ್ಯಾ ಶಾಲೆಯ ಮುಖ್ಯೋಪಾಧ್ಯಾಯಳಾಗುವಂತೆ ವಿನಂತಿಸಿದರು. ಹಾಗೆ ಮಾಡುವುದು ಯೋಗ್ಯವೆಂದು ಅವಳು ನಿಶ್ಚಯಿಸಿದಳು. ಆದರೆ ವಿಧಿಘಟನೆ ಬೇರೆಯಾಗಿತ್ತು. ಕಲಕತ್ತಾದಲ್ಲಿ ಕೂಡ ಅನೇಕರು ವಿವಾಹವಾಗುವಂತೆ ಬೋಧಿಸಿದರು. ಸುಂದರ ರೂಪಿಯಾದ ರಮಾಬಾಯಿಯ ಮೇಲೆ ಅನೇಕರಿಗೆ ಕಾಕದೃಷ್ಟಿ ಕೂಡಾ ಬಿತ್ತು! ಇದರಿಂದ ಉಳಿಯುವ ಒಂದೇ ಮಾರ್ಗವೆಂದರೆ ವಿವಾಹ ಬದ್ಧಳಾಗಿ ಸಂಸಾರ ಜೀವನವನ್ನು ಸಾಗಿಸುವುದು ಎಂದು ರಮಾಬಾಯಿಯು ಯೋಚಿಸಿದಳು. ಶ್ರೀನಿವಾಸನ ಮರಣ ವಾರ್ತೆಯನ್ನು ಕೇಳಿದ ಬಿಪೀನ್ ಬಾಬುವು ರಮಾಬಾಯಿಯನ್ನು ಭೇಟಿಯಾಗಿ ಶ್ರೀನಿವಾಸನ ಮರಣದ ಕುರಿತು ವ್ಯಸನಪಟ್ಟು ಮುಂದೆ ಏಕಾಕಿನಿಯಾಗಿ ತೊಂದರೆಗೆ ಸಿಕ್ಕುವುದಕ್ಕಿಂತ, ಹಿಂದೆ ವಾಗ್ದಾನ ಮಾಡಿದಂತೆ ತನ್ನನ್ನು ವಿವಾಹವಾಗುವುದು ಯೋಗ್ಯವೆಂದು ಸೂಚಿಸಿದನು. ಇದಕ್ಕೆ ರಮಾಬಾಯಿಯು ಸಮ್ಮತಿಸಿದಳು. ಹೀಗೆ ರಮಾಬಾಯಿಯ ವಿವಾಹವು, ಬಿಪೀನ್ ವಿಹಾರಿದಾಸ್ ಮೇಧಾವಿ, ಇವನೊಂದಿಗೆ 13 ಜೂನು 1880ರಲ್ಲಿ ಸಿವಿಲ್ ಮೆರೇಜ್ ಏಕ್ಟ್, (ವಿವಾಹ ನಿಬಂಧನೆ) ಪ್ರಕಾರ ಬಾಂಕಿಪುರ ಎಂಬಲ್ಲಿ ನಡೆಯಿತು. ಬಿಪೀನ್ ಬಾಬುವು ಎಮ್. ಎ. ಪದವಿಯಲ್ಲಿ ಉತ್ತೀರ್ಣನಾಗಿದ್ದು ಪ್ರಸಿದ್ಧ ನ್ಯಾಯವಾದಿಯಾಗಿದ್ದನು. ದೇಶಭಕ್ತ, ಬಿಪೀನ್ ಚಂದ್ರಪಾಲರ ಸಹಾಧ್ಯಾಯಿಯಾಗಿದ್ದನು. 1879ರಲ್ಲಿ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಅವನು ಬಿ. ಎಲ್. ಪಾಸಾದನು. ರಸಾಯನ ಶಾಸ್ತ್ರದಂತಹ ಕಠಿಣ ವಿಷಯವನ್ನು ತೆಗೆದುಕೊಂಡು ಎಮ್. ಎ. ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯದಲ್ಲಿಯೇ ಪ್ರಥಮ ಸ್ಥಾನಗಳಿಸಿದ್ದನು. "ರಸಾಯನ ಶಾಸ್ತ್ರದ

ಉಪಕ್ರಮಣಿಕೆ?" ಎಂಬ ರಸಾಯನ ಶಾಸ್ತ್ರದ ಪಾರಿಭಾಷಿಕ ಶಬ್ದಗಳ ಒಂದು ಅಮೂಲ್ಯವಾದ ಗ್ರಂಥವನ್ನು, ಬಿಪೀನ್ ಬಾಬುವು ಬರೆದಿದ್ದನು. ಅದು ಬಂಗಾಲ ಪ್ರಾಂತದ ದೇಶಭಾಷೆಯಲ್ಲಿ ಬರೆದ ರಸಾಯನ ಶಾಸ್ತ್ರದ ಪ್ರಥಮ ಪುಸ್ತಕವಾಗಿತ್ತು. ಬಿಪೀನ್ ಬಾಬುವು ಸಂಗೀತ ಕಲೆಯಲ್ಲಿಯೂ ನುರಿತವನಾಗಿದ್ದನು. ರಮಾಬಾಯಿಯು ಮಾಡಿಕೊಂಡ ಈ ವಿವಾಹವು ಪ್ರತಿಲೋಮವಾಗಿತ್ತು. (ಬ್ರಾಹ್ಮಣ ಜಾತಿಯ ಹುಡುಗಿ ಶೂದ್ರ ಜಾತಿಯ ಹುಡುಗನೊಂದಿಗೆ ಮಾಡಿಕೊಂಡ ವಿವಾಹ) ಬಿಪೀನ್ ಬಾಬುವು ಬಂಗಾಳಿ ಶೂದ್ರ ಕುಲದವನಾಗಿದ್ದನು. ಈ ವಿವಾಹದಿಂದ ರಮಾಬಾಯಿಗೆ ಮುಂದೆ ಇಡೀ ಜೀವಮಾನದಲ್ಲಿಯೇ ತಿರಸ್ಕಾರ ತಪ್ಪಲಿಲ್ಲ. ರಮಾಬಾಯಿಗೆ ಅನುರೂಪರಾದ ವರರಿಗೆ ಬ್ರಾಹ್ಮಣರಲ್ಲಿ ಕೊರತೆಯಿರಲಿಲ್ಲ. ಐ. ಸಿ. ಎಸ್. ಪದವಿಯಲ್ಲಿ ಉತ್ತೀರ್ಣನಾಗಿ ದೊಡ್ಡ ಸರಕಾರೀ ಉದ್ಯೋಗದಲ್ಲಿದ್ದ ಶ್ರೀಪಾದ ಬಾಬಾಜಿ ಠಾಕೂರ್ ಎಂಬವನು ರಮಾಬಾಯಿಯನ್ನು ಮದುವೆಯಾಗಲು ತುಂಬಾ ಪ್ರಯತ್ನಪಟ್ಟಿದ್ದನು. ಸಂಸ್ಕೃತ ವಿದ್ವಾಂಸನಾದ ಠಾಕೂರನಿಗೆ ಸಂಸ್ಕೃತ ವಿದುಷಿಯಾದ ಪಂಡಿತಾ ರಮಾಬಾಯಿಯನ್ನು ವರಿಸಲು ತುಂಬಾ ಆತುರವಿದ್ದಿತು. ಆದರೆ ಅದಕ್ಕೆ ರಮಾಬಾಯಿಯಿಂದ ಪುರಸ್ಕಾರ ಸಿಕ್ಕಲಿಲ್ಲ. ಅವಳು ಮೊದಲು ವಾಗ್ದಾನ ಮಾಡಿದಂತೆ ಬಿಪೀನ್ ಬಾಬುವನ್ನೇ ವರಿಸಿದಳು. ಈ ಪ್ರಶ್ನೆಯು ಬಂದಾಗ ರಮಾಬಾಯಿ, "ನಾನು ಯಾವ ಪ್ರಲೋಭನ ಅಥವಾ ಒತ್ತಾಯಕ್ಕಾಗಿ ಬಿಪೀನ್ ಬಾಬುವನ್ನು ವರಿಸಿದವಳಲ್ಲ. ನಾನು ಮನಃಪೂರ್ವಕ ಆತನನ್ನು ಮೆಚ್ಚಿ ಆತ್ಮ ಸಾಕ್ಷಿಗೆ ಸರಿಯಾಗಿ ವರಿಸಿದೆನಲ್ಲದೆ ಅನ್ಯಥಾ ಅಲ್ಲ" ಎಂದು ಉತ್ತರಿಸಿದಳು. ಬಿಪೀನ್ ವಿಹಾರಿದಾಸ್ ಮೇಧಾವಿ ಶೂದ್ರನಾದರೇನು? ಬ್ರಾಹ್ಮಣನಾದರೇನು? ಅವನು ನಿಜವಾದ ಮೇಧಾವಿಯಾಗಿದ್ದನು. ಅವನ ಅಸಾಧಾರಣ ವ್ಯಕ್ತಿತ್ವವು ರಮಾಬಾಯಿಯನ್ನು ಆಕರ್ಷಿಸಿತು. ಅಲ್ಲಿ ಜಾತಿಯ ಪ್ರಶ್ನೆಯು ಎಡೆಯಿಲ್ಲ. ಈ ಸಂದರ್ಭದಲ್ಲಿ ಮಹಾಭಾರತದಲ್ಲಿ ಕರ್ಣನಿಗೆ ಸೂತ ಪುತ್ರನೆಂದು ಹೀಯಾಳಿಸುವವರಿಗೆ ಕರ್ಣನು ಕೊಟ್ಟ ಉತ್ತರವು ನೆನಪಿಗೆ ಬರುತ್ತದೆ.

॥ ವಿಪ್ರೀಃಶೂದ್ರೋತಿ ಶೂದ್ರೋ ವಾ ॥
॥ ಯೋವಾಕೋವಾ ಭವಾಮ್ಯ ಹಂ ॥
॥ ದೈವಾಯತ್ತಂ । ಕುಲೇ ಜನ್ಮ ॥
॥ ಮದಾಯತ್ತಂತು । ಪೌರುಷಂ ॥

ಬಿಪೀನ್ ಬಾಬು ರಮಾಬಾಯಿಯನ್ನು ಮದುವೆಯಾಗುವುದು ಅವನ ಜಾತಿಯವರಿಗೂ ಇಷ್ಟವಿರಲಿಲ್ಲ. ಆದಕಾರಣವೇ ಈ ವಿವಾಹವು ರಿಜಿಸ್ಟರ್ಡ್ ಪದ್ಧತಿಯಿಂದ ನಡೆಯಿತು. ಮುಂದೆ ಬಿಪೀನ್ ಬಾಬುವು ಜಾತಿ ಬಹಿಷ್ಕೃತನಾದನು. ಮದುವೆಯಾದ ನಂತರ ಬಿಪೀನ್ ಬಾಬುವು ಶಿಲ್ಚೀಟಿನಲ್ಲಿ ವಕೀಲಿ ವೃತ್ತಿಯನ್ನು ಕೈಕೊಂಡನು. ಹೀಗೆ ಈ ದಾಂಪತ್ಯ ಜೀವನ ಹದಿನೆಂಟು ತಿಂಗಳ ವರೆಗೆ ಸುಖಮಯವಾಗಿ ಸಾಗಿತು. ಬಿಪೀನ್ ಬಾಬುವಿನ ಮನೆಯಲ್ಲಿ ಹೇರಳವಾದ ಪುಸ್ತಕ ಭಂಡಾರವಿತ್ತು. ಅದರಲ್ಲಿ ಬಂಗಾಳಿ ಬಾಷೆಯಲ್ಲಿ ಬರೆದ "ಲೂಕನ ಶುಭವರ್ತಮಾನ" ಎಂಬ ಪುಸ್ತಕವಿದ್ದಿತು. ವಿಚಾರ ಪೂರ್ವಕವಾಗಿ ಬರೆದ ಈ ಪುಸ್ತಕವನ್ನು ಓದಿ ಅವಳ ಮನಸ್ಸು ಕ್ರೈಸ್ತ ಮತದ ಕಡೆಗೆ ತಿರುಗಿತು. ಒಂದು ವರ್ಷದ ಒಳಗೆ ಎಂದರೆ ತಾರೀಕು 16ನೇ ಎಪ್ರೀಲ್ 1881ರಲ್ಲಿ ರಮಾಬಾಯಿಯು ಹೆಣ್ಣು ಶಿಶುವನ್ನು ಹೆತ್ತಳು. ಈ ಮಗುವಿಗೆ ಮನೋರಮೆ ಎಂದು ಹೆಸರಿಟ್ಟರು. ಆದರೆ ಈ ಸುಖಸಮಾಧಾನಗಳು ಹೆಚ್ಚು ದಿನ ಉಳಿಯಲಿಲ್ಲ. ರಮಾಬಾಯಿಯು ಫ್ಲೂ ಜ್ವರದಿಂದ ಮಲಗಿ ಬಿಟ್ಟಳು. ಅದೇ ದಿನ ಇವಳ ಸೇವಕಿಯೂ ಜ್ವರದಲ್ಲಿ ಹಾಸಿಗೆ ಹಿಡಿದಳು. ಈ ದಿನ ಬಿಪೀನ್ ಬಾಬುವಿಗೆ ಕೋರ್ಟಿನಲ್ಲಿ ಒಂದು ಮಹತ್ವದ ಮೊಕದ್ದಮೆಯಿದ್ದುದರಿಂದ ಮನೆಯ ಕಡೆ ಗಮನಕೊಡಲು ಸಾಧ್ಯವಾಗಲಿಲ್ಲ. ಸಾಯಂಕಾಲ ಬಂದು ಮನೆಯವರು ಹಾಸಿಗೆ ಹಿಡಿದುದನ್ನು ಕಂಡನು. ಮನೋರಮೆಯ ಲಾಲನೆಪಾಲನೆಯನ್ನೂ ನೋಡುವವರು ಇರಲಿಲ್ಲ. ಇದರಿಂದಾಗಿ ಬಿಪೀನ್ ಬಾಬುವಿಗೆ ವೇಳೆಗೆ ಸರಿಯಾಗಿ ಆಹಾರ-ಪಾನೀಯಗಳು ತಪ್ಪಿದುವು. ಅವನೂ ಕಾಲರಾದಿಂದ ಮಲಗಿ ಬಿಟ್ಟನು. ಔಷಧ-ಉಪಚಾರಗಳು ಸಫಲವಾಗದೆ ಬಿಪೀನ್ ಬಾಬುವು ತೀರಿಕೊಂಡನು. ಹೀಗೆ ತಂದೆ, ತಾಯಿ, ಅಣ್ಣ, ಗಂಡ ಎಲ್ಲರೂ ಒಬ್ಬೊಬ್ಬರಾಗಿ ಅಡಗಿಹೋದುದರಿಂದ ರಮಾಬಾಯಿಗೆ ಅಸಹನೀಯವಾದ ಕ್ಲೇಶವು ಬಂದೊದಗಿತು. ಮುಂದೆ ತನ್ನವರೆಂಬವರು ಯಾರೂ ಇಲ್ಲದಿರುವ ಕಾರಣ ಅಲ್ಲಿರಲು ಅವಳು ಇಷ್ಟಪಡಲಿಲ್ಲ. ಈ ಬಾರಿ ಅವಳು ಏಕಾಕಿನಿಯಾಗಿರಲಿಲ್ಲ, ಕೈಯಲ್ಲಿ ನಾಲ್ಕು ತಿಂಗಳ ಮಗು ಮನೋರಮೆ ಇದ್ದಳು! ಇನ್ನು ಮುಂದೆ ಇಂಗ್ಲಿಷು ವಿದ್ಯಾಭ್ಯಾಸ ಮಾಡಬೇಕೆಂದು ಮನಸ್ಸು; ಆದುದರಿಂದ ಮದ್ರಾಸಿನ ಕಡೆಗೆ ಹೋದಳು. ಆದರೆ ಅಲ್ಲಿಯ ಸ್ಥಿತಿಗತಿಗಳು ಅವಳಿಗೆ ಸರಿ ಬೀಳದೆ ಇದ್ದ ಕಾರಣ ಮಹಾರಾಷ್ಟ್ರದ ಪೂಣಾ ಪಟ್ಟಣವನ್ನು ಸೇರಿದಳು.

೯. ಸಾರ್ವಜನಿಕರ ಸೇವೆಗೆ ಪ್ರಾರಂಭ

ರಮಾಬಾಯಿ ಪುಣೆಗೆ ಬರುವ ಮೊದಲೇ ಅವಳ ಕೀರ್ತಿ ಪುಣೆ ಪಟ್ಟಣಕ್ಕೆ ಬಂದು ಮುಟ್ಟಿತ್ತು. ಆಗ ಪೂಣಾ ಪಟ್ಟಣದಲ್ಲಿ ಲೋಕಮಾನ್ಯ ತಿಲಕ, ಗೋಪಾಳ ಗಣೇಶ ಆಗರಕರ, ನ್ಯಾಯ್ಯಮೂರ್ತಿ ಮಹಾದೇವ ಗೋವಿಂದ ರಾನಡೆ, ಮೊದಲಾದ ಮುಂದಾಳುಗಳು ಅನೇಕ ರೀತಿಗಳಿಂದ ಜನಗಾಗೃತಿಯನ್ನು ಉಂಟುಮಾಡುತ್ತಿದ್ದರು. ಮಾಜೀ ರಾಷ್ಟ್ರಪತಿ, ಡಾ. ರಾಜೇಂದ್ರ ಪ್ರಸಾದರು, ಪೂಣಾ ಪಟ್ಟಣವನ್ನು ಕಾರ್ಯಕರ್ತರ ಕೇಂದ್ರ, ಎಂದಿದ್ದರು. ಈ ಪರಂಪರೆಯು ಮೊದಲಿನಿಂದಲೂ, ಇಲ್ಲಿ ನಡೆದು ಬಂದಿತ್ತು. ನ್ಯಾಯಮೂರ್ತಿ ರಾನಡೆಯವರು ತನ್ನ ಕುಶಲವಾದ ಬುದ್ಧಿ ಚಾತುರ್ಯದಿಂದ ಮಹಾರಾಷ್ಟ್ರದ ಜನರಲ್ಲಿ ನವಚೈತನ್ಯವನ್ನು ತುಂಬಿದ್ದರು.

ನ್ಯಾಯಮೂರ್ತಿ ರಾನಡೆಯವರ ಪತ್ನಿ ಸೌ। ರಮಾಬಾಯಿ ರಾನಡೆ ಯವರು, ಪಂ. ರಮಾಬಾಯಿಯನ್ನು ವಿಶೇಷವಾಗಿ ಉಪಚರಿಸಿ ಗೌರವಿಸಿದಳು. ಪಂ. ರಮಾಬಾಯಿಯ ಪುರಾಣ ಪ್ರವಚನವು ಪುಣೆಯಲ್ಲಿ ಪ್ರಥಮವಾಗಿ ನ್ಯಾಯಮೂರ್ತಿ ರಾನಡೆಯವರ ಮನೆಯಲ್ಲಿ ನಡೆಯಿತು. ಸಬ್‌ಜಡ್ಜ್ ಉದ್ಯೋಗದಲ್ಲಿದ್ದ ಮಹಾದೇವ ಗೋವಿಂದ ರಾನಡೆಯವರು ರಮಾ ಬಾಯಿಯ ಪಾಂಡಿತ್ಯವನ್ನೂ ಭಾಗವತ ಮೊದಲಾದ ಪುರಾಣಗಳ ವಿವರಣಾ ಚಾತುರ್ಯವನ್ನೂ, ನೋಡಿ ಮೆಚ್ಚಿದರು. ರಮಾಬಾಯಿಯು ಪೂಣಾ ಪಟ್ಟಣಕ್ಕೆ ಬಂದ ಉದ್ದೇಶವು ಇಂಗ್ಲಿಷು ವಿದ್ಯಾಭ್ಯಾಸ ಕಲಿಯಬೇಕೆಂಬು ದಾಗಿತ್ತು. ಸೌ। ರಮಾಬಾಯಿ ರಾನಡೆಯವರಿಗೆ ಇಂಗ್ಲಿಷು ಕಲಿಸುವುದಕ್ಕಾಗಿ ಅಲ್ಲಿಯ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲಳಾದ, ಮಿಸ್ ಹರ್‌ಫರ್ಡ್ ಎಂಬಾಕೆಯನ್ನು ರಾನಡೆಯವರು ನೇಮಿಸಿದ್ದರು. ಸೌ। ರಾನಡೆಯವರು, ಪಂ. ರಮಾಬಾಯಿಯನ್ನು ತನ್ನ ಮನೆಯಲ್ಲಿ ಒಟ್ಟಿಗೆ ಇಂಗ್ಲಿಷ ಅಭ್ಯಾಸ ಮಾಡೋಣವೆಂದು ವಿನಂತಿಸಿದರು. ಹೀಗೆ ಇಬ್ಬರೂ ಹಾವರ್ಡ್ ಇಂಗ್ಲಿಷು ಪಠ್ಯಪುಸ್ತಕಗಳನ್ನು ಓದಲಾರಂಭಿಸಿದರು.

ರಮಾಬಾಯಿಯ ಪೂಣಾದ ವಾಸ್ತವ್ಯವೂ ಜನರಲ್ಲಿ ಹೆಚ್ಚು ಹರ್ಷ ವನ್ನುಂಟುಮಾಡಿತು. ಕ್ರಮೇಣ ಅನೇಕ ಕಡೆಗಳಿಂದ ಪುರಾಣ ಪ್ರವಚನಾದಿ ಗಳಿಗೆ ಆಮಂತ್ರಣ ಬರತೊಡಗಿತು. ರಮಾಬಾಯಿಯ ವ್ಯಾಖ್ಯಾನಗಳಿಗೆ

ನ್ಯಾಯಮೂರ್ತಿ ರಾನಡೆಯವರು, ಸೌ. ರಮಾಬಾಯಿ ರಾನಡೆಯವರು ತಪ್ಪದೆ ಬರುತ್ತಿದ್ದರು. ಆಗ ಜನರಲ್ಲಿ ರಮಾಬಾಯಿಯ ಹೊರತು, ಬೇರೆ ವಿಷಯವೇ ಇಲ್ಲದಂತಾಯಿತು. ಅವಳು ಹೇಗಿರುವಳೋ, ಎಲ್ಲಿ ಉಳಕೊಳ್ಳುವಳೋ, ಅವಳು ನಮ್ಮೊಡನೆ ಮಾತನಾಡುವಳೋ, ಅವಳು ಯಾವಾಗ ಇಲ್ಲಿಂದ ಹೊರಡುವಳೋ, ಎಂಬುದಾಗಿ ಜನರು ಆಡಿಕೊಳ್ಳುತ್ತಿದ್ದರು. ವ್ಯಾಖ್ಯಾನದ ಕಡೆಗಳಲ್ಲಿ ಜನರಿಗೆ ಕೂತುಕೊಳ್ಳುವುದಕ್ಕೂ ಜಾಗ ಸಿಗುತ್ತಿರಲಿಲ್ಲ. ರಮಾಬಾಯಿಯ ವಿಶಯಪ್ರತಿಪಾದನೆಯ ಶೈಲಿ, ಕೇಳುವವರನ್ನು ತನ್ನ ಭಾಷಣದ ಕಡೆಗೆ ಆಕರ್ಷಿಸುತ್ತಿತ್ತು.

ರಮಾಬಾಯಿಯನ್ನು ನಾನಾ ರೀತಿಯಿಂದ ದೂರುವವರು ಕೆಲವರು ಆಗ ಪೂಣಾದಲ್ಲಿದ್ದರು. ಇವರಲ್ಲಿ ಹೆಂಗಸರೇ ಹೆಚ್ಚಾಗಿದ್ದರು. ಮನೆಯ ಜಗಲಿಗಳಲ್ಲಿ ನಿರುದ್ಯೋಗಿ ಹೆಂಗಸರು ಸೇರಿಕೊಂಡು ರಮಾಬಾಯಿಯ ವಿಷಯವನ್ನೆ ಚರ್ಚಿಸುತ್ತಿದ್ದರು. ಅವಳು ಜಾತಿಭ್ರಷ್ಟಳು, ಶೂದ್ರನನ್ನು ಮದುವೆಯಾದವಳು, ಸಂಸಾರವನ್ನಾದರೂ ಸರಿಯಾಗಿ ಮಾಡಿದಳೋ ಅದೂ ಇಲ್ಲ. ಗಂಡನನ್ನು ಕಳಕೊಂಡಳು; ಪಾಪ! ತಂದೆಯು ವಿಠೋಬಾ ದೇವರಿಗೆ ಲಗ್ನಮಾಡಿ ಕೊಟ್ಟಿದ್ದನು. ಆದರೂ ಇವಳು ಪುನಃ ಲಗ್ನಮಾಡಿಕೊಂಡು ಭ್ರಷ್ಟಳಾದಳು. ಈಗ ಊರೆಲ್ಲ ಭ್ರಷ್ಟಮಾಡಲಿಕ್ಕೆ ಬಂದಿದ್ದಾಳೆ ಈ ಪ್ರಕಾರವಾಗಿ ಆಡಿಕೊಳ್ಳುತ್ತಿದ್ದರು. ಮನೆಯ ಗಂಡಸರಿಗೆ "ನೀವು ಬೇಕಾದರೆ ಅವಳನ್ನು ತಲೆಯ ಮೇಲೆ ಹೊತ್ತುಕೊಳ್ಳಿರಿ ಆದರೆ ಅವಳ ಸಭೆಗಳಿಗೆ ಹೋಗಿ, ಅವಳನ್ನು ಮುಟ್ಟಿ, ಮನೆಗೆ ಬಂದು ನಮ್ಮನ್ನು ಭ್ರಷ್ಟಮಾಡಬೇಡಿ" ಎಂದು ಆ ಹೆಂಗಸರು ಗದರಿಸುತ್ತಿದ್ದರು. ಈ ದೂಷಣೆ ಭೂಷಣೆಗಳಿಗೆ ರಮಾಬಾಯಿ ಕಿವಿಕೊಡದೆ ತನ್ನ ಕೆಲಸಗಳನ್ನು ಯಥಾಪ್ರಕಾರ ಮುಂದುವರಿಸುತ್ತಿದ್ದಳು.

ಸೌ। ರಮಾಬಾಯಿ ರಾನಡೆ ಮತ್ತು ಪಂ. ರಮಾಬಾಯಿ ಇವರ ಪ್ರಯತ್ನದಿಂದ ಪುಣೆಯಲ್ಲಿ ತಾ. 1–5–1882ರಲ್ಲಿ ಆರ್ಯ ಮಹಿಳಾ ಸಮಾಜವೆಂಬ ಹೆಸರಿನ ಸಂಸ್ಥೆಯು ಪ್ರಾರಂಭವಾಯಿತು. ಈ ಮೊದಲು ಪುಣೆಯಲ್ಲಿ ಆಗಾಗ ಸ್ತ್ರೀಯರ ಸಭೆಗಳು ಸೇರುತ್ತಿದ್ದುವು. ಆದರೆ, ಈ ಸಭೆಗಳಿಗೆ ಒಂದು ನಿಶ್ಚಿತವಾದ ಕಾರ್ಯಕ್ರಮವಿರಲಿಲ್ಲ. "ಸ್ತ್ರೀಯರ ನಿರಕ್ಷರತೆ ಅಜ್ಞಾನ, ಪರಾವಲಂಬನ ಇತ್ಯಾದಿಯನ್ನು ಸುಧಾರಿಸಬೇಕು, ಅವರು ತಮ್ಮ

ಅಡಚಣೆಗಳನ್ನು ನಿವಾರಿಸುವುದಕ್ಕೆ ಸಂಘಟಿತರಾಗಬೇಕು, ಸದಾಚರಣೆ, ನೀತಿಮಾರ್ಗ, ಧರ್ಮಜ್ಞಾನ, ಇತ್ಯಾದಿಗಳ ಬೋಧನೆ ಮಾಡುವುದು, ಪರಸ್ಪರ ಪರಿಚಯದಿಂದ ಸ್ನೇಹಾಚಾರವನ್ನು ಹೆಚ್ಚಿಸುವುದು ಮತ್ತು ಸ್ತ್ರೀಯರ ಸರ್ವತೋಮುಖವಾದ ಏಳಿಗೆಗೆ ಪ್ರಯತ್ನಿಸುವುದು" ಇದೇ ಆರ್ಯ ಮಹಿಳಾ ಸಮಾಜದ ಮುಖ್ಯ ಉದ್ದೇಶಗಳಾಗಿದ್ದವು.

ಆರ್ಯ ಮಹಿಳಾ ಸಮಾಜದ ಸಭೆಗಳಿಗೆ ಜನರು ಕಿಕ್ಕಿರಿದು ಬರ ತೊಡಗಿದರು. ಪ್ರತೀ ಮನೆಯಿಂದ ಗಂಡಸರು ಬರುವಾಗ, ತಮ್ಮ ಮನೆಯ ಹೆಂಗಸರನ್ನೂ ಕರಕೊಂಡು ಬರಬೇಕು. ಇಲ್ಲವಾದರೆ ಗಂಡಸರಿಗೆ ಸಭೆಯಲ್ಲಿ ಪ್ರವೇಶವಿಲ್ಲ ಎಂಬುದಾಗಿ ಆಮಂತ್ರಣ ಪತ್ರಿಕೆಗಳಲ್ಲಿ ಬರೆಯಲಾಗುತ್ತಿತ್ತು. ಹೆಂಗಸರೂ ಸಭೆಗಳಿಗೆ, ಅಗತ್ಯಪೂರ್ವಕವಾಗಿ ಬರಬೇಕೆಂದು ಈ ಉಪಾಯ ವನ್ನು ಪಂ. ರಮಾಬಾಯಿಯು ಕಂಡುಹಿಡಿದಿದ್ದಳು. ರಮಾಬಾಯಿಯ ಭಾಷಣಗಳು ಎಷ್ಟು ಪರಿಣಾಮಕಾರಿಗಳಾಗುತ್ತಿದ್ದುವೆಂದರೆ, ಅವಳ ವಿರೋಧ ಕರೂ, ಸಹ ಮಾತೆತ್ತುತ್ತಿರಲಿಲ್ಲ. ಸನಾತನಿಗಳೂ, ಸುಧಾರಕರೂ, ಮುದಕರೂ, ತರುಣರೂ, ಎಲ್ಲಾ ಜನರೂ ಈ ಸಭೆಗಳಿಗೆ ಬರುತ್ತಿದ್ದರು. ಇಡೀ ಭಾರತವರ್ಷದ ಭಗಿನಿಯರಲ್ಲಿ ನನಗೆ ಭೇದಭಾವವಿಲ್ಲ, ನಾನು ಜೀವಂತ ವಿರುವ ವರೆಗೂ, ಮಹಿಳೆಯರ ಉದ್ಧಾರಕ್ಕಾಗಿ ಶ್ರಮಿಸುತ್ತೇನೆ. ಇದಕ್ಕೆ ಎಂದಿಗೂ ನಾನು ಹಿಂಜರಿಯುವುದಿಲ್ಲ ಎಂದು ರಮಾಬಾಯಿ ಮಹಿಳಾ ಸಭೆಯ ಅಧಿವೇಶನದಲ್ಲಿ ಘೋಷಿಸಿದಳು. ಅನಂತರ ರಮಾಬಾಯಿಯು ಮುಂಬೈ, ಸೋಲಾಪುರ, ಅಹಮದನಗರ, ಠಾಣೆ, ಬಾರ್ಶಿ ಮುಂತಾದ ಕಡೆಗಳಲ್ಲಿ ಸಂಚರಿಸಿ, ಆರ್ಯ ಮಹಿಳಾ ಸಮಾಜದ ಶಾಖೆಗಳನ್ನು ಸ್ಥಾಪಿಸಿ ದಳು. ಎಲ್ಲೆಲ್ಲಿಯೂ ಬೆಂಬಲ ಸಿಕ್ಕಿ ಧನ ಸಹಾಯವೂ ದೊರೆಯಿತು.

ಆರ್ಯ ಮಹಿಳಾ ಸಮಾಜದ ಚಳವಳಿಯ ವಿಷಯ ಎಲ್ಲಾ ಕಡೆ ಗಳಿಂದಲೂ ಪ್ರೋತ್ಸಾಹ, ಪ್ರಸಿದ್ಧಿಗಳು ದೊರಕಿದವು. ಪತ್ರಿಕೆಗಳಲ್ಲಿಯೂ ಅಗ್ರಸ್ಥಾನ ದೊರೆಯಿತು. ಇದಾದ ಮೇಲೆ, ಒಂದು ವರ್ಷದಲ್ಲಿ ರಮಾಬಾಯಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದಳು. ಮಧ್ಯಕಾಲದಲ್ಲಿ "ಸ್ತ್ರೀ ಧರ್ಮನೀತಿ" ಎಂಬ ಮರಾಠಿ ಪುಸ್ತಕವನ್ನು ಬರೆದು ಪ್ರಕಟಿಸಿದಳು. 1882ನೇ ಜುಲಾಯಿ ತಿಂಗಳಲ್ಲಿ ಪ್ರಕಟವಾದ ಈ ಪುಸ್ತಕವು ಆರು ತಿಂಗಳೊಳಗೆ ಪುನರ್ಮುದ್ರಿಸ ಬೇಕಾಯಿತು. ಪ್ರಥಮ ಮುದ್ರಣದ ಹೆಚ್ಚಿನ ಪ್ರತಿಗಳನ್ನು ವಿದ್ಯಾ ಇಲಾಖೆ

ಯವರು ಖರೀದಿಸಿದರು. ಈ ಪುಸ್ತಕದಲ್ಲಿ ಒಟ್ಟು ಎಂಟು ಪ್ರಕರಣಗಳಿದ್ದು ಸ್ತ್ರೀಯರ ನಿರಕ್ಷರತೆ, ಅಜ್ಞಾನ, ಪರಾವಲಂಬನ, ಉದಾಸೀನತೆ ಇತ್ಯಾದಿಗಳನ್ನು ದೂರೀಕರಿಸಿ, ವಿದ್ಯಾರ್ಜನೆ, ಜ್ಞಾನ ಸಂಪಾದನೆ, ಸ್ವಾವಲಂಬನ, ಸೇವಾವೃತ್ತಿ, ಸೌಜನ್ಯ, ಮನೆವಾರ್ತೆ, ಶಿಶು ಸಂಗೋಪನ ಇತ್ಯಾದಿ ವಿಷಯಗಳನ್ನು ಇದರಲ್ಲಿ ಸುಲಭ ಭಾಷೆಯಲ್ಲಿ ವಿವರಿಸಲಾಗಿತ್ತು. ಯಾವ ಕಾಲದಲ್ಲಿಯೂ, ಈ ಪುಸ್ತಕದ ವಿಚಾರಗಳು ಮನನೀಯವಾಗುವಂತಿದ್ದುವು.

ಪಂ. ರಮಾಬಾಯಿಯು ಆರ್ಯ ಮಹಿಳಾ ಸಮಾಜದ ಸಂಘಟನೆಯ ಕಾರ್ಯವನ್ನು ಪ್ರಾರಂಭಿಸಿದ ಕೆಲವೇ ಸಮಯದಲ್ಲಿ ಆಗಿನ ವೈಸ್ರಾಯಿ ಲಾರ್ಡ್ ರಿಪ್ಪನ್ ಸಾಹೇಬರು ಭಾರತದ ಪ್ರಾಥಮಿಕ ಶಿಕ್ಷಣದ ವಿಚಾರವಾಗಿ ಮಿ. ಹಂಟರ್ ಸಾಹೇಬನ ನೇತೃತ್ವದಲ್ಲಿ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿದರು. ವಿಚರಣಾ ಸಮಿತಿಯ ಎದುರಿಗೆ ಭಾರತದ ಸ್ತ್ರೀ ವಿದ್ಯಾಭ್ಯಾಸದ ಕುರಿತಾದ ಸಾಕ್ಷಿಯನ್ನು ಕೊಡುವ ಕೆಲಸವು ಆರ್ಯ ಮಹಿಳಾ ಸಮಾಜದ ಪ್ರತಿನಿಧಿಯಾದ ಪಂ। ರಮಾಬಾಯಿಯ ಪಾಲಿಗೆ ಒದಗಿತು. ಮೇಲಿನ ಸಮಿತಿಯ ಎದುರಿಗೆ ಜನಗಣನೆಯ ಆಧಾರಗಳಿಂದ ರಮಾಬಾಯಿಯು ಬಹು ಸಮರ್ಪಕವಾಗಿಯೂ ಸ್ಪಷ್ಟವಾಗಿಯೂ ಸಾಕ್ಷ್ಯ ಕೊಟ್ಟಳು.

"ಭಾರತದ ಒಂಭತ್ತು ಕೋಟಿ, ತೊಂಭತ್ತೇಳು ಸಾವಿರ ಸ್ತ್ರೀ ಜನಸಂಖ್ಯೆಯಲ್ಲಿ ಬರೆ ಎರಡು ಲಕ್ಷ ಮಂದಿ ಸ್ತ್ರೀಯರಿಗೆ ಸಾಧಾರಣ ಓದುಬರಹ ಉಂಟು; ಬಾಲ್ಯ ವಿವಾಹ ಪದ್ಧತಿಯಿಂದಾಗಿ ಒಂಭತ್ತು ಹತ್ತು ವರ್ಷಗಳೊಳಗೆ ಹುಡುಗಿಯರು ಶಾಲೆ ಬಿಡಬೇಕಾಗುವುದರಿಂದ ಎರಡು ಅಥವಾ ಮೂರನೆ ದರ್ಜೆಗಿಂತ ಹೆಚ್ಚಿನ ಶಿಕ್ಷಣವು ದೊರಕುವಂತಿಲ್ಲ. ಪುಸ್ತಕ ಓದುವುದು ಗುಣಾಕಾರ, ಭಾಗಾಕಾರ ಇಷ್ಟೇ ಅಲ್ಲದೆ ಹೆಚ್ಚಿನ ಅನುಭವವು ಹುಡುಗಿಯರು ಗಳಿಸಿಕೊಳ್ಳಲವಕಾಶವಿಲ್ಲ. ಇದರಿಂದ ಎರಡು ಲಕ್ಷ ಮಂದಿ ಸ್ತ್ರೀಯರು ವಿದ್ಯಾವಂತರಾದರೆಂದು ಹೇಗೆ ತಿಳಿಯಬಹುದು? ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಇರುವ ಮಹಿಳೆಯರು ನಿರಕ್ಷರರಾದರೆ ಹೇಗೆ ದೇಶೋದ್ಧಾರವಾದಿತು?" ಎಂಬುದಾಗಿ ಮೇಲ್ಕಂಡ ಸಮಿತಿಯ ಎದುರಿಗೆ ಪಂ। ರಮಾಬಾಯಿಯು ನುಡಿದಳು.

ಬಾಲಿಕಾ ಪಾಠಶಾಲೆಗಳಲ್ಲಿ ಕಲಿಸುವ ಶಿಕ್ಷಿಕೆಯರು ಹೆಚ್ಚು ಶಿಕ್ಷಣ ಪಡೆದು, ತರಬೇತಿ ಹೊಂದಿದವರಾಗಬೇಕೆಂದೂ, ಗೌರವಯುತವಾದ ಜೀವನ

ವನ್ನು ಸಾಗಿಸುವವರೇ ಅವರಿಗೆ ವೇತನ ಹೆಚ್ಚಿಸಬೇಕೆಂದೂ, ಕಾಲೇಜಿನ ವಸತಿ ಗೃಹಗಳಲ್ಲಿ ವಿದ್ಯಾರ್ಥಿನಿಯರಿಗೂ, ಶಿಕ್ಷಿಕೆಯರಿಗೂ ಇರಲಿಕ್ಕೆ ಅನುಕೂಲವಾಗಿದ್ದು ವಸತಿ ಗೃಹಗಳು ಎಲ್ಲಾ ಉಪಕರಣಗಳಿಂದ ಕೂಡಿ ಇರಬೇಕೆಂದೂ, ಗುಣನಡತೆ, ಚಾರಿತ್ರ್ಯ ಉತ್ತಮ ಇದ್ದವರನ್ನೇ ಅಧ್ಯಾಪಕಿಯರನ್ನಾಗಿ ಆರಿಸಬೇಕೆಂದೂ, ಮೇಲ್ಕಂಡ ಸಮಿತಿಯ ಎದುರಿಗೆ ರಮಾಬಾಯಿಯು ನುಡಿದಳು.

"ಜೇಕಬ್ ಸಾಹೇಬ್: (ಸಮಿತಿಯ ಸದಸ್ಯ) ಈಗಿನ ಶಿಕ್ಷಣ ಕ್ರಮದಲ್ಲಿ ಇನ್ನು ಯಾವ ಯಾವ ದೋಷಗಳನ್ನು ನೀವು ತೋರಿಸಿಕೊಡುವಿರಿ? ಈ ದೋಷಗಳನ್ನು ನಿವಾರಿಸುವ ಉಪಾಯಗಳೇನು?

ರಮಾಬಾಯಿ: ಹುಡುಗಿಯರ ಶಾಲೆಗಳನ್ನು ಸಂದರ್ಶಿಸುವ ಕೆಲಸಗಳನ್ನು ಪುರುಷರಾದ ಪರೀಕ್ಷಾಧಿಕಾರಿಗಳು ಮಾಡಬಾರದು. ಏಕೆಂದರೆ, ನಮ್ಮ ದೇಶದ ಸ್ತ್ರೀಯರು ಸಂಕೋಚ ಮತ್ತು ಭೀತಿಗಳಿಂದ ಪುರುಷ ಪರೀಕ್ಷಾಧಿಕಾರಿಗಳ ಎದುರು ಸರಿಯಾದ ಉತ್ತರಗಳನ್ನು ಕೊಡದೆ ಸುಮ್ಮನಿರುವರು. ಇದರ ಪರಿಣಾಮವಾಗಿ ಶಾಲೆಗಳಿಗೆ ಶಿಫಾರಸು ದೊರಕುವಂತಿಲ್ಲ, ಬದಲಿಗೆ ಕನ್ಯಾಶಾಲೆಗಳಿಗೆ ಪುರುಷರನ್ನೇ ಅಧ್ಯಾಪಕರನ್ನಾಗಿ ಸರಕಾರವು ನೇಮಿಸುವ ಸಂಭವವಿದೆ. ಹುಡುಗಿಯರ ಶಾಲೆಗಳಿಗೆ ಸ್ತ್ರೀಯರೇ ಅಧ್ಯಾಪಕಿಯರಾಗಬೇಕು. ಇನ್ನೊಂದು ಸಂಗತಿ ಏನೆಂದರೆ, ಈ ದೇಶದ ಪುರುಷರಲ್ಲಿ ಶೇಕಡಾ ತೊಂಭತ್ತು ಜನ ಗಂಡಸರು ಸ್ತ್ರೀವಿದ್ಯಾಭ್ಯಾಸಕ್ಕೆ ವಿರುದ್ಧವಾಗಿದ್ದಾರೆ. ಹೆಂಗಸರಲ್ಲಿರುವ ಸಣ್ಣ ದೋಷವನ್ನು ಪರ್ವತದಷ್ಟು ದೊಡ್ಡದು ಮಾಡಿ ತೋರಿಸುತ್ತಾರೆ. ಮರ್ಯಾದಸ್ಥರಾದ ಬಡ ಸ್ತ್ರೀಯರು ವಿದ್ಯೆ ಮತ್ತು ಧೈರ್ಯಗಳ ಅಭಾವದಿಂದಾಗಿ ಬಲಾತ್ಕಾರಕ್ಕೆ ಒಳಗಾಗಿ ದುರ್ಗತಿ ಹೊಂದುವ ಉದಾಹರಣೆಗಳನ್ನು ಎಷ್ಟೋ ತೋರಿಸಬಹುದು. ಪುರುಷರ ಹೇಳಿಕೆಯನ್ನೇ ಸತ್ಯವೆಂದು ಅಧಿಕಾರಿಗಳು ನಂಬುವುದರಿಂದ ಸ್ತ್ರೀಯರಿಗೆ ಕಣ್ಣೀರುಸುರಿಸಿ, ವ್ಯಥೆಪಡೆಯುವ ವಿನಃ ಬೇರೇನೂ ಮಾಡಲಿಕ್ಕಾಗುವುದಿಲ್ಲ. ಸರಕಾರವು ಮಾತ್ರ ಗಂಡಸರನ್ನೇ ಸಂತೈಸುವ ಧೋರಣೆಯನ್ನಿಟ್ಟುಕೊಂಡಿದೆ. ಹೀಗೆ ಸ್ತ್ರೀಯರನ್ನು ಗುಲಾಮಗಿರಿಯಲ್ಲಿಡುವುದು ಒಳ್ಳೆ ಸರಕಾರದ ಲಕ್ಷಣವಲ್ಲ.

"ಒಂದು ಮಹತ್ವದ ವಿಷಯವನ್ನು ಅಧಿಕಾರಿಗಳ ಮುಂದಿಡಲಿಕ್ಕೆ ನಾನು ಇಚ್ಛಿಸುತ್ತೇನೆ. ಯಾವುದೆಂದರೆ ಈಗ ಹಿಂದುಸ್ಥಾನದಲ್ಲಿ ಸ್ತ್ರೀ ಡಾಕ್ಟರು

ಗಳ ಅಭಾವವಿದೆ. ನಮ್ಮ ದೇಶದಲ್ಲಿ ಗಂಡಸರು ಡಾಕ್ಟರರು ಬೇಕಾದಷ್ಟಿದ್ದರೂ, ಸ್ತ್ರೀ ಡಾಕ್ಟರುಗಳ ಆವಶ್ಯಕತೆಯು ಅತೀ ಅಗತ್ಯವಾಗಿ ತೋರಿಬರುತ್ತದೆ. ಯಾಕೆಂದರೆ, ಸಹಜವಾಗಿ ಬಹುನಾಚಿಕೆಯ ಸ್ವಭಾವವುಳ್ಳ ನಮ್ಮ ದೇಶದ ಸ್ತ್ರೀಯರು ತಮ್ಮ ರೋಗರುಜಿನೆಗಳ ವಿಚಾರವನ್ನು ಪುರುಷ ಡಾಕ್ಟರರ ಹತ್ತಿರ ಹೇಳಲು ನಾಚುವರು, ಆದಕಾರಣ ಕಾಹಿಲೆಯ ವೇಳೆಯಲ್ಲಿ ಉಪಚಾರ ಸಿಕ್ಕದೆ ಎಷ್ಟೋ ಮಹಿಳೆಯರು ಅಕಾಲ ಮೃತ್ಯು ಅಪಮೃತ್ಯುಗಳಿಗೆ ತುತ್ತಾಗುವರು. ಆದುದರಿಂದ ಸರಕಾರದಲ್ಲಿ ನಾನು ಆಗ್ರಹಪೂರ್ವಕವಾಗಿ ಪ್ರಾರ್ಥಿಸುವುದೇನಂದರೆ—ನಮ್ಮ ದೇಶದಲ್ಲಿ ಸ್ತ್ರೀಯರಿಗೆ ವೈದ್ಯಕೀಯ ಶಿಕ್ಷಣ ದೊರಕುವಂತಾಗಿ ಹೆಂಗಸರ ದವಾಖಾನೆಗಳು ಪ್ರಾರಂಭವಾಗಬೇಕು."

"ಮಿ. ಜೇಕಬ್ ಸಾಹೇಬ್: ಮುಂಬೈಯ ಕಾಲೇಜ್ ಆಫ್ ಮೆಡಿಸನ್‌ನಲ್ಲಿ ಈಗ ಸೂಲಗಿತ್ತಿಯರ ತರಬೇತಿಗಾಗಿ ಒಂದು ಕ್ಲಾಸು ತೆರೆಯಲ್ಪಟ್ಟಿದೆ, ಈ ವಿಚಾರ ನಿಮಗೆ ಗೊತ್ತಿಲ್ಲವೇ?

ರಮಾಬಾಯಿ: ಹೌದು, ನಾನು ಕೇಳಿದ್ದೇನೆ. ಆದರೆ ಇಂಥಾ ವರ್ಗಗಳಲ್ಲಿ ಅವರಿಗೆ ಔಷಧಿಗಳ ಮಾಹಿತಿಯೂ, ಹೇಳಿಕೊಡುವಂತಾಗಬೇಕು. ಇದರಿಂದಾಗಿ ಅವರು, ತಮ್ಮ ಅನುಭವಗಳನ್ನು ತಮ್ಮೂರಿನಲ್ಲಿ ಉಪಯೋಗಿಸುವರು.

ಜೇಕಬ್ ಸಾಹೇಬ್: ಮುಂಬಯಿ ಇಲಾಖೆಯಲ್ಲಿ ಹೆಣ್ಣು ಮಕ್ಕಳಿಗೆ ಮನೆಗಳಲ್ಲಿ ವಿದ್ಯಾಭ್ಯಾಸದೊರೆಯುತ್ತದೆಯೇ? ನಿಮ್ಮಂತೆಯೇ ಸುಶಿಕ್ಷಿತರಾದ ಮಹಿಳೆಯರು ಎಷ್ಟು ಮಂದಿ ಇದ್ದಾರೆ?

ರಮಾಬಾಯಿ: ಇದ್ದಾರೆ! ಕೆಲವರಿಗೆ ಸಂಸ್ಕೃತ ಬರುತ್ತದೆ. ಮುಂಬಯಿ ಇಲಾಖೆಯಲ್ಲಿ ಒಟ್ಟು ಎರಡು ಜನ ಸ್ತ್ರೀಯರಿಗೆ ಇಂಗ್ಲಿಷು ತಿಳಿಯುತ್ತದೆ. ಕೆಲವರು ಮನೆಯ ಹೊರಗೆ ಕೆಲಸವನ್ನು ಮಾಡುತ್ತಾರೆ.

ಜೇಕಬ್: ಹಿಂದೂ ಕುಟುಂಬದ ಸ್ತ್ರೀಯರು ಕಾವ್ಯ, ಪುರಾಣದ ಕಥೆಗಳು, ಬಾಯಿಪಾಠವಾಗಿ ಹೇಳಲಿಕ್ಕೆ ಸಾಮರ್ಥ್ಯವುಳ್ಳವರಾಗಿದ್ದಾರೆಯೇ?

ರಮಾಬಾಯಿ: ಪ್ರತಿಯೊಂದು ಹಿಂದೂ ಕುಟುಂಬದಲ್ಲಿಯೂ, ಕನಿಷ್ಟ ಒಬ್ಬ ಹೆಂಗಸಾದರೂ ಪುರಾಣಗಳ ಕೆಲವಂಶವಾದರೂ ಬಾಯಿಪಾಠವಾಗಿ ಹೇಳಬಲ್ಲಳು. ಆದರೆ, ಅಂಥವರಿಗೆ ಓದು ಬರಹ ಇಲ್ಲವೆಂದೇ ಹೇಳಬಹುದು. ಕೆಲವರಿಗೆ ಮಾತ್ರ ಗಣಿತ ಬರುತ್ತದೆ. ಅವರು ಲೆಖ್ಖಗಳನ್ನು ಮಾಡಬಲ್ಲರು.

ಗಣಿತ ಕಲಿಯದ ಹೆಂಗಸರು ಕೈಬೆರಳುಗಳಿಂದ ಅಥವಾ ಗೆರೆ ಎಳೆದು ಲೆಖ್ಖ ಗಳನ್ನು ಮಾಡುತ್ತಾರೆ. ಬಾಯಿಪಾಠವಾಗಿ ಹೇಳುವ ಪದ್ಯಗಳು ಉತ್ತಮ ಕಾವ್ಯಗಳೆಂದೇ ಹೇಳಬರುವುದಿಲ್ಲ.

ಜೇಕಬ್: ಇಡೀ ಭಾರತದ ವಿಚಾರ ನೀವು ಮಾತನಾಡುವುದೋ? ಅಥವಾ ಒಂದೇ ಪ್ರಾಂತ್ಯದ ವಿಷಯವಾಗಿಯೋ?

ಈ ಪ್ರಶ್ನೆಗೆ ರಮಾಬಾಯಿಯು, ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ಕೂಡ ತನ್ನ ಸ್ತ್ರೀ ಶಿಕ್ಷಣದ ಧ್ಯೇಯವನ್ನು ಯಾರು ಸಾಧಿಸಿದನೋ, ಈ ಬಗ್ಗೆ ಶಾಸ್ತ್ರಾಧಾರಕೊಟ್ಟು ಪಂಡಿತ ಸಭೆಯಲ್ಲಿ ವಾದಮಾಡಬೇಕಾಗಿ ಬಂತೋ? ಇದೇ ಧ್ಯೇಯ ಸಾಧನೆಗಾಗಿ ಯಾರು ಅನೇಕ ಕಷ್ಟಗಳನ್ನು ಅನುಭವಿಸಿದನೋ, ಆ ಅನಂತ ಶಾಸ್ತ್ರಿಯು, ಅಣ್ಣ ಶ್ರೀನಿವಾಸನ, ತನ್ನ ಗಂಡ ಬಿಪೀನ್ ವಿಹಾರಿ ದಾಸನ, ಸ್ತ್ರೀ ಶಿಕ್ಷಣದ ಕುರಿತಾದ ಅಭಿಪ್ರಾಯಗಳನ್ನೂ, ತನಗೆ ಸಿಕ್ಕಿದ ದೇಶ ಸಂಚಾರಾನುಭವಗಳನ್ನೂ ಸಂಕ್ಷೇಪವಾಗಿ ವಿವರಿಸಿ ಅಖಿಲಭಾರತದ ಕುರಿತು ಅಧಿಕಾರವಾಣಿಯಿಂದ ಮಾತನಾಡಲಿಕ್ಕೆ ತನಗೆ ಇದ್ದ ಅನುಭವ ದಿಂದಾಗಿ ತನ್ನ ಹೊಣೆಗಾರಿಕೆಯನ್ನು ರಮಾಬಾಯಿಯು ವಿವರಿಸಿದಳು—

"ಮೇಲ್ಕಂಡ ಸಮಿತಿನ ಎದುರಿಗೆ ರಮಾಬಾಯಿಯು ತನ್ನ ಸಾಕ್ಷಿ ಯನ್ನು ಮರಾಠಿ ಭಾಷೆಯಲ್ಲಿ ಹೇಳಿದಳು. ಸಮಿತಿಯ ಅಧ್ಯಕ್ಷ ಹಂಟರ್ ಸಾಹೇಬನು ರಮಾಬಾಯಿಯ ಸಾಕ್ಷಿಯನ್ನು ಬಹಳವಾಗಿ ಮೆಚ್ಚಿ, ಇದನ್ನು ಇಂಗ್ಲಿಷಿನಲ್ಲಿ ತರ್ಜುಮೆ ಮಾಡಿಸಿ, ಮುದ್ರಿಸಿದನು. ಅನಂತರ ಇಂಗ್ಲೆಂಡಿಗೆ ಹೋಗಿ, ಎಡಿನ್‌ಬರೋ ಎಂಬಲ್ಲಿ ಒಂದು ಸಭೆ ಕರೆಯಿಸಿ ರಮಾಬಾಯಿ ಮತ್ತೂ ಅವಳ ಕರ್ತೃತ್ವ"ದ ವಿಚಾರವಾಗಿ ಒಂದು ಭಾಷಣವನ್ನು ಮಾಡಿ ದನು. ಈ ಸಭೆಯಲ್ಲಿ ಸೇರಿದವರೆಲ್ಲರೂ, ಪಂ. ರಮಾಬಾಯಿಯ ಕಾರ್ಯ ಕಲಾಪಗಳ ಬಗ್ಗೆ ಸಂತೋಷಪಟ್ಟು, ಎದ್ದು ನಿಂತು ತಮ್ಮ ಆದರವನ್ನು ಸೂಚಿಸಿದರು. ಹಂಟರ್ ಸಾಹೇಬನ ಈ ಭಾಷಣವು ವಿಕ್ಟೋರಿಯಾ ರಾಣಿಗೂ ಗೊತ್ತಾಯಿತು. ವಿಕ್ಟೋರಿಯಾ ರಾಣಿಯು ಭಾರತದ ಸ್ತ್ರೀಯ ರಿಗೆ ವೈದ್ಯಕೀಯ ಶಿಕ್ಷಣವು ಕಾರ್ಯಗತವಾಗುವಂತೆ ಚಾಲನೆಕೊಟ್ಟಳು. 1885ರಲ್ಲಿ ಲಾರ್ಡ್ ಡಫರೀನ್, ವೈಸ್ರಾಯಿ ಆಗಿದ್ದಾಗ ಅವನ ಪತ್ನಿಯು ವಿಕ್ಟೋರಿಯಾ ರಾಣಿಯ ಉತ್ತೇಜನದಿಂದ ಹೆಂಗಸರಿಗಾಗಿ ಡಫರೀನ್ ದವಾ ಖಾನೆಗಳನ್ನು ಪ್ರಾರಂಭಿಸಿದಳು.

೧೦. ಇಂಗ್ಲೆಂಡಿಗೆ ಪ್ರಯಾಣ

ಹಂಟರ್ ಸಮಿತಿಯ ಮುಂದೆ ಸಾಕ್ಷ್ಯ ಕೊಟ್ಟಾಗ, ಪಂ. ರಮಾಬಾಯಿಯು 1881 ನೇ ಇಸವಿಯ ಖಾನೇಸುಮಾರಿಯ ಅಂಕೆ ಅಂಶಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಳು. ಇದರ ಸಹಾಯದಿಂದಲೇ ಸೋದಾಹರಣವಾಗಿ ಅವಳು ಹೇಳಿಕೆ ಕೊಡಲು ಸಾಧ್ಯವಾಯಿತು. "ಇಂಪೀರಿಯಲ್ ಸೆನ್ಸಸ್ ಸಮಿತಿಯ ಅಧ್ಯಕ್ಷ ಮಿ. ಬೇನ್ಸ್, ಇವರ ರಿಪೋರ್ಟಿನ ಆಧಾರ ಪ್ರಕಾರ ಇಪ್ಪತ್ತನಾಲ್ಕು ಜನ ಪುರುಷರಲ್ಲಿ ಒಬ್ಬನಿಗೆ ಮಾತ್ರ ಓದುಬರಹವಿತ್ತು. ಸ್ತ್ರೀಯರ ಸಾಕ್ಷರತೆಯ ಪ್ರಮಾಣವು ಐನೂರಮೂವತ್ತೆರಡರಲ್ಲಿ ಒಂದು, ಈ ಪ್ರಕಾರವಿತ್ತು. ಐದರಿಂದ ಒಂಬತ್ತು ವರ್ಷ ವಯಸ್ಸಿನ ಬಾಲ ವಿಧವೆಯರ ಸಂಖ್ಯೆಯು 51,875 ರಷ್ಟಿತ್ತು, ನಾಲ್ಕು ವರ್ಷಗಳೊಳಗಿನ ಬಾಲವಿಧವೆಯರ ಸಂಖ್ಯೆಯು 10,135 ಇತ್ತು. ಈ ಬಾಲವಿಧವೆಯರ ಶೋಚನೀಯ ಸ್ಥಿತಿಯನ್ನು ನೋಡಿ, ಪಂ. ರಮಾಬಾಯಿಗೆ ಅತ್ಯಂತ ದುಃಖವಾಯಿತು. ಇವರ ಮುಂದಿನ ಭವಿಷ್ಯದ ಕುರಿತು ದೀರ್ಘವಾಗಿ ಯೋಚಿಸಿ ಅನಾಥ ವಿಧವೆಯರಿಗೆ ಶಿಕ್ಷಣಕೊಡತಕ್ಕ ಒಂದು ಅನಾಥಾಶ್ರಮ ಸ್ಥಾಪಿಸಬೇಕಾಗಿ ಮುಂಬಯಿ, ಅಹಮದಾಬಾದ್, ಮುಂತಾದ ಕಡೆಗಳಲ್ಲಿ ಅನೇಕ ಆಢ್ಯಮಹನೀಯರುಗಳಲ್ಲಿ ಪ್ರಸ್ತಾಪಿಸಿದಳು. ಇದಕ್ಕೆ ಬಾಲವಿಧವೆಯರಿಗಾಗಿ ಒಂದು ಅನಾಥಾಶ್ರಮವನ್ನು ಸ್ಥಾಪಿಸುವುದರಲ್ಲಿ ಅರ್ಥವಿಲ್ಲವೆಂದೂ, ಆದುದರಿಂದ ಇಂಥಾ ಸಂಸ್ಥೆಯನ್ನು ಸ್ಥಾಪಿಸುವುದು ಅನಗತ್ಯವೆಂದೂ, ರಮಾಬಾಯಿಗೆ ಉತ್ತರದೊರೆಯಿತು. ಒಬ್ಬ ಶ್ರೀಮಂತ ವ್ಯಕ್ತಿಯು ಮಾತ್ರ ನಾನು ಈ ಕೆಲಸಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ದಾನವಾಗಿ ಕೊಡುವೆನು, ಆದರೆ ನೀವು ನಾಲ್ವತ್ತು ಸಾವಿರ ರೂಪಾಯಿಗಳನ್ನು ವೆಚ್ಚಮಾಡಿ ಆಶ್ರಮವನ್ನು ಸ್ಥಾಪಿಸಿ, ನನಗೆ ತೋರಿಸಿ ಕೊಡಿರಿ, ಎಂದು ಆಶ್ವಾಸನೆಯನ್ನಿತ್ತನು, ಇದು ಆ ಕಾಲದಲ್ಲಿ ಅಸಾಧ್ಯ ಕೆಲಸವಾಗಿತ್ತು. ಆದಕಾರಣ ಪಂ. ರಮಾಬಾಯಿಯು ನಿರಾಶಳಾದಳು.

"ಅನಾಥವಿಧವೆಯರ ಉದ್ಧಾರದ ಕುರಿತು ಯೋಚಿಸುವಾಗಲೇ ಇನ್ನೊಂದು ಸಂಗತಿಯು ನಡೆಯಿತು. ಹನ್ನೆರಡು ವರ್ಷ ವಯಸ್ಸಿನ ಬಾಲ ವಿಧವೆಯಾದ ಓರ್ವ ಹುಡುಗಿಯನ್ನು ಒಬ್ಬಾತನು ರಮಾಬಾಯಿಯ ರಕ್ಷಣೆ

ಯಲ್ಲಿ ತಂದು ಬಿಟ್ಟನು. ಐದನೇ ವಯಸ್ಸಿನಲ್ಲಿ ಮದುವೆಯಾದ ಈ ಹುಡುಗಿಯು ಗಂಡನು ಮೃತನಾಗಿದ್ದನು. ಜಾತಕದ ಫಲದಿಂದಾಗಿ ಗಂಡನನ್ನು ಕೊಂದುಬಿಟ್ಟಳು, ಎಂಬ ಕಾರಣದಿಂದ ಅವಳ ಅತ್ತೆಯು ನಾನಾ ರೀತಿಯ ಚಿತ್ರಹಿಂಸೆಯನ್ನು ಕೊಡುತ್ತಿದ್ದಳು. ನೆರೆಮನೆಯವರೂ, ಇವಳನ್ನು ತಿರಸ್ಕಾರದಿಂದಲೇ ಕಾಣುತ್ತಿದ್ದರು. ಹಿಂಸೆಯನ್ನು ಅನುಭವಿಸಿ ಇವಳು ಅತ್ಯಂತ ಕ್ಷೀಣಳಾಗಿದ್ದಳು. ದಯಾಳುವಾದೊಬ್ಬ ಮನುಷ್ಯನು ಇವಳನ್ನು ರಮಾಬಾಯಿಯ ಸಮೀಪ ತಂದು ಬಿಟ್ಟನು. ಸ್ವತಃ ವಿಧವೆಯಾದ ರಮಾಬಾಯಿಗೆ ಈ ಹುಡುಗಿಯ ಮೇಲೆ ಕನಿಕರ ಹುಟ್ಟಿತು. ಅವಳನ್ನು ಹತ್ತಿರ ಕರೆದು ಸಮಾಧಾನಪಡಿಸಿದಳು. ಇಂತಹ ಬಾಲವಿಧವೆಯ ರಕ್ಷಣೆಯ ಭಾರವನ್ನು ದೇವರು ನನ್ನ ಪಾಲಿಗೇ ವಹಿಸಿರುವರು. ಈ ಕಾರ್ಯದಲ್ಲಿ ನನಗೆ ಬೇರೆಯವರ ಸಹಾಯವು ಸಿಕ್ಕುವುದು ಕಷ್ಟ. ಇದನ್ನು ನಾನೇ ಮಾಡಬೇಕಾಗಿದೆ ಎಂದು ರಮಾಬಾಯಿಯು ಯೋಚಿಸಿದಳು. ಹಿಂದೂ ವಿಧವೆಯರಿಗೆ ಒಂದು ವಸತಿಗ್ರಹವನ್ನು ನಿರ್ಮಿಸುವ ಯೋಚನೆಯು ಈಗ ರಮಾಬಾಯಿಯನ್ನು ಕಾರ್ಯರಂಗಕ್ಕಿಳಿಸಿತು.

"ಹಿಂದೂದೇಶದ ಅನಾಥ ಸ್ತ್ರೀಯರ ಕಷ್ಟ ನಿವಾರಣೆಯಾಗಬೇಕಾದರೆ ತಾನು ಇಂಗ್ಲಿಷು ಕಲಿತು ವೈದ್ಯಕೀಯ ಪರೀಕ್ಷೆಕೊಟ್ಟು ನಂತರ ಇದಕ್ಕೊಂದು ನಿಶ್ಚಿತ ಕಾರ್ಯಕ್ರಮ ಪ್ರಾರಂಭಿಸಬೇಕೆಂದೂ, ಇದಕ್ಕಾಗಿ ಇಂಗ್ಲೆಂಡಿಗೆ ಹೋಗಿ ಶಿಕ್ಷಣಪಡೆಯಬೇಕೆಂದೂ, ರಮಾಬಾಯಿಯು ಯೋಚಿಸಿದಳು. ಇಂಗ್ಲೆಂಡಿಗೆ ಹೊರಡುವ ವರ್ತಮಾನ ತಿಳಿದ ಅನೇಕರು ಇಂಗ್ಲಿಷು ಗೊತ್ತಿಲ್ಲದೆ ಇಂಗ್ಲೆಂಡಿಗೆ ಹೋದರೆ ಅಲ್ಲಿ ತುಂಬಾ ಕಷ್ಟವಾದೀತೆಂದೂ, ವೈದ್ಯಕೀಯ ಕಲಿಯುವುದು ಮದ್ರಾಸಿನ ಮೆಡಿಕಲ್ ಕಾಲೇಜಿನಲ್ಲಿ ಸಾಧ್ಯವಾಗಬಹುದೆಂದೂ, ಸೂಚಿಸಿದರು. ಆದರೆ ರಮಾಬಾಯಿಗಿದು ಸರಿತೋರಲಿಲ್ಲ. ಹಿಂದುಸ್ಥಾನದಲ್ಲಿ ಮೆಟ್ರಿಕ್ಯುಲೇಶನ್ ಪರೀಕ್ಷೆ ಕೊಡಬೇಕಾದರೆ ನಾಲ್ಕು ವರ್ಷಗಳ ಶಿಕ್ಷಣಬೇಕಾಗಿದ್ದಿತು. ಮದ್ರಾಸಿನ ಮೆಡಿಕಲ್ ಕಾಲೇಜಿನಲ್ಲಿ ಅದ್ಯಾವತ್ ವೈದ್ಯಕೀಯ ಶಿಕ್ಷಣವು ದೊರೆಯುತ್ತಿರಲಿಲ್ಲ. ಹಿಂದುಸ್ಥಾನದಲ್ಲಿ, ಬಿ. ಎ. ಪರೀಕ್ಷೆಕೊಟ್ಟರೂ, ಲಂಡನ್ ಯುನಿವರ್ಸಿಟಿಯಲ್ಲಿ ಪುನಃ ಮೆಟ್ರಿಕ್ ಪರೀಕ್ಷೆಕೊಡಬೇಕಾಗಿ ನಿರ್ಬಂಧವಿದ್ದಿತು. ಹಿಂದುಸ್ಥಾನದಲ್ಲಿ ನಾಲ್ಕು ವರ್ಷಗಳ ಶಿಕ್ಷಣದಿಂದಾಗುವ

ಮೆಟ್ರಿಕ್ ಪರೀಕ್ಷೆಯು ಲಂಡನಿನಲ್ಲಿ ಎರಡು ವರ್ಷಗಳ ಶಿಕ್ಷಣದಲ್ಲಿಯೇ ಮುಗಿಸಬಹುದಾಗಿತ್ತು, ಅಲ್ಲದೆ ಲಂಡನಿನಂತಹ ಶೀತಲವಾದ ಹವೆಯ ದೇಶದಲ್ಲಿ ತನ್ನ ಪೂರ್ಣವೇಳೆಯನ್ನು ಓದುವಿಕೆಯಲ್ಲಿ ಕಳೆಯಬಹುದೆಂದು ಯೋಚಿಸಿ ರಮಾಬಾಯಿಯು ಇಂಗ್ಲೆಂಡಿಗೆ ಪ್ರಯಾಣಮಾಡುವುದೆಂದು ನಿಶ್ಚಯಿಸಿದಳು. ಈ ಮೊದಲು ಬರೆದ "ಸ್ತ್ರೀ ಧರ್ಮನೀತಿ" ಎಂಬ ಮರಾಠಿ ಪುಸ್ತಕಗಳ ಮಾರಾಟದಿಂದ ಬಂದ ಹಣವು ಇಂಗ್ಲೆಂಡಿಗೆ ಹೋಗುವ ಪ್ರಯಾಣದ ವೆಚ್ಚಕ್ಕೆ ಸಾಕಾಗುವಷ್ಟು ರಮಾಬಾಯಿಯ ಹತ್ತಿರವಿದ್ದಿತು. ಹೀಗೆ ಯಾವ ಅಡಚಣೆಗಳನ್ನೂ ಲೆಕ್ಕಿಸದೆ, ಪಂ. ರಮಾಬಾಯಿಯು ತನ್ನ ಎರಡು ವರ್ಷದ ಕೂಸಾದ ಮನೋರಮೆಯ ಸಹಿತ 1883 ನೇ ಇಸವಿಯ ಎಪ್ರೀಲ್ 20 ನೇ ತಾರೀಕಿನ ದಿನ ಸಾಯಂಕಾಲ ನಾಲ್ಕು ಘಂಟೆಗೆ "ಬುಖಾರಾ" ಬೋಟಿನಲ್ಲಿ ಕುಳಿತು ಮುಂಬಯಿಯಿಂದ ಹೊರಟು, ಮೇ ತಿಂಗಳ 17 ನೇ ತಾರೀಕಿಗೆ ಇಂಗ್ಲೆಂಡಿಗೆ ತಲಪಿದಳು.

"ಇಂಗ್ಲೆಂಡಿನ ದಡ ಮುಟ್ಟಿದೊಡನೆಯೇ "ವಾಂಟೇಜ" ಮಠದ (Convent) ಕನ್ಯಾ ಸ್ತ್ರೀ ಜನರು (Sisters) ಪ್ರೇಮಪೂರ್ವಕವಾಗಿ ರಮಾಬಾಯಿಯನ್ನು ಸ್ವಾಗತಿಸಿದರು. ವಾಂಟೇಜ್ ಎಂಬುದು ಆಕ್ಸ್‌ಫರ್ಡ್ ಜಿಲ್ಲೆಯ ಬರ್ಕ್‌ಶಾಯರ್ ತಾಲೂಕಿನ ಒಂದು ಪಟ್ಟಣವಾಗಿದ್ದಿತು. ಪುಣೆಯಲ್ಲಿರುವಾಗಲೇ ಮಿಸ್ "ಹರ್‌ಫರ್ಡ್" ಇವಳು ಈ ಭಗಿನೀ ಸಮಾಜದಲ್ಲಿ ಒಬ್ಬಾಕೆಯ ಪರಿಚಯವನ್ನು "ಸೆಂಟ್ ಮೆರೀಜ್ ಹೋಮ್"ನಲ್ಲಿ ಮಾಡಿ ಕೊಟ್ಟಿದ್ದಳು. ಭಗಿನೀ ಸಮಾಜವು ಪಂ. ರಮಾಬಾಯಿ ಮತ್ತು ಮನೋರಮೆಯನ್ನು ವಾಂಟೇಜ್ ಮಠಕ್ಕೆ ಕರೆದು, ಅಲ್ಲಿ ವಾಸ್ತವ್ಯವನ್ನು ಮಾಡಿಕೊಟ್ಟಿತು. "ವಾಂಟೇಜ್ ಮಠಕ್ಕೆ ಬಂದೊಡನೆಯೇ ಪಂ. ರಮಾಬಾಯಿಯು ಇಂಗ್ಲೆಂಡಿನಿಂದ ಭಾರತಕ್ಕೆ ಬರುವ ಕನ್ಯಾ ಸ್ತ್ರೀಯರಿಗೆ ಮರಾಠಿ ಭಾಷೆಯನ್ನು ಕಲಿಸತೊಡಗಿದಳು. ಇದರ ಪ್ರತಿಫಲವಾಗಿ ಭಗಿನೀ ಸಮಾಜವು ಊಟ, ವಸತಿಗಳ ಖರ್ಚಿಗೆ ಬೇಕಾದ ವೇತನವನ್ನು ಪಂ. ರಮಾಬಾಯಿಗೆ ಕೊಡುತ್ತಿದ್ದರು. ಮುಂದೆ ಸಿಸ್ಟರ್ ಜಿರಾಲ್ಡೀನ್ ಎಂಬವಳು ಇಂಗ್ಲಿಷನ್ನೂ ಧಾರ್ಮಿಕ ಶಿಕ್ಷಣವನ್ನು ರಮಾಬಾಯಿಗೆ ಕೊಡಲು ಪ್ರಾರಂಭಿಸಿದಳು. ಸಿಸ್ಟರ್ ಜಿರಾಲ್ಡೀನ್ ಳನ್ನು ರಮಾಬಾಯಿಯು ಅವಳು ನನ್ನ "ಅಧ್ಯಾತ್ಮಿಕ ಮಾತೆ" ಎನ್ನುತ್ತಿದ್ದಳು. ಮುಂದೆ ಅಮೇರಿಕಾಕ್ಕೆ ರಮಾಬಾಯಿಯು ಹೋದ ವೇಳೆ

ಮನೋರಮೆಯ ಪೋಷಣೆಯನ್ನೂ ಇವಳೇ ಮಾಡುತ್ತಿದ್ದಳು. ಶಿಸ್ತು, ಅಚ್ಚುಕಟ್ಟುತನ, ಸಮಯಕ್ಕೆ ಸರಿಯಾಗಿ ಕೆಲಸಮಾಡುವುದು, ಈ ಗುಣ ಗಳನ್ನು ನನಗೆ ಸಿಸ್ಟರ್ ಜಿರಾಲ್ಡೀನ್ ಕಲಿಸಿದಳು ಎಂದು ರಮಾಬಾಯಿಯು ಹೇಳುತ್ತಿದ್ದಳು. ಹೀಗೆ ವಾಂಟೇಜ್ ಭಗಿನೀ ಸಮಾಜದಲ್ಲಿ ಒಂದು ವರ್ಷದ ವರೆಗೆ ರಮಾಬಾಯಿಯ ಇಂಗ್ಲಿಷ್ ವಿದ್ಯಾಭ್ಯಾಸವು ಸಾಗಿತು.

ಈ ಸಮಯದಲ್ಲಿ ರಮಾಬಾಯಿಯು ಕ್ರೈಸ್ತಮತ ಸಿದ್ಧಾಂತಗಳ ನಿಶ್ಚಯ ಸ್ವರೂಪವನ್ನು ತುಲನಾತ್ಮಕವಾಗಿ ಬರೆದ ಕ್ರೈಸ್ತಮತ ಗ್ರಂಥಗಳನ್ನೂ ತಿಳಿದು ಕೊಂಡಳು. ಸುಪ್ರಸಿದ್ಧ ಕ್ರೈಸ್ತ ಧರ್ಮ ಬೋಧಕರ ಉಪನ್ಯಾಸಾದಿಗಳನ್ನು ಕೇಳಿದಳು. ಹೀಗೆ ಅವಳ ಮನಸ್ಸು ಕ್ರೈಸ್ತ ಧರ್ಮದ ಕಡೆಗೆ ಆಕರ್ಷಿಸಲ್ಪ ಟ್ಟಿತು. ಸ್ತ್ರೀ ಜಾತಿಯ ವಿಷಯವಾದ ಉದಾರವಾದ ವರ್ತನೆ ಮತ್ತು ಬೋಧನೆ, ಇದರಿಂದಲೂ ರಮಾಬಾಯಿಯ ಮನಸ್ಸು ಕ್ರಿಸ್ತನ ಕಡೆಗೆ ಹೊರಳಿತು. ವಾಂಟೇಜ್ ಮಠದಲ್ಲಿರುವಾಗ ಒಮ್ಮೆ ಅಲ್ಲಿಯ ಭಗೀನಿ ಸಮಾಜವು ಪ್ರವಾಸಕ್ಕಾಗಿ ಲಂಡನಿಗೆ ತೆರಳಿತು. ಅಲ್ಲಿಯ ಭಗಿನೀ ಸಮಾಜದ ಶಾಖೆಗಳನ್ನು ಪಂ. ರಮಾಬಾಯಿಯು ನೋಡಿದಳು. ಅಲ್ಲಿಯ ಅನಾಥಾಶ್ರಮ (Rescue Home) ಗಳಲ್ಲಿರುತ್ತಿದ್ದ ಕೆಲವು ಮಹಿಳೆಯರನ್ನು ಕಂಡು ರಮಾ ಬಾಯಿಗೆ ಆಶ್ಚರ್ಯವಾಯಿತು. ಅಲ್ಲಿಯ ವಸತೀ ಗೃಹಗಳಲ್ಲಿ ಅನಾಥ ಪತಿಥತ ಸ್ತ್ರೀಯರು ಪುನರ್ಜನ್ಮ ಬಂದಂತೆ ಉಲ್ಲಾಸದಿಂದಲೂ, ಸಂತೋಷ ದಿಂದಲೂ ಇರುತ್ತಿದ್ದರು. ಅಲ್ಲಿಯ ದಯಾಶೀಲ ಕೆಲಸವನ್ನು ನೋಡಿ, ರಮಾಬಾಯಿಗೆ ಕ್ರೈಸ್ತ ಧರ್ಮ ಮತ್ತು ಹಿಂದೂ ಧರ್ಮದಲ್ಲಿಯ ಮೂಲಭೂತ ವಾದ ಅಭ್ಯಂತರವು ತಿಳಿಯಿತು. ಈ ರೀತಿಯ ಮಹಿಳೋದ್ಧಾರದ ಕೆಲಸ ವನ್ನು ಕ್ರೈಸ್ತರು ಏಕೆ ಮಾಡುತ್ತಾರೆ ಎಂತ ರಮಾಬಾಯಿ ತನಗೆ ಕಲಿಸುತ್ತಿದ್ದ ಸಿಸ್ಟರಳ ಕೂಡೆ ವಿಚಾರಿಸಿದಳು. ಇದಕ್ಕೆ ಅವಳು "ಶೋಮರೋನಿ" ಸ್ತ್ರೀಯು ಕ್ರಿಸ್ತನನ್ನು ಭೇಟಿಯಾದ ಕಥೆಯನ್ನು ಹೇಳಿದಳು. ಪಾಪಿಗಳ ವಿಷಯದಲ್ಲಿ ಕ್ಷಮಾಶೀಲತೆ, ಮತ್ತು ಅವರ ಉದ್ಧಾರದ ಆಸೆ, ಕ್ರಿಸ್ತನ ಈ ಉದಾತ್ತ ಗುಣಗಳನ್ನು ಅವಳು ತಿಳಿಸಿದಳು.

ಹಿಂದುಸ್ಥಾನದಲ್ಲಿ ಪತಿತ ಸ್ತ್ರೀಯರನ್ನು ನೋಡುವ ದೃಷ್ಟಿಕೋನ, ಹಾಗೂ, ಅಲ್ಲಿಯ ಪರಿತ್ಯಕ್ತ ಸ್ತ್ರೀಯರನ್ನು ಸುಧಾರಿಸುವ ಕ್ರಮ, ಇವುಗಳನ್ನು ರಮಾಬಾಯಿಯು ಆಲೋಚಿಸಿದಳು. ಹಿಂದುಸ್ಥಾನದಲ್ಲಿ ಅಂತಹ ಸ್ತ್ರೀಯ

ರನ್ನು ಒಳ್ಳೇ ರೀತಿಯಲ್ಲಿ ನೋಡುವ ಮತ್ತು ಕೆಟ್ಟ ನಡತೆಯಿಂದ ಸನ್ಮಾರ್ಗಕ್ಕೆ ತರುವ, ಯಾವುದೊಂದು ಸಂಪ್ರದಾಯವೂ ಇಲ್ಲದಿರುವುದನ್ನು ರಮಾಬಾಯಿಯು ಯೋಚಿಸಿದಳು. ಹಿಂದೂ ಸ್ಮೃತಿಗಳಲ್ಲಿ, ಅಂತಹ ಪತಿತ ಸ್ತ್ರೀಯರು ಪಾತಕಿಗಳೆಂದೂ, ಆದಕಾರಣ ಅವರಲ್ಲಿ ದಯೆ ತೋರಿಸಬಾರದಾಗಿಯೂ, ಅಂಥವರನ್ನು ನರಿನಾಯಿಗಳು ತಿನ್ನುವಂತೆ ಹೊರಗಟ್ಟಿ ಬಿಡಬೇಕೆಂದೂ, ಸ್ಮೃತಿಕಾರನು ರಾಜನಿಗೆ ಹೇಳಿದುದನ್ನು ರಮಾಬಾಯಿಯು ಧರ್ಮಶಾಸ್ತ್ರಗಳಲ್ಲಿ ಓದಿದ್ದಳು. ಏಸು ಕ್ರಿಸ್ತನು "ನಾನು ದೈವೀತಾರಕ" ನಾಗಿದ್ದೇನೆ ಎಂತ ಯೋಹಾನನ ಶುಭ ವರ್ತಮಾನದ ನಾಲ್ಕನೆಯ ಅಧ್ಯಾಯದಲ್ಲಿ ಹೇಳಿದ ವಾಕ್ಯವು ಜಗತ್ತಿನ ಎಲ್ಲಾ ಪತಿತ ಸ್ತ್ರೀಯರ ಉದ್ಧಾರಕನು ಕ್ರಿಸ್ತನೊಬ್ಬನೇ ಎಂದು ರಮಾಬಾಯಿಗೆ ದೃಢವಾಯಿತು.

ರಮಾಬಾಯಿ ತನ್ನ ತಂದೆಯೊಡನೆ ಆಸೇತುಹಿಮಾಚಲ ಪರ್ಯಂತ ಸಂಚರಿಸುವಾಗ ಅನುಭವಕ್ಕೆ ಬಂದ ಪುಣ್ಯಕ್ಷೇತ್ರಗಳಲ್ಲಿ ಧರ್ಮದ ಹೆಸರಿನಲ್ಲಿ ಆಗುವ ಅನಾಚಾರಗಳೂ, ಉಚ್ಚವರ್ಗದ ಹಿಂದೂ ವಿಧವೆಯರಿಗೆ ಸಮಾಜವು ಕೊಡುತ್ತಿದ್ದ ಹಿಂಸಾಚಾರ, ಇತ್ಯಾದಿಗಳು ಈಗ ಸ್ಮರಣೆಗೆ ಬಂದು ಹಿಂದೂ ಧರ್ಮದಲ್ಲಿದ್ದ ಶ್ರದ್ಧೆಯು ಕಡಿಮೆಯಾಯಿತು. ಮುಂದೆ ಕೆಲವು ದಿನಗಳಲ್ಲಿಯೇ ರಮಾಬಾಯಿ ಕ್ರೈಸ್ತಮತ ಸ್ವೀಕರಿಸುವ ನಿರ್ಧಾರ ಮಾಡಿದಳು. ತಾ. 29-9-1883ರಲ್ಲಿ ರಮಾಬಾಯಿಯು ತನ್ನ ಮಗಳೊಂದಿಗೆ ವಾಂಟೇಜದ ಕ್ರೈಸ್ತ ದೇವಾಲಯದಲ್ಲಿ ಜ್ಞಾನಸ್ನಾನ ಹೊಂದಿ, ಕ್ರಿಸ್ತಳಾದಳು. ಈ ವಿಧಿಯನ್ನು 'ಕೆನನ್ ಬಟ್ಲರ್' ಎಂಬ ಧರ್ಮಗುರುಗಳು ನೆರವೇರಿಸಿದರು. ವಾಂಟೇಜ್ ಮಠದ 'ಸಿಸ್ಟರ್ ಜಿರಾಲ್ಡೀ'ನಳು ಈ ಪ್ರಸಂಗದಲ್ಲಿ ಸಾಕ್ಷಿದಾರಳಾಗಿದ್ದಳು. ಕ್ರೈಸ್ತಧರ್ಮ ಸ್ವೀಕರಿಸಿದ ನಂತರ ರಮಾಬಾಯಿಯ ಹೆಸರು 'ಮೇರಿ' ಎಂದು ಇಡಲಾಯಿತು. ಆದರೆ ರಮಾಬಾಯಿಯು ತನ್ನ ಮತ್ತು ಮನೋರಮೆಯ ಹೆಸರುಗಳನ್ನು ವ್ಯವಹಾರದಲ್ಲಿ ಬದಲಾಯಿಸಿಕೊಳ್ಳಲಿಲ್ಲ.

ವಾಂಟೇಜಿನ ಭಗಿನೀ ಸಮಾಜದಲ್ಲಿ ಹೀಗೆ ಒಂದು ವರ್ಷದ ವರೆಗೆ ಇದ್ದು, ಪಂ. ರಮಾಬಾಯಿಯು ಇಂಗ್ಲಿಷಿನಲ್ಲಿಯೂ, ಕ್ರೈಸ್ತಧರ್ಮ ಗ್ರಂಥಗಳಲ್ಲಿಯೂ ಶಿಕ್ಷಣ ಪಡೆದಳು. ಮುಂದೆ ಮನೋರಮೆಯನ್ನು ಭಗಿನೀ ಸಮಾಜದ ಸಿಸ್ಟರ್ ಜಿರಾಲ್ಡೀನಳ ವಶಕ್ಕೊಪ್ಪಿಸಿ, ಇನ್ನು ಹೆಚ್ಚಿನ ಶಿಕ್ಷಣಕ್ಕಾಗಿ "ಚೆಲ್ಟನ್‌ಹ್ಯಾಮ್" ಎಂಬಲ್ಲಿ ವೀಮೆನ್ಸ್ ಕಾಲೇಜನ್ನು ಸೇರಿದಳು. ಅಲ್ಲಿಯ

ವಿದ್ಯಾರ್ಥಿನಿಯರಿಗೆ ಸಂಸ್ಕೃತವನ್ನು ಕಲಿಸುತ್ತಿದ್ದಳಲ್ಲದೆ ತಾನು ಇಂಗ್ಲಿಷು, ವಿಜ್ಞಾನ, ಗಣಿತ ವಿಷಯಗಳಲ್ಲಿ ಶಿಕ್ಷಣ ಪಡೆಯುತ್ತಿದ್ದಳು. ಅಲ್ಲಿಯವರಿಗೆ ಸಂಸ್ಕೃತ ಕಲಿಸುತ್ತಿದ್ದ ಕಾರಣ, ರಮಾಬಾಯಿಗೆ ತನ್ನ ಖರ್ಚಿಗೆ ಬೇಕಾದಷ್ಟು ವೇತನ ದೊರೆಯುತ್ತಿತ್ತು. ಹೀಗೆ ಚೆಲ್ಟನ್‌ಹ್ಯಾಮ್ ಕಾಲೇಜಿನಲ್ಲಿ ಅಧ್ಯಯನ, ಅಧ್ಯಾಪನಗಳನ್ನು ರಮಾಬಾಯಿಯು ಮುಂದುವರಿಸಿದಳು. ರಮಾಬಾಯಿಗೆ ಕಿವಿ ಸರಿಯಾಗಿ ಕೇಳುತ್ತಿರಲಿಲ್ಲ. ಆದುದರಿಂದ ಕಾಲೇಜಿನ ಭಾಷಣಗಳನ್ನು ಹೆಚ್ಚು ಸಮೀಪವಾಗಿ ಕೇಳುತ್ತಿದ್ದಳು. ಪ್ರತಿ ಶನಿವಾರವು ಬೈಬಲಿನ ಮೇಲೆ 'ಮಿಸ್ ಬಿಲ್' ಎಂಬಾಕೆಯು ವ್ಯಾಖ್ಯಾನ ಹೇಳುತ್ತಿದ್ದಳು. "ಯೋಹಾನನ ಶುಭ ವರ್ತಮಾನ"ದ ಒಂದನೇ ಅಧ್ಯಾಯದ ಶುರುವಿನ ಎಂಟು ವಚನಗಳ ಮೇಲೆ ಕೊಟ್ಟ ಉಪನ್ಯಾಸಗಳು, ರಮಾಬಾಯಿಗೆ ಹೆಚ್ಚು ಆಳವಾದ ಪರಿಣಾಮಗಳನ್ನುಂಟುಮಾಡಿದವು. 1886ರ ತನಕವೂ "ಚೆಲ್ಟನ್‌ಹ್ಯಾಮ್" ಕಾಲೇಜಿನಲ್ಲಿ ರಮಾಬಾಯಿಯ ಶಿಕ್ಷಣವು ವ್ಯವಸ್ಥಿತವಾಗಿ ನಡೆಯಿತು. ಮನೋರಮೆಯ ಸಾಕಣೆಯ ಭಾರವನ್ನು ವಾಂಟೇಜದದ ಭಗಿನೀ ಸಮಾಜವು ಹೊತ್ತುಕೊಂಡಿತು.

ಈಗ ರಮಾಬಾಯಿಯ ಕೀರ್ತಿ ಇಂಗ್ಲೆಂಡಿನಿಂದ ಅಮೇರಿಕಕ್ಕೆ ಮುಟ್ಟಿತು. ಫಿಲ್‌ಡೆಲ್ಫಿಯಾದ ವೈದ್ಯಕೀಯ ಕಾಲೇಜಿನ ಪ್ರಿನ್ಸಿಪಾಲಳಾದ "ಡಾ. ರೇಚೆಲ್ ಬಾಡ್ಲೆ" ಎಂಬವಳಿಗೆ ರಮಾಬಾಯಿಯನ್ನು ಹೇಗಾದರೂ ಅಮೇರಿಕಕ್ಕೆ ಕರೆಸಬೇಕಾಗಿ ಅಪೇಕ್ಷೆಯುಂಟಾಯಿತು. ಇದಕ್ಕೆ ತಕ್ಕ ಕಾರಣವೂ ದೊರೆಯಿತು. ಡಾ. ಆನಂದಿಬಾಯಿ ಜೋಶಿ, ಎಂಬ ಭಾರತೀಯ ಮಹಿಳೆಯು ಅಲ್ಲಿ ವೈದ್ಯಕೀಯ ಶಿಕ್ಷಣವನ್ನು ಪೂರೈಸಿದ್ದಳು. ಇವಳ ಪದವೀದಾನ ಸಮಾರಂಭವು 1886ರಲ್ಲಿ ನಡೆಯಬೇಕಾಗಿದ್ದಿತು. ರಮಾಬಾಯಿ ಇಂಗ್ಲೆಂಡಿಗೆ ಹೋದ ಪ್ರಥಮ ಭಾರತೀಯ ಮಹಿಳೆಯಾದರೆ, ಡಾ. ಆನಂದಿಬಾಯಿ ಜೋಶಿ, ಅಮೇರಿಕಾಕ್ಕೆ ತೆರಳಿದ ಪ್ರಥಮ ಹಿಂದೀ ಮಹಿಳೆಯಾಗಿದ್ದಳು. ಇಬ್ಬರೂ ಒಂದೇ ವರ್ಷ ಸ್ವದೇಶವನ್ನು ಬಿಟ್ಟಿದ್ದರು. ಪಂ. ರಮಾಬಾಯಿಗೆ ಆನಂದಿಬಾಯಿ ಜೋಶಿಯು ದೂರದ ಸಂಬಂಧದಲ್ಲಿ ಸೊಸೆಯಾಗಿದ್ದಳು.

ಫಿಲ್‌ಡೆಲ್ಫಿಯಾದ ಸ್ತ್ರೀ ವೈದ್ಯಕೀಯ ಕಾಲೇಜಿನ ಪ್ರಿನ್ಸಿಪಾಲಳಾದ "ರೇಚೆಲ್ ಬಾಡ್ಲೆ"ಯು ಆನಂದಿಬಾಯಿಯ ಪದವೀದಾನ ಸಮಾರಂಭದ

ಒಂದು ವರ್ಷ ಮುಂಚೆಯೇ ರಮಾಬಾಯಿಗೆ ಈ ಸಮಾರಂಭಕ್ಕೆ ಬರಬೇಕೆಂಬ ಪತ್ರ ಬರೆಯಲು ತೊಡಗಿದ್ದಳು. ಕಾಲೇಜಿನ ಶಿಕ್ಷಣದ ಮಧ್ಯದಲ್ಲಿ ಅಮೇರಿಕಕ್ಕೆ ಹೋಗುವುದು ರಮಾಬಾಯಿಗೆ ಇಷ್ಟವಿರಲಿಲ್ಲ. ಆದರೆ ರೇಚೆಲ್ ಬಾಡ್ಲೆ, ಆನಂದಿಬಾಯಿ ಜೋಶಿ, ಮತ್ತು ಅವಳ ಗಂಡ ಗೋಪಾಳ ರಾವ್ ಜೋಶಿ ಇವರ ಪತ್ರಗಳು ಮೇಲಿಂದ ಮೇಲೆ ಬರತೊಡಗಿದವು. ಮಾರ್ಚ 1886ಕ್ಕೆ ಸೌ। ಆನಂದಿಬಾಯಿಯ ಪದವೀದಾನ ಸಮಾರಂಭ ವಾಗಿತ್ತು. ಸೌ। ಆನಂದಿಬಾಯಿ ಜೋಶಿ, ಅಮೇರಿಕಾ ಖಂಡಕ್ಕೆ ಹೋದ ಪ್ರಥಮ ಭಾರತೀಯ ಮಹಿಳೆಯಾಗಿದ್ದಂತೆಯೇ ಪ್ರಥಮ ಭಾರತೀಯ ಸ್ತ್ರೀ ಡಾಕ್ಟರ್ ಕೂಡ ಆಗಿದ್ದಳು. ಗೋಪಾಳ ರಾವ್ ಜೋಶಿಯು ಸೌ। ಆನಂದಿ ಬಾಯಿಯ ಪತಿಯಾಗಿದ್ದನು. ಇವನು ಒಬ್ಬ ಬಡ ಪೋಸ್ಟುಮಾಸ್ಟರ್ ಆಗಿದ್ದನು. ಸ್ತ್ರೀ ಶಿಕ್ಷಣದ ವಿಚಾರವಾಗಿ ಮುಂದಾಳುಗಳು ಕೇವಲ ಭಾಷಣ ಗಳಿಂದಲೇ ಕಾಲ ಕಳೆದು ಪ್ರತ್ಯಕ್ಷ ಕೆಲಸ ಮಾಡದೆ ಇದ್ದುದನ್ನು ಕಂಡು ಗೋಪಾಳ ರಾವ್ ಜೋಶಿಗೆ ಬೇಸರ ಹುಟ್ಟಿತು. ಅವನು ತನ್ನ ಪತ್ನಿಗೆ ಶಿಕ್ಷಣ ಕೊಟ್ಟು ಡಾಕ್ಟರ್ ಮಾಡಿಸಿ ಇತರರಿಗೆ ಮೇಲ್ಪಂಕ್ತಿಯನ್ನು ಹಾಕಿ ಕೊಡಬೇಕೆಂದು ನಿಶ್ಚಯಿಸಿದನು. ತನ್ನ ಪತ್ನಿಯ ಶಿಕ್ಷಣದ ಸಲುವಾಗಿ ಕಚ್ಛಭುಜ, ಶ್ರೀ ರಾಮಪುರ, ಕಲಕತ್ತಾ ಇತ್ಯಾದಿಗಳಿಗೆ ತನ್ನ ಉದ್ಯೋಗಕ್ಕೆ ವರ್ಗಾವಣೆ ಮಾಡಿಸಿಕೊಂಡಿದ್ದನು. ಇವನು ಹುಟ್ಟು ಬಡವನಾಗಿದ್ದನು. ಆನಂದಿಬಾಯಿಯ ಪದವೀದಾನ ಸಮಾರಂಭಕ್ಕೆ ಹಾಜರಿರಲು ರೂಪಾಯಿ ಐದನ್ನು ಸಾಲವಾಗಿ ಪಡಕೊಂಡು ಇವನು ಕೂಲಿಗಳನ್ನು ಸಾಗಿಸುವ ಹಡಗ ದಲ್ಲಿ ಅಮೇರಿಕಕ್ಕೆ ತೆರಳಿದ್ದನು. ಆನಂದಿಬಾಯಿ ಜೋಶಿ ಓದುವಿಕೆ ಯಿಂದಲೂ, ಅಮೇರಿಕಾದಲ್ಲಿರುವಾಗ ರೋಗಿಗಳ ಮತ್ತು ಬಾಣಂತಿಯರ ಶುಶ್ರೂಷೆಯ ಕೆಲಸಗಳಲ್ಲಿಯೂ, ತುಂಬಾ ಶ್ರಮಿಸಿ ಬಳಲಿದ್ದಳು. ಈ ನಿತ್ರಾಣ ದಲ್ಲಿ ಮೊದಲೇ ಇದ್ದ ಕ್ಷಯದ ಬಾಧೆಯು ಹೆಚ್ಚಾಗಿ ಹಿಂದುಸ್ಥಾನಕ್ಕೆ ಬಂದು ಕೆಲವೇ ಸಮಯದಲ್ಲಿ ಎಂದರೆ 26ನೇ ಫೆಬ್ರವರಿ 1887ರಲ್ಲಿ ಪೂಣಾದಲ್ಲಿ ತನ್ನ ಚಿಕ್ಕ ವಯಸ್ಸಿನಲ್ಲಿಯೇ ಕಾಲವಶಳಾದಳು.

ಪಂಡಿತಾ ರಮಾಬಾಯಿಗೆ ಅಮೇರಿಕಕ್ಕೆ ಈ ಸಮಯದಲ್ಲಿ ಹೊರಡದಂತೆ ಅನೇಕರು ಬೋಧನೆ ಮಾಡಿದರು. ಫೆಬ್ರವರಿ ತಿಂಗಳಲ್ಲಿ ತುಂಬಾ ಬಿರುಗಾಳಿ ಇರುವ ಕಾರಣ ಸಮುದ್ರದಲ್ಲಿ ಹಡಗು ಮುಳುಗಿ ಸಾಯುವುದು ಬೇಡವೆಂದು



ಭಾರತದ ಪ್ರಥಮ ಮಹಿಳಾ ಡಾಕ್ಟರ್
ಡಾ। ಆನಂದೀಬಾಯಿ ಜೋಶಿ.

ಕೆಲವರು ಹೇಳಿದರು. ಅಮೇರಿಕಾ ಖಂಡದ ಸುತ್ತುಮುತ್ತು 25 ಮೈಲು ಚಳಿಯ ದೆಸೆಯಿಂದ ಸಮುದ್ರದ ನೀರು ಗಟ್ಟಿಯಾಗಿತ್ತು. ಹಡಗುಗಳೂ, ಈ ಕಲ್ಲುಕಟ್ಟಿದ ನೀರಿಗೆ ಬಡಿದು ಒಡೆದು ಹೋಗುವುದೆಂಬ ವಾರ್ತೆಯೂ ತಲಪಿತು. ಆದರೂ ಬಾಡ್ಲೆ ಬಾಯಿಯ ಆಗ್ರಹದ ಪತ್ರಗಳು ಮೇಲಿಂದ ಮೇಲೆ ಬರತೊಡಗಿದವು. ಆ ಆಮಂತ್ರಣವು ನಿರಾಕರಿಸುವುದು ರಮಾ ಬಾಯಿಗೆ ಸಾಧ್ಯವಾಗದೆ ಅಮೇರಿಕಕ್ಕೆ ಹೋಗಿ ಕೆಲವು ಸಮಯದಲ್ಲಿ ಹಿಂದಿರುಗುವುದು ಎಂದು ಆಲೋಚಿಸಿ 17ನೇ ಫೆಬ್ರವರಿ 1886ರಲ್ಲಿ ತನ್ನ ಮಗಳೊಂದಿಗೆ "ಬ್ರಿಟಿಷ್ ಪ್ರಿನ್ಸೆಸ್" ಎಂಬ ಹಡಗದಲ್ಲಿ ಕುಳಿತು "ಲಿವರ್-ಪೂಲ್" ಬಂದರದಿಂದ ಅಮೇರಿಕಕ್ಕೆ ಹೊರಟಳು.

೧೧. ಅಮೇರಿಕಾದಲ್ಲಿ

ಫೆಬ್ರವರಿ ತಿಂಗಳು ಸಮುದ್ರ ಪ್ರಯಾಣಕ್ಕೆ ಹೆಚ್ಚು ಅನುಕೂಲವಿರುವುದಿಲ್ಲ. ಈ ಕಾರಣದಿಂದ ರಮಾಬಾಯಿ ಪ್ರಯಾಣಿಸುತ್ತಿದ್ದ "ಬ್ರಿಟಿಷ್ ಪ್ರಿನ್ಸೆಸ್" ಹಡಗದಲ್ಲಿ ಹೆಚ್ಚು ಪ್ರಯಾಣಿಕರು ಇರಲಿಲ್ಲ. 1886ರ ಬಿರುಗಾಳಿಯ ತುಫಾನುಗಳು ಜನರನ್ನು ಸಮುದ್ರ ಪ್ರಯಾಣಕ್ಕೆ ಹೆದರಿಸುತ್ತಿದ್ದುವು. ಈ ಹಡಗದಲ್ಲಿ ಒಂದನೇ ವರ್ಗದ ಪ್ರಯಾಣಿಕರಲ್ಲಿ ಗಂಡಸರು ನಾಲ್ಕು, ಹೆಂಗಸರು ಮೂವರು ಹೀಗೆ ಏಳು ಜನರು ಮಾತ್ರ ಇದ್ದರು. ಮೂರನೇ ತರಗತಿಯಲ್ಲಿ ಹೆಂಗಸರು ಮಕ್ಕಳು ಕೂಡಿ ನೂರತೊಂಭತ್ತು ಜನ ಪ್ರಯಾಣಿಕರಿದ್ದರು. ಇವರೆಲ್ಲರೂ ಧಾರ್ಮಿಕ ಮನೋಭಾವನೆಯ ಜನರಾಗಿದ್ದರು. ಆಗ ಯುರೋಪಿನಲ್ಲಿದ್ದ ಧರ್ಮಾಚರಣೆಯ ವಿರುದ್ಧವಾದ ನಿರ್ಬಂಧಗಳಿಂದ ಬೇಸರ ಹುಟ್ಟಿ ತಮ್ಮ ಧರ್ಮಾಚರಣೆಗೆ ಪ್ರತಿಬಂಧವಿಲ್ಲದ ಅಮೇರಿಕಾ ದೇಶಕ್ಕೆ ಹೋಗಿ ನೆಲಸುವ ಉದ್ದೇಶದಿಂದ ಇವರೆಲ್ಲರೂ ಯುರೋಪಿನಿಂದ ಹೊರಟಿದ್ದರು. ಕೆಲಕಾಲದ ನಂತರ ಇಂತಹ ನಿರ್ವಾಸಿತರ ಮೇಲೆ ತಡೆ ಆಜ್ಞೆ ಹಾಕಿದ್ದರೂ, ರಮಾಬಾಯಿ ಅಮೇರಿಕಕ್ಕೆ ಹೊರಡುವ ವೇಳೆಯ ವರೆಗೂ ಇಂತಹ ನಿರ್ವಾಸಿತರ ದೇಶತ್ಯಾಗವು ಭರದಿಂದ ಸಾಗುತ್ತಿತ್ತು. ಹಡಗವು ಮುಂದೆ ಹೋದ ಹಾಗೆ ಬಿರುಗಾಳಿಯ ದೆಸೆಯಿಂದ ಭಯಂಕರ ತುಫಾನು ಎದ್ದಿತು. ರಮಾಬಾಯಿ ಇದ್ದ ಕೋಣೆಯ ಕಿಟಿಕಿಗಳಿಗೆ ಸಮುದ್ರದ ತೆರೆಗಳು ಬಡಿಯಲಾರಂಭಿಸಿದುವು. ದೂಷಿತ ಗಾಳಿಯಿಂದಾಗಿ ಶ್ವಾಸೋಚ್ಛ್ವಾಸ

ಮಾಡಲಿಕ್ಕಾಗಲೀ ಇದ್ದ ಸ್ಥಳದಿಂದ ಏಳುವುದಕ್ಕಾಗಲೀ ಆಗುತ್ತಿರಲಿಲ್ಲ. ಹೇಗಾದರೂ ಎದ್ದು ಮೇಲಿನ ಉಪ್ಪರಿಗೆಯ ಮೇಲೆ ಹೋಗಿ ಒಂದು ಕುರ್ಚಿಯ ಮೇಲೆ ರಮಾಬಾಯಿ ಕುಳಿತುಕೊಂಡಳು. ತುಫಾನು ಕಡಿಮೆಯಾಗುವಂತೆ ಎಲ್ಲಾ ಪ್ರಯಾಣಿಕರು ದೇವರನ್ನು ಪ್ರಾರ್ಥಿಸಿದರು. ದೇವರ ಭಜನೆ ಮಾಡಿದರೆ ಸೈತಾನ ಕೋಪಗೊಂಡು ತುಫಾನು ದ್ವಿಗುಣಿತವಾಗುವುದೆಂದು ಹಡಗಿನ ಕೆಪ್ಟನ್ನನ ಭಾವನೆಯಾಗಿದ್ದುದರಿಂದ ಪ್ರಯಾಣಿಕರಿಗೂ ಕೆಪ್ಟನನಿಗೂ ತುಂಬಾ ಚರ್ಚೆಯಾಯಿತು. ಕಡೆಗೆ ಹಡಗವು 1886ರ ಮಾರ್ಚ ತಾರಿಕು 6ರಂದು ಬೆಳಿಗ್ಗೆ ಘಂಟೆ 8–10ಕ್ಕೆ ಅಮೇರಿಕದ ದಡ ಸೇರಿತು. ದಡದ ಸುತ್ತಲೂ, ನೀರು ಚಳಿಗೆ ಗಡ್ಡೆಕಟ್ಟಿದ್ದುದರಿಂದ ಹಡಗವು ಹೂತುಹೋಯಿತು. ಬೇರೆ ದೋಣಿಯ ಸಹಾಯದಿಂದ ಎಲ್ಲರೂ ಪಿಲೆಡೆಲ್ಫಿಯಾದ ದಡಕ್ಕೆ ಸೇರಿದರು.

ರಮಾಬಾಯಿ ಅಮೇರಿಕಕ್ಕೆ ತಲಪುವ ಎರಡು ದಿವಸಗಳ ಮೊದಲೇ ಸೌ। ಆನಂದಿಬಾಯಿ ಜೋಶಿ, ಗೋಪಾಳ ರಾವ್ ಜೋಶಿ ಇವರು ಬಂದರದಲ್ಲಿದ್ದು ರಮಾಬಾಯಿ ಬರುವುದನ್ನು ನಿರೀಕ್ಷಿಸುತ್ತಿದ್ದರು. ಪ್ರಕೃತಿ ಅಸ್ವಾಸ್ಥ್ಯದಿಂದಲೂ ಪರೀಕ್ಷೆಯ ಓದುವಿಕೆಯಿಂದಲೂ ಬಳಲಿದವಳಾಗಿದ್ದರೂ ಸೌ। ಆನಂದಿಬಾಯಿ, ರಮಾಬಾಯಿಯ ಮೇಲಿನ ಆದರಭಾವದಿಂದ ಬಂದರದಲ್ಲಿ ಕಾಯುತ್ತಿದ್ದಳು.

ಮಾರ್ಚ 1886ಕ್ಕೆ ಸೌ। ಆನಂದಿಬಾಯಿಯ ಪದವೀದಾನ ಸಮಾರಂಭವು ನಿಶ್ಚಯಿಸಲಾಗಿತ್ತು. ಆ ದಿನ ಬೆಳಿಗ್ಗೆ 10 ಘಂಟೆಯಿಂದ ರಾತ್ರಿ 10 ಘಂಟೆ ತನಕ ಕಾರ್ಯಕ್ರಮವು ಏರ್ಪಟ್ಟಿತ್ತು. ಮರುದಿನವೇ ಪಂ. ರಮಾಬಾಯಿಯ ಸ್ವಾಗತಕ್ಕಾಗಿ ದೊಡ್ಡದೊಂದು ಸಭೆಯನ್ನು ಕರೆಯಲಾಗಿತ್ತು. ಈ ಸಭೆಯ ಎಲ್ಲಾ ವ್ಯವಸ್ಥೆಯನ್ನು ಕಾಲೇಜಿನ ಪ್ರಿನ್ಸಿಪಾಲಳಾದ "ರೇಚೆಲ್ ಬಾಡ್ಲೆ" ಬಾಯಿಯು ವಹಿಸಿಕೊಂಡಿದ್ದಳು. ಅಮೇರಿಕಾ ದೇಶದ ಜನರಿಗೆ ಭಾರತೀಯ ಮಹಿಳೆಯರನ್ನು ನೋಡುವ ಕುತೂಹಲವಿದ್ದುದರಿಂದ ಈ ಸಮಾರಂಭದ ವೇಳೆ ಎಲ್ಲರಿಗೂ ಕಾಣಿಸುವಂತೆ ವೇದಿಕೆಯ ಮೇಲೆ ಪಂ. ರಮಾಬಾಯಿ, ಮನೋರಮಾ, ಸೌ। ಆನಂದಿಬಾಯಿ ಜೋಶಿ, ಇವರನ್ನು ಕುಳ್ಳಿರಿಸಲಾಗಿತ್ತು.

ಸೌ। ಆನಂದಿಬಾಯಿ ಜೋಶಿ, ಅಮೇರಿಕಾದಲ್ಲಿ ಹೆಚ್ಚು ಜನಪ್ರಿಯತೆ ಗಳಿಸಿದ್ದಳು. ಈ ಕಾರಣದಿಂದ ಪದವೀದಾನ ಸಮಾರಂಭದ ನಂತರ ಆನಂದಿ

ಬಾಯಿಯ ಮಿತ್ರ ಮಂಡಲಿಯವರು ಪಂ. ರಮಾಬಾಯಿಯನ್ನು ಆಮಂತ್ರಿಸಿ ಭೋಜನ ಸಮಾರಂಭಗಳನ್ನೂ, ಸ್ವಾಗತ ಸತ್ಕಾರಗಳನ್ನೂ ಏರ್ಪಡಿಸಿದ್ದರು. ಸಮಾರಂಭಗಳು, ಪ್ರಸಿದ್ಧ ಸ್ಥಳಗಳ ಸಂದರ್ಶನ ಈ ಕಾರ್ಯಕ್ರಮಗಳಲ್ಲಿ ಮೂರು ವಾರಗಳು ಕಳೆದುವು.

ಈ ಸಮಯದಲ್ಲಿ ಮನೋರಮೆಗೆ ಅಸ್ವಸ್ಥವುಂಟಾಯಿತು. ಸಮುದ್ರ ಪ್ರವಾಸದಿಂದಲೂ, ಎಡೆಬಿಡದ ಕಾರ್ಯಕ್ರಮಗಳಿಂದಲೂ, ಮನೋರಮೆಯ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವಾಯಿತು. ಡಾ. ಆನಂದಿಬಾಯಿ ಜೋಶಿಯ ಪರಿಶ್ರಮದಿಂದಾಗಿ ಮನೋರಮೆಗೆ ಕೆಲವು ದಿನಗಳಲ್ಲಿ ಗುಣ ಮುಖವಾಯಿತು. ಅಮೇರಿಕಾದಂತಹ ಸುಧಾರಿತ ದೇಶವನ್ನು ನೋಡಿ ಇಲ್ಲಿಂದೇನಾದರೂ ಹೆಚ್ಚು ಅನುಭವ ಪಡೆದೇ ಹಿಂದಿರುಗಬೇಕೆಂದು ರಮಾ ಬಾಯಿಗೆ ಮನಸ್ಸಾಯಿತು. ಇಂಗ್ಲೆಂಡಿನ ಕಾಲೇಜು ಶಿಕ್ಷಣ ಪೂರ್ಣಗೊಳಿಸಿ ಹಿಂದುಸ್ಥಾನದ ವಿದ್ಯಾ ಇಲಾಖೆಯಲ್ಲಿ ಅಧಿಕಾರಿಯಾಗಬೇಕೆಂದು ಹಿಂದು ಸ್ಥಾನದ ಸರಕಾರವು ರಮಾಬಾಯಿಗೆ ಆಮಂತ್ರಣ ಕಳುಹಿಸಿತ್ತು. ಕಾಲೇಜು ಶಿಕ್ಷಣವು ಉತ್ತಮ ರೀತಿಯಲ್ಲಿ ಸಾಗುತ್ತಿತ್ತು. ಆದರೆ ಸರಕಾರದ ನೌಕರಿ ಗಿಂತಲೂ, ಜನತಾ ಸೇವೆಯೇ ಮೇಲೆಂದು ರಮಾಬಾಯಿಯು ಭಾವಿಸಿದ್ದಳು. ಮನೋರಮೆಯನ್ನು ಇಂಗ್ಲೆಂಡಿಗೆ ಹೋಗುವ ಒಂದು ಹಡಗಿನ ವ್ಯವಸ್ಥಾಪಿ ಕೆಯ ಮೂಲಕ 'ವಾಂಟೇಜ'ದ ಭಗಿನೀ ಸಮಾಜದಲ್ಲಿ ಇರಗೊಡಿಸುವಂತೆ ವ್ಯವಸ್ಥೆ ಹೊಂದಿಸಿ ರಮಾಬಾಯಿಯು ಕೆಲವು ಸಮಯ ಅಮೇರಿಕಾದಲ್ಲಿಯೇ ಇರುವುದಾಗಿ ನಿಶ್ಚಯಿಸಿದಳು.

ಭಾರತದಲ್ಲಿ ಪ್ರಾರಂಭ ಶಿಕ್ಷಣವು, ಧೂಳಾಕ್ಷರ, ಚಡಿಯೇಟು ಪ್ರಯೋಗಗಳಿಂದ ಐಗಳು ಬೋಧಿಸುವ ವೇಳೆ, ಅಮೇರಿಕಾದಲ್ಲಿ ಒಂದು ಹೊಸ ಶಿಕ್ಷಣ ಕ್ರಮ ಪ್ರಸಾರಕ್ಕೆ ಬಂದಿತ್ತು. ಈ ಶಿಕ್ಷಣ ಕ್ರಮವು ರಮಾ ಬಾಯಿಯ ಮನಸ್ಸನ್ನು ಆಕರ್ಷಿಸಿತು. ಫಿಲೆಡೆಲ್ಫಿಯಾದ ಬಾಲ ಶಿಕ್ಷಣ ಪಂಡಿತೆ ಕುಮಾರಿ 'ಆನ್ನಾ ಹಾಲೋವೆಲ್' ಎಂಬಾಕೆಯನ್ನು ರಮಾಬಾಯಿಯು ಭೇಟಿಯಾದಳು. ಇವಳು ಅಮೇರಿಕಾದಲ್ಲಿ ಸರ್ವತ್ರ ಪ್ರಚಾರದಲ್ಲಿದ್ದ (Free Primary school) 'ಫ್ರೀ ಪ್ರ್ಯಾಮರಿ ಸ್ಕೂಲ್'ಗಳನ್ನು ಹೋಲಿಸಿ 'ಫ್ರೋಬೆಲ್'ನ 'ಕಿಂಡರ್‌ಗಾರ್ಟನ್' ಶಿಕ್ಷಣ ಕ್ರಮುವನ್ನು ರಮಾಬಾಯಿಗೆ ಬೋಧಿಸಿದಳು. ಭಾರತದಲ್ಲಿರುವಾಗ ಇದ್ದ ಹ್ಯಾಸ್ಕೂಲ್, ಕಾಲೇಜುಗಳ

ಉಚ್ಚ ಶಿಕ್ಷಣದ ಧ್ಯೇಯವು ಮಾಯವಾಗಿ ಬಾಲೋದ್ಯಾನ ಶಿಕ್ಷಣ ಕ್ರಮದ ಕಡೆಗೆ ರಮಾಬಾಯಿಯ ಮನಸ್ಸು ಹರಿಯಿತು. ಕೂಡಲೇ ಅಲ್ಲಿಯ ಒಂದು ಟ್ರೈನಿಂಗ್ ಕಾಲೇಜನ್ನು ಸೇರಿ 'ಕಿಂಡರ್ ಗಾರ್ಟನ್' ಶಿಕ್ಷಣವನ್ನು ಕಲಿಯಲು ಪ್ರಾರಂಭಿಸಿದಳು. ಭಾರತದಂತಹ ನಿರಕ್ಷರತೆಯು ಹೆಚ್ಚಾಗಿದ್ದ ದೇಶದಲ್ಲಿ ಈ ಶಿಕ್ಷಣಪದ್ಧತಿಯು ಫಲಪ್ರದವಾದೀತೆಂದು ಯೋಚಿಸಿ, ಮರಾಠಿ ಭಾಷೆಯಲ್ಲಿ ಬಾಲೋದ್ಯಾನ ಪುಸ್ತಕಗಳನ್ನು ಬರೆಯಲಾರಂಭಿಸಿದಳು.

ಅಮೇರಿಕಾದಲ್ಲಿ ಬಾಲೋದ್ಯಾನ ಶಿಕ್ಷಣವನ್ನು ಪ್ರಚಾರಕ್ಕೆ ತಂದ 'ಬಾಲ ಶಿಕ್ಷಣದ ತಾಯಿ' ಎಂದು ಹೆಸರು ಗಳಿಸಿದ 'ಮಿಸ್ ಎಲಿಝಾಬೇತ್ ಫೀಬಡಿ'ಯು ಆಗ ಜೀವಂತಳಾಗಿದ್ದಳು. ಅವಳ ವಯಸ್ಸು ಎಂಭತ್ತಾರು ಆಗಿತ್ತು. ಹಳೆ ಸಂಪ್ರದಾಯದ ಜನಗಳ ವಿರೋಧವನ್ನು ಎದುರಿಸಿ ಕಠಿಣ ಪರಿಸ್ಥಿತಿಯಲ್ಲಿ ಅವಳು ಬಾಲೋದ್ಯಾನ ಶಿಕ್ಷಣವನ್ನು ಪ್ರಚಾರಕ್ಕೆ ತಂದಿದ್ದಳು. ಇವಳನ್ನು ಕಂಡು ರಮಾಬಾಯಿ ವಿಚಾರ ವಿನಿಮಯ ಮಾಡಿದಳು. ಇವಳ ಭೇಟಿಯ ಪ್ರಸಂಗವನ್ನು ರಮಾಬಾಯಿ ತನ್ನ ಆತ್ಮಚರಿತ್ರೆಯಲ್ಲಿ ಹೀಗೆ ವರ್ಣಿಸುತ್ತಾಳೆ. ಅವಳ ಶರೀರ ಪ್ರಕೃತಿಯು ತೀರಾ ಅಶಕ್ತವಾಗಿದ್ದರೂ ವೃದ್ಧಾಪ್ಯದ ದೆಸೆಯಿಂದ ಶರೀರ ಶಿಥಿಲಗೊಂಡಿದ್ದರೂ, ಮನಸ್ಸು ಬುದ್ಧಿಗಳಲ್ಲಿ ತಾರುಣ್ಯವು ಕಂಡುಬರುತ್ತದೆ. ತನ್ನ ಎಳೇ ಪ್ರಾಯದ ನೆನಪುಗಳನ್ನು ಹೇಳುತ್ತಾ, ತನ್ನ ತಾಯಿಯನ್ನು ಸ್ಮರಿಸಿದ ವೇಳೆಯಲ್ಲಿ ಫೀಬಡಿಬಾಯಿಯು ವೃದ್ಧಾಪ್ಯವೂ ಮಾಯವಾಗಿ ಎಳೇ ವಯಸ್ಸಿನ ಮಕ್ಕಳಂತೆ ಹರ್ಷಿತಳಾದಳು. ತನ್ನ ತಾಯಿಯ ಅನುಗ್ರಹದಿಂದಲೇ ದೇಶದ ವಿದ್ಯಾರೂಪೀ ಕಟ್ಟಡದ ನಿರ್ಮಾಣದಲ್ಲಿ ಎಲಿಝಾಬೇತ್ ಫೀಬಡಿಯ ಸ್ಥಾನವು ಅದ್ವಿತೀಯವಾಗಿದೆ.

ಅಮೇರಿಕದಲ್ಲಿರುವಾಗ ಇನ್ನೊಬ್ಬ ಆದರ್ಶ ಮಹಿಳೆಯ ಪರಿಚಯ ರಮಾಬಾಯಿಗೆ ಆಯಿತು. ಅವಳ ಹೆಸರು, 'ಮಿಸ್ ಫ್ರಾನ್ಸಿಸ್ ಬಿಲರ್ಡ್', ಮದ್ಯಪಾನ ನಿಶೇಧದ ಕಾನೂನನ್ನು ಇವಳು ತಯಾರಿಸಿದಳು. ಅಮೇರಿಕಾದಲ್ಲಿ ಮದ್ಯಪಾನ ನಿಷೇಧದ ಕಾನೂನುಗಳು ಜಾರಿಗೆ ಬರಲು ಹೆಚ್ಚಿನಂಶ ಮಹಿಳೆಯರೇ ಕಾರಣರು. ಬಿಲರ್ಡ್‌ಬಾಯಿಗೆ ಮದ್ಯಪಾನ ನಿಷೇಧ ಚಳವಳಿಯಲ್ಲಿ ರಮಾಬಾಯಿಯು ತುಂಬಾ ಸಹಕಾರ ಕೊಟ್ಟಳು. 'ಚಿಕಾಗೋ'ದ ಸುಪ್ರಸಿದ್ಧ ದಿನಪತ್ರಿಕೆಯಾದ (Inter Ossion) 'ಇಂಟರ್ ಓಶನ್'ನ ಬಾತ್ಮಿದಾರನು 1887 ನೇ ದಶಂಬರದಲ್ಲಿ ಪಂ. ರಮಾಬಾಯಿಯನ್ನು ಬಿಲರ್ಡ್

ಬಾಯಿಯ ಮನೆಯಲ್ಲಿಯೇ ಸಂದರ್ಶಿಸಿದನು. ಮುಂದೆ ಭಾರತ ದೇಶದ ಅನಾಥ ಮಹಿಳೆಯರ ಉದ್ಧಾರಕ್ಕಾಗಿ "ಪಂ. ರಮಾಬಾಯಿ ಎಸೋಸಿಯೇಶನ್" ಸ್ಥಾಪನೆಯಾಗುವ ವೇಳೆ ಬಿಲರ್ಡ್‌ಬಾಯಿ ತುಂಬಾ ಸಹಾಯ ಮಾಡಿದಳು. ಬಿಲರ್ಡ್‌ಬಾಯಿಯ ಮರಣಾನಂತರ ಅಮೇರಿಕದ ರಾಜಧಾನಿ 'ವಾಶಿಂಗ್ಟನ್'ನಿನ ಕೀರ್ತಿ ಮಹಾಲ್ ಎಂಬಲ್ಲಿ ಬಿಲರ್ಡ್‌ಬಾಯಿಯ ಪ್ರತಿಮೆಯನ್ನು ಅನಾವರಣಗೊಳಿಸಲಾಯಿತು. ಅಮೇರಿಕೆಯ ಪ್ರತಿಯೊಂದು ಸಂಸ್ಥಾನದಿಂದಲೂ ಸುಪ್ರಸಿದ್ಧರಾದ ಇಬ್ಬರ ಪ್ರತಿಮೆಗಳನ್ನು ಇಲ್ಲಿಡಲು ಅನುಮತಿ ಇದೆ. ಇಲ್ಲಿಯ ಪ್ರತಿಮೆಗಳಲ್ಲಿ ಬಿಲರ್ಡ್‌ಬಾಯಿಯ ಪ್ರತಿಮೆ ಮಾತ್ರ ಮಹಿಳೆಯದಾಗಿತ್ತು. ಇವಳ ಪ್ರತಿಮೆಯ ಸಮೀಪವೇ ಅಮೇರಿಕದ ಪ್ರಥಮ ಅಧ್ಯಕ್ಷ, 'ಜಾರ್ಜ್ ವಾಶಿಂಗ್ಟನ್'ನ ಪ್ರತಿಮೆಯು ಸ್ಥಾಪಿಸಲಾಗಿತ್ತು.

ಅಮೇರಿಕಾ ದೇಶದ ಬೇರೆ ಬೇರೆ ರಾಜ್ಯಗಳಿಂದಲೂ, ರಮಾಬಾಯಿಗೆ ಬಾಷಣಕೊಡಲು ಆಗ್ರಹದ ಆಮಂತ್ರಣಗಳು ಬರತೊಡಗಿದವು, ಒಮ್ಮೆ 'ಕಂಟಕೀ' ಸಂಸ್ಥಾನದ 'ಲುಡ್‌ವಿಲ್' ಎಂಬಲ್ಲಿ ಒಂದು ಸ್ವಾರಸ್ಯದ ಘಟನೆಯು ನಡೆಯಿತು. ಸಭೆಸೇರುವ ದೇವಾಲಯದ ಆಚಾರ್ಯರು ಆರಂಭದಲ್ಲಿಯೇ ಪಂ. ರಮಾಬಾಯಿಯನ್ನು ಭಾಷಣ ಮಾಡುವ ಎತ್ತರವಾದ ವ್ಯಾಸಪೀಠದ ಮೇಲೆ ಕುಳಿತುಕೊಳ್ಳುವಂತೆ ವಿನಂತಿಸಿದರು. ಸಭೆಯಲ್ಲಿದ್ದ ಮಹಿಳೆಯರಲ್ಲಿ ಕೆಲವರಿಗೆ ವ್ಯಾಸಪೀಠದಲ್ಲಿ ಹತ್ತಿರ ಬಂದು ಕುಳಿತುಕೊಳ್ಳುವಂತೆ ರಮಾಬಾಯಿ ಕೇಳಿಕೊಂಡಳು. ಅದಕ್ಕೆ ಮಹಿಳೆಯರು "ನಾವು ಇಷ್ಟರ ವರೆಗೆ ಇಂಥಾ ಸಭಾಸ್ಥಾನಗಳಲ್ಲಿ ಮುಂದೆ ಕುಳಿತುಕೊಳ್ಳಲಿಲ್ಲವಲ್ಲ, ಈ ಕೆಲಸವು ನಮ್ಮಿಂದ ಸಾಧ್ಯವಿಲ್ಲ"ವೆಂದು ಉತ್ತರಿಸಿದರು.

ಇದಕ್ಕೆ ರಮಾಬಾಯಿಯು "ಅಹಾ ಅಕ್ಕತಂಗಿಯರೇ, ನೀವು ಈ ಮೊದಲು ಸಭೆಗಳಲ್ಲಿ ಅಗ್ರಸ್ಥಾನದಲ್ಲಿ ಕುಳಿತುಕೊಳ್ಳದಿದ್ದರೆ ಈ ದಿನದಿಂದ ಹಾಗೆ ಮಾಡಲಿಕ್ಕೆ ಪ್ರಾರಂಭಿಸಿರಿ. ನನ್ನ ಸಂಗಡ ಇಲ್ಲಿ ಬಂದು ಕುಳಿತುಕೊಳ್ಳಿರಿ. ಇದರಿಂದಾಗಿ ನಿಮಗೇನಾದರೂ ತೊಂದರೆಯಾದರೆ ಮತ್ತೊಮ್ಮೆ ನೀವು ಹಾಗೆ ಮಾಡಬೇಡಿರಿ" ಎಂದಳು. ಆಗ ನಾಲ್ಕೈದು ಮಂದಿ ಮಹಿಳೆಯರು ರಮಾಬಾಯಿಯ ಭಾಷಣ ಮುಗಿಯುವ ವರೆಗೆ ಮೇಲೆ ಬಂದು ಕುಳಿತುಕೊಂಡರು. ಅಮೇರಿಕನ್ ಸ್ತ್ರೀಯರು ಹೆಚ್ಚು ಸುಧಾರಣೆ ಹೊಂದಿ

ದವರು, ಆದರೆ ಕೆಲವು ವಿಚಾರಗಳಲ್ಲಿ ಅವರು ಬಹಳ ಹಿಂದೆ ಇದ್ದಾರೆ ಎಂಬ ವಿಚಾರವು ರಮಾಬಾಯಿಯನ್ನು ಆಶ್ಚರ್ಯಗೊಳಿಸಿತು.

ರಮಾಬಾಯಿ ಅಮೇರಿಕಕ್ಕೆ ಹೋಗುವ ನಾಲ್ವತ್ತ-ಆರು ವರ್ಷಗಳ ಮೊದಲು 1846ರಲ್ಲಿ ಅಮೇರಿಕದ ಮಹಿಳೆಯರ ಪರಿಸ್ಥಿತಿಯು ಕುರಿತು ಪ್ರತ್ಯಕ್ಷವಾಗಿ ನೋಡುವರೇ 'ಹರಿಯೇಟ್ ಮಾರ್ಟಿನೀನಿ' ಎಂಬ ಇಂಗ್ಲೆಂಡಿನ ಪ್ರಸಿದ್ಧ ವಿದುಷಿಯು ಅಮೇರಿಕಕ್ಕೆ ಹೋಗಿ ಅಲ್ಲಿಯ ಸ್ಥಿತಿಗತಿಗಳನ್ನು ಪರಿಶೀಲಿಸಿ "ಅಮೇರಿಕನ್ ಸಮಾಜ್" ಎಂಬ ಪುಸ್ತಕವನ್ನು ಬರೆದಿದ್ದಳು. ಈ ಪುಸ್ತಕದಲ್ಲಿ ಅಮೇರಿಕನ್ ಸ್ತ್ರೀಯರ ಕುರಿತು ಹೀಗೆ ಬರೆದಿದ್ದಳು. "ಅವರು ಕ್ರಯಕ್ಕೆ ಪಡೆದ ಗುಲಾಮರಂತಿದ್ದಾರೆ!"

ಆದರೆ 1886ನೇ ಇಸವಿಯ ವೇಳೆಗೆ ಅಮೇರಿಕನ್ ಮಹಿಳೆಯರು ಬಹಳ ಪ್ರಗತಿಹೊಂದಿದ್ದರು. ಉದಾಹರಣೆಗೆ 1845ರಲ್ಲಿ "ಅಂತರ್ಜಲ ದೂರದರ್ಶಕ" ಯಂತ್ರವು ಓರ್ವ ಮಹಿಳೆಯಿಂದ ಶೋಧಿಸಲ್ಪಟ್ಟಿತು. ಇನ್ನೊಬ್ಬಳು ಸಮುದ್ರ ಪ್ರಯಾಣದ ಸಮಯ ಉಪಯೋಗಿಸುವ "ಪ್ರಾಣ ರಕ್ಷಕ ಕವಚ"ವನ್ನು ತಯಾರಿಸಿದ್ದಳು. ಇನ್ನೋರ್ವಳು "ಬಾಷ್ಪೋತ್ಪಾದಕ" ಯಂತ್ರವನ್ನು ಕಂಡುಹಿಡಿದಳು. ಮತ್ತೊಬ್ಬಳಿಂದ ಹೊಗೆಬಂಡಿಯ ಆವಿಯ ಯಂತ್ರದಲ್ಲಿ ಸುಧಾರಣೆಯ ಪರಿಶೋಧವಾಯಿತು. ಒಬ್ಬಳಿಂದ ನೆರೆಹಾವಳಿಯಿಂದ ಬೆಳೆಗಳು ನಾಶವಾಗದಂತೆ ಉಪಾಯವು ಕಂಡುಹಿಡಿಯಲ್ಪಟ್ಟಿತು. ಅಲ್ಲದೆ ಪೈರು ಕಟಾಯಿಸುವ ಯಂತ್ರ, ಧಾನ್ಯದ ಸಿಪ್ಪೆ ಬೇರೆ ಮಾಡುವ ಯಂತ್ರ, ಇತ್ಯಾದಿಗಳನ್ನು ತಯಾರಿಸಿ ಅಮೇರಿಕನ್ ಸರಕಾರದಿಂದ ಆ ಹೊಸ ಶೋಧಗಳ ಹಕ್ಕನ್ನು ರಿಜಿಸ್ಟರ್ ಮಾಡಿಕೊಂಡಿದ್ದರು.

ಪಂ. ರಮಾಬಾಯಿ ಪ್ರಥಮವಾಗಿ ಕಾಲಿಟ್ಟ 'ಫಿಲಿಡೆಲ್ಫಿಯಾ' ಪಟ್ಟಣದಲ್ಲಿ ಪ್ರಥಮ ಮಹಿಳಾ ವೈದ್ಯಕೀಯ ಕಾಲೇಜ್ ಸ್ಥಾಪನೆಯಾಗಿತ್ತು. ಅಲ್ಲಿ ಶಿಕ್ಷಣ ಪಡೆದು ಹೊರಗೆ ಬಂದ ಸ್ತ್ರೀ ಡಾಕ್ಟರುಗಳ ಮೇಲೆ "ಪಿಲ್ಡೆಲ್ಫಿಯಾ ಕೌಂಟೀ ಮೆಡಿಕಲ್ ಅಸೋಸಿಯೇಶನ್" ಎಂಬ ಪುರುಷ ಡಾಕ್ಟರರ ಸಭೆಯವರು ಬಹಿಷ್ಕಾರ ಹೂಡಿದ್ದರು. ಸ್ತ್ರೀ ವೈದ್ಯರ ಮುಖಾವಲೋಕನ ಮಾಡಬಾರದು ಎಂಬಾಶಯದ ಠರಾವನ್ನು ಕೂಡಾ ಪಾಸುಮಾಡಿದ್ದರು. ಇದಕ್ಕೆ ಕಾರಣ ಸ್ತ್ರೀಯರು ವೈದ್ಯಕೀಯ ವೃತ್ತಿ ಮಾಡಿದರೆ ಅವರ ಪವಿತ್ರ ಮನಸ್ಸು ಅಪವಿತ್ರವಾದೀತು, ಇದರ ಫಲವಾಗಿ ಅವರು ಅಸ್ವಾಭಾವಿಕ

ನಡತೆಯನ್ನು ಶುರುಮಾಡಿಯಾರು, ಸ್ತ್ರೀಯರ ಮೆದುಳು ಪುರುಷರ ಮೆದುಳಿಗಿಂತ ಕಡಿಮೆ ತೂಕದ್ದಾದ್ದರಿಂದ ವೈದ್ಯಕೀಯದಂತಹ ಗಹನ ವಿಚಾರದಲ್ಲಿ ಬೇಕಾದಷ್ಟು ಪ್ರಾವಿಣ್ಯತೆ ಅವರಿಗೆ ಬರಲಿಕ್ಕಿಲ್ಲ, ಪರಿಣಾಮವಾಗಿ ಇವರಿಂದ ಹೆಚ್ಚು ಪ್ರಾಣಹಾನಿಯಾಗುವ ಸಂಭವವಿದೆ ಇತ್ಯಾದಿ ದೂರುಗಳು ಅವರ ಮೇಲೆ ಇದ್ದುವು. ಸ್ತ್ರೀ ವೈದ್ಯರುಗಳು ಸಮರ್ಥವಾದ ಸೇವೆ, ಮಾಡಬಲ್ಲರು, ಎಂಬ ಅನುಭವ ಬಂದ ಮೇಲೆಯೇ ಈ ಬಹಿಷ್ಕಾರವು ತೆಗೆಯುಲಾಯಿತು.

ಫಿಲಿಡೆಲ್ಫಿಯಾದಲ್ಲಿ ರಮಾಬಾಯಿ ಒಂದು ಮನೆಯ ಮೂರನೇ ಮಹಡಿಯ ಮೇಲೆ ಬಿಡಾರ ಮಾಡಿದ್ದಳು. ಆಗ ಒಂದು ವಿಲಕ್ಷಣ ಘಟನೆ ನಡೆಯಿತು. ಅಲ್ಲಿ ರಮಾಬಾಯಿಗೆ ಯಾವ ತೊಂದರೆಯೂ ಇರಲಿಲ್ಲ. ನಾಲ್ಕು ಜನರಲ್ಲಿ ಬೆರೆತು ಇರುವುದಕ್ಕಾಗಿ ಊಟ-ಉಪಹಾರಗಳ ಸಮಯ ಕೆಳಗೆ ಬರುತ್ತಿದ್ದಳು. ಒಂದು ದಿನ ಜೂನ್ ತಿಂಗಳಲ್ಲಿ ಮಧ್ಯಾಹ್ನ ಬಹಳ ಸೆಕೆ ಬಾಯಾರಿಕೆಗಳಾಗಿ ಒಂದು ಲೋಟಾ ನೀರು ಕುಡಿಯಲಿಕ್ಕೆಂದು ರಮಾಬಾಯಿ ಕೆಳಗಿಳಿದಳು, ಈ ವೇಳೆ ಅವಳು ತನ್ನ ಉಡುಪಿನ ವಿಚಾರದಲ್ಲಿ ಹೆಚ್ಚು ಗಮನಕೊಡಲಿಲ್ಲ. ನೀರು ಕುಡಿದು ಹೋಗುವಷ್ಟರಲ್ಲಿ ಅಲ್ಲಿಗೆ ಒಬ್ಬ ವೃದ್ಧ ಡಾಕ್ಟರ್ ಬಂದು ನೋಡಿದನು. ರಮಾಬಾಯಿಯ ಪಾದತ್ರಾಣಗಳಿಲ್ಲದ ಕಾಲುಗಳನ್ನು ನೋಡಿ ಆ ಡಾಕ್ಟರ್ ಚಕಿತನಾಗಿದ್ದನು. ರಮಾಬಾಯಿಗೂ ಸ್ವಲ್ಪ ಸಂಕೋಚವೇ ಆಯಿತು. ಕೂಡಲೇ ಮಹಡಿಯ ಮೇಲೆ ಹೋಗಿ ಬಾಗಿಲು ಹಾಕಿಕೊಂಡು ಓದುತ್ತಾ ಕುಳಿತಿರುವಾಗ ಒಂದೆರಡು ತಾಸುಗಳಲ್ಲಿಯೇ ಹೊರಗಿನಿಂದ ಶಬ್ದವಾಯಿತು. ಓಹೋ, ಒಳಗೆ ಬನ್ನಿ, ಎಂದು ಹೇಳುವಷ್ಟರಲ್ಲಿ ಡಾಕ್ಟರರ ಮೊಮ್ಮಗ ಒಂದು ಚೀಟಿಯನ್ನು ತಂದು ರಮಾಬಾಯಿಗೆ ಕೊಟ್ಟನು. ಈ ಚೀಟಿಯಲ್ಲಿ ಹೀಗೆ ಬರೆದಿದ್ದಿತು.

"ಪ್ರಿಯ ಮಿತ್ರಳೇ!

ನಿಮ್ಮ ದೇಶದಲ್ಲಿ ಕಾಲುಚೀಲ ಪಾದತ್ರಾಣ ಹಾಕದೇನೇ ಜನರು ತಿರುಗಾಡುವುದು ನನಗೆ ಗೊತ್ತಿದೆ. ಆದರೆ ನಮ್ಮ ದೇಶದಲ್ಲಿ ಹಾಗೆ ಮಾಡುವುದು ಮರ್ಯಾದೆಯ ಕೆಲಸವಲ್ಲ, ನೀವು ಬರಿಕಾಲಿನಿಂದ ತಿರುಗಾಡುವುದನ್ನು ನೋಡಿ ನಮ್ಮವರಿಗೆ ಸಖೇದಾಶ್ಚರ್ಯವಾಗಿದೆ. ಆದುದ

ರಿಂದ ದಯಮಾಡಿ ನೀವು ತಿರುಗಾಡುವಾಗ ಕಾಲುಚೀಲ ಪಾದತ್ರಾಣ ಗಳನ್ನು ಧರಿಸಬೇಕಾಗಿ ವಿನಂತಿ".

ಇತಿ ನಿಮ್ಮ ಗೆಳತಿ,

ಮಿಸೆಸ್ ಬಿ.

ಅಮೇರಿಕಾದಲ್ಲಿ ಮೇನ ಪಟ್ಟಣದಿಂದ 'ಕ್ಯಾಲಿಫೋರ್ನಿಯಾ' ತನಕ ತನ್ನ ಧ್ಯೇಯ ಉದ್ದೇಶಗಳ ಸಲುವಾಗಿ ಮೂವತ್ತು ಸಾವಿರ ಮೈಲುಗಳಷ್ಟು ಪ್ರವಾಸವನ್ನು ಮಾಡಿ ರಮಾಬಾಯಿ ಅಲ್ಲಿಯ ಸಾರ್ವಜನಿಕ ಜೀವನ, ಗೃಹಜೀವನ, ವಿದ್ಯಾಪ್ರಸಾರ, ಧಾರ್ಮಿಕ ವಿಷಯ, ಸ್ತ್ರೀಯರ ಪ್ರಗತಿ, ವ್ಯಾಪಾರ ಉದ್ಯೋಗ, ದಾನಧರ್ಮ, ಇತ್ಯಾದಿಗಳನ್ನು ಸೂಕ್ಷ್ಮವಾಗಿ ಅಭ್ಯಾಸಿಸಿದಳು. ಹೀಗೆ ಪ್ರವಾಸ ಕಾಲದಲ್ಲಿ ಅವಳು ಹೆಚ್ಚು ಕಷ್ಟ ಅನುಭವಿಸಬೇಕಾಗಿ ಬಂತು. ಬೇರೆ ಬೇರೆ ರಾಜ್ಯಗಳ, ಬೇರೆ ಬೇರೆ ಹವಾ ಗುಣ, ಪ್ರವಾಸದ ಬಳಲಿಕೆ, ವಿಶೇಷವಾಗಿ ಆಹಾರದ ಕೊರತೆ, ಈ ಕಷ್ಟ ಗಳನ್ನು ಅನುಭವಿಸಿದಳು. ರಮಾಬಾಯಿಯ ಸತ್ಕಾರಗಳಿಗಾಗಿ ಅನೇಕ ಕಡೆಗಳಲ್ಲಿ ಪಂಚಪಕ್ವಾನ್ನಗಳನ್ನು ಸಿದ್ಧಪಡಿಸುತ್ತಿದ್ದರು. ಆದರೆ ಮಾಂಸ ಮಿಶ್ರಿತವಾದ ಪಕ್ವಾನ್ನಗಳನ್ನು ಅವಳು ಸೇವಿಸುತ್ತಿರಲಿಲ್ಲ. ಬೇಯಿಸಿದ ಆಲೂಗೆಡ್ಡೆ, ಬ್ರೆಡ್ಡು, ಬೆಣ್ಣೆ, ಇದೇ ರಮಾಬಾಯಿಯ ಆಹಾರ ಪದಾರ್ಥ ಗಳಾಗಿದ್ದುವು. ಅವಳು ಹಿಂದೂಧರ್ಮವನ್ನು ಬಿಟ್ಟಿದ್ದಳು. ಆದರೆ ಹಿಂದೂ ಸಂಸ್ಕಾರಗಳನ್ನು ತ್ಯಜಿಸಿರಲಿಲ್ಲ. ನೀರುಳ್ಳಿ, ಬೆಳ್ಳುಳ್ಳಿಗಳನ್ನು ಅವಳು ಜೀವ ಮಾನದಲ್ಲೇ ಸೇವಿಸಿದವಳಲ್ಲ.

ಅಮೇರಿಕಾದ ಜನರಿಗೆ ರಮಾಬಾಯಿಯ ಮೇಲೆ ಗೌರವಾದರ ಗಳಿದ್ದುವು. ಎಂಬುದರ ವಿಷಯವಾಗಿ ಅಮೇರಿಕನ್ ಚರಿತ್ರ ಲೇಖಕಳಾದ 'ಕ್ಲೆಮೆಂಟಿನಾ ಬಟ್ಲರ'ಳು ಈ ರೀತಿ ಬರೆದಿರುವಳು. ಇವಳು ರಮಾಬಾಯಿ ಎಸೋಸಿಯೇಶನಿನ ಕಾರ್ಯದರ್ಶಿಯಾಗಿದ್ದಳು.

"ಬಿಳಿ ಬಟ್ಟೆಯನ್ನುಟ್ಟ ಕೂದಲುಗಳನ್ನು ಕುತ್ತಿಗೆ ತನಕ ಕತ್ತರಿಸಿದ ಗಿಡ್ಡಗಾತ್ರದ ಈ ಮಹಿಳೆಯ ಉಜ್ವಲ ಭಾಷಣಗಳನ್ನು ಬೋಸ್ಟನಿನ ಜನರು ಎಂದೂ ಮರೆಯುವಂತಿಲ್ಲ. ಅವಳ ಆ ಕತ್ತರಿಸಿದ ಕೂದಲುಗಳು ವಿಧವಾ ಧರ್ಮದ ನಿದರ್ಶನವಾಗಿದ್ದುವು. ಎಳೆಯ ವಯಸ್ಸಿನಲ್ಲಿಯೇ ವಿವಾಹ ಬಂಧನದಲ್ಲಿ ಸಿಕ್ಕಿ ವೈಧವ್ಯದ ನರಕಯಾತನೆಗಳನ್ನು ಅನುಭವಿಸುವ

ಭಾರತೀಯ ಬಾಲವಿಧವೆಯರ ಕರುಣಾ ಜನಕ ಕಥೆಗಳನ್ನು ಅವಳು ಹೇಳುತ್ತಿದ್ದಳು".

ಒಮ್ಮೆ ಬಟ್ಲರ್‌ಬಾಯಿ ರಮಾಬಾಯಿಯನ್ನು ತನ್ನ ಮನೆಗೆ ಪ್ರೀತಿ ಪೂರ್ವಕವಾಗಿ ಊಟಕ್ಕೆ ಆಹ್ವಾನಿಸಿದ್ದಳು. ಮಸಾಲೆ ಡಬ್ಬಿ ಹಿಂದುಸ್ಥಾನ ದಿಂದಲೇ ತರಿಸಿ ಪ್ರಯತ್ನಪಟ್ಟು ಪಲ್ಯ ತಯಾರಿಸಿದ್ದಳು. ಈ ಪಲ್ಯವು (Curry) 'ಕರಿ'. ಇದು ರಮಾಬಾಯಿಗೆ ರುಚಿಸದೆ ಇರಲಿಕ್ಕಿಲ್ಲವೆಂದು ಅವಳು ಯೋಚಿಸಿದ್ದಳು. ರಮಾಬಾಯಿಯು ಈ ಪಲ್ಯ ಸ್ವೀಕರಿಸಲಿಲ್ಲ. ಯಥಾರ್ಥವಾಗಿ ನಾನು ಇದನ್ನು ತೆಗೆದುಕೊಳ್ಳುವುದಿಲ್ಲ. ಈ ಪಲ್ಯ ತಯಾರಿಸುವಾಗ ನೀನು ಮೂರು ತಪ್ಪುಗಳನ್ನು ಮಾಡಿರುವೆ. ಒಂದನೇಯದು ಮೊದಲೇ ತಯಾರಿಸಿದ ಮಸಾಲೆಯನ್ನು ಉಪಯೋಗಿಸಿದುದು; ಇದಕ್ಕೆ ಆಗಲೇ ತಯಾರಿಸಿದ ಮಸಾಲೆಯಾಗಬೇಕಿತ್ತು. ಎರಡನೇಯದು ಅದರಲ್ಲಿ ಕೋಳಿಮರಿ ಉಪಯೋಗಿಸಿದುದು. ಮೂರನೆಯದು ನೀರುಳ್ಳಿ ಹಾಕಿದುದು. ನೀರುಳ್ಳಿ ವನಸ್ಪತಿ ತರಕಾರಿಯೆಂದು ಬಟ್ಲರ್‌ಬಾಯಿ ಉಪಯೋಗಿಸಿದ್ದಳು. ಈ ತಪ್ಪುಗಳಿಗಾಗಿ ಇಬ್ಬರೂ ವಿನೋದದಿಂದ ನಕ್ಕು, ಮರುದಿನ ಬಟ್ಲರ್ ಬಾಯಿ ರಮಾಬಾಯಿಯನ್ನೇ ಅಡಿಗೆ ಮಾಡುವಂತೆ ಕೇಳಿಕೊಂಡಳು. ಬಟ್ಲರ್ ಬಾಯಿ ನೋಡುತ್ತಾ ಕುಳಿತಿದ್ದಳು. ರಮಾಬಾಯಿಯ ಕೈಗಳು ನೆಲ್ಲನೆ ಕೆಲಸ ಮಾಡುತ್ತಿದ್ದವು. ಪ್ರಥಮ ಬೆಣ್ಣೆ ಕರಗಿಸಿ ತುಪ್ಪ ಮಾಡಿದಳು. ತುಪ್ಪದಲ್ಲಿ ಮಸಾಲೆ ಪದಾರ್ಥಗಳನ್ನು ಹಾಕಿದಳು. ಆ ಮೇಲೆ ಅದರಲ್ಲಿ ಕರಿಮೆಣಸಿನ ಹುಡಿ ಹಾಕಿ ಪಲ್ಯ ತಯಾರಿಸಿದಳು. ಅಮೇರಿಕದಲ್ಲಿರುವಾಗ ಈ ಒಂದೇ ಊಟವು ಬಹುಶಃ ರಮಾಬಾಯಿಗೆ ಇಷ್ಟದಂತೆ ಆಯಿತು.

ರಮಾಬಾಯಿಯ ಭಾಷಣಗಳಿಂದಾಗಿ ಅಮೇರಿಕದ ಜನರಿಗೆ ಹಿಂದು ಸ್ಥಾನದ ಬಾಲ ವಿಧವೆಯರ ಸ್ಥಿತಿ ತಿಳಿಯಿತು. ಅವರು ತುಂಬಾ ಸಹಾನು ಭೂತಿ ತೋರಿಸಿದರು. ಇದಕ್ಕಾಗಿ "ರಮಾಬಾಯಿ ಎಸೋಸಿಯೇಶನ್" ಎಂಬದೊಂದು ಸಂಸ್ಥೆ ಏರ್ಪಟ್ಟಿತು. ಬಾಲವಿಧವೆಯರಿಗೆ ಪಾಠಶಾಲೆ ಮತ್ತು ವಸತೀ ಗೃಹಗಳ ನಿರ್ಮಾಣಕ್ಕಾಗಿ ದ್ರವ್ಯಸಹಾಯ ಮಾಡಿ ಮುಂದೆ ಹತ್ತು ವರ್ಷಗಳ ತನಕ ಧನ ಸಹಾಯ ಕೊಡುವುದಾಗಿ ಈ ಸಂಸ್ಥೆಯು ನಿರ್ಧರಿಸಿತು.

೧೨. ಉಚ್ಚವರ್ಗದ ಹಿಂದೂ ಮಹಿಳೆ

'ಬೋಸ್ಟನ್' ನಗರದ 'ಚನಿಂಗ್ ಹಾಲ್'ನಲ್ಲಿ 1887ರ ದಶಂಬರ 13ರಂದು ಸಾಯಂಕಾಲ 4 ಘಂಟೆಗೆ ಒಂದು ಸಾರ್ವಜನಿಕ ಸಭೆ ಸೇರಿತು. ಹಿಂದೂ ದೇಶದ ಅನಾಥ ವಿಧವೆಯರನ್ನು ಸುಶಿಕ್ಷಿತರನ್ನಾಗಿ ಮಾಡಿ ಅವರ ಜೀವಮಾನವನ್ನು ಸಾರ್ಥಕಗೊಳಿಸುವಂತೆ ಒಂದು ಸ್ಥಿರ ರೂಪವಾದ ಯೋಜನೆಯನ್ನು ರೂಪಿಸುವುದೇ ಈ ಸಭೆಯ ಉದ್ದೇಶವಾಗಿತ್ತು. ಈ ಮಹಾ ಸಭೆಯಲ್ಲಿ ಬೋಸ್ಟನಿನ ನಾಗರಿಕರು ಕಿಕ್ಕಿರಿದು ಸೇರಿದ್ದರು. ಫಿಲೆಡೆಲ್ಫಿಯಾದ ಮಹಿಳಾ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲಳಾದ, ಡಾ. ರೇಚಲ್ ಬಾಡ್ಲೆ ಮತ್ತು ಅಮೇರಿಕಾದಲ್ಲಿ ಮದ್ಯಪಾನ ನಿಷೇಧ ಕಾನೂನಿನ ನಿರ್ಮಾಪಕಳಾದ ಫ್ರಾನ್ಸಿಸ್ ಬಿಲಾರ್ಡ್ ಇವರು ಮುಖ್ಯವಾಗಿ ಸಭೆಯಲ್ಲಿ ಭಾಗವಹಿಸಿದ್ದರು. ಪಂ. ರಮಾಬಾಯಿ ತನ್ನ ಅಮೋಘವಾದ ಭಾಷಣದಿಂದ ಹಿಂದೂ ದೇಶದ ಅನಾಥ ಬಾಲವಿಧವೆಯರ ಕಥೆಯನ್ನು ನಿರೂಪಿಸಿದಳು. ಇದನ್ನೇ ಸಮರ್ಥಿಸಿ, ಅನೇಕ ಭಾಷಣಗಳಾದುವು. ಇದರಿಂದಾಗಿ ಜನರಲ್ಲಿ ಎಷ್ಟು ಪರಿಣಾಮ ಉಂಟಾಯಿತೆಂದರೆ ಅಲ್ಲಿಯೇ "ರಮಾಬಾಯಿ ಎಸೋಸಿಯೇಶನ್" ಎಂಬ ಹೆಸರಿನ ಸಂಸ್ಥೆಯು ಸ್ಥಿರ ರೂಪ ತಾಳಿತು.

ಎಸೋಸಿಯೇಶನಿನ ಪ್ರವರ್ತಕರು ರಮಾಬಾಯಿಯ ಧ್ಯೇಯ ಉದ್ದೇಶಗಳ ಸಫಲತೆಗಾಗಿ ಇಂಗ್ಲೆಂಡ್ ಮತ್ತು ಹಿಂದೂ ದೇಶದ ಅನೇಕ ದೊಡ್ಡ ಮಹನೀಯರಿಂದ ಅಂಗೀಕೃತ ಕಾರ್ಯದ ಪುಷ್ಟೀಕರಣಕ್ಕಾಗಿ ಪರಿಚಯ ಪತ್ರಗಳನ್ನು ತರಿಸಿದ್ದರು. ರಮಾಬಾಯಿಯ ಕಾರ್ಯಗಳನ್ನು ಸಮರ್ಥಿಸಿ ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾದ ಅಭಿಪ್ರಾಯಗಳನ್ನು ಒಟ್ಟು ಗೂಡಿಸಿದ್ದರು. ರಮಾಬಾಯಿಯ ನಿಯೋಜಿತ ಕಾರ್ಯಕ್ರಮಗಳ ಕುರಿತು ಜನಾಭಿಪ್ರಾಯ ಹೇಗೆ ಅನುಕೂಲವಿತ್ತೆಂದು ಇದರಿಂದ ಗೊತ್ತಾಗಬಹುದು.

ಪ್ರೊ. ಮೇಕ್ಸ್ ಮುಲ್ಲರರ ಅಭಿಪ್ರಾಯವು "ಭಾರತ ದೇಶದ ಉದ್ಧಾರವು ಅಲ್ಲಿಯ ಬಾಲವಿಧವೆಯರ ಉದ್ಧಾರವನ್ನು ಹೊಂದಿಕೊಂಡಿದೆ; ಭವಿಷ್ಯ ಕಾಲದ ಸುಖೀ ಸಂಸಾರಗಳು, ಸುಶಿಕ್ಷಿತ ಹೆಂಗಸರು, ಸ್ವಾವಲಂಬೀ ಮಾತೆಯರು ತಯಾರಿಸುವ ಕೆಲಸವು ಬಾಲವಿಧವೆಯರ ವಸತೀಗೃಹಗಳ ಮೇಲೆ ಮತ್ತು ಪಾಠಶಾಲೆಗಳ ಮೇಲೆ ಹೊಂದಿಕೊಂಡಿದೆ. ರಮಾಬಾಯಿಗೆ ಒಂದು ವೇಳೆ

ಗಗನದಲ್ಲಿ ಹಾರಾಡುವ ಶಕ್ತಿ ಇರುತ್ತಿದ್ದರೆ ಅನಾಥಳಾದ ಒಬ್ಬಳೇ ಬಾಲವಿಧವೆಯನ್ನು ರಕ್ಷಿಸುವ ಸಲುವಾಗಿ ಅವಳು ಗಗನದಲ್ಲಿ ಹಾರಿಕೊಂಡು ಹಿಂದೂ ದೇಶವನ್ನು ತಲುಪುತ್ತಿದ್ದಳು".

ಸರ್ ವಿಲಿಯಮ್ ಬೆಡರ್ ಬರ್ನ್, "ಪಂಡಿತಾ ರಮಾಬಾಯಿಯ 'ನಾರ್ಮಲ್ ಸ್ಕೂಲಿ'ನ ವರ್ತಮಾನ ಕೇಳಿ ನನಗೂ ಸೌಭಾಗ್ಯವತಿಗೂ ತುಂಬಾ ಸಂತೋಷವಾಯಿತು. ಹಿಂದೂ ಸ್ತ್ರೀಯರ ಶಿಕ್ಷಣದ ವಿಚಾರ ನಮಗೂ ತುಂಬಾ ಯೋಚನೆಯುಂಟಾಗಿದೆ. ನಿಮ್ಮ ಯೋಜನೆಯು ನಿಶ್ಚಿತವಾದೊಡನೆ ನಮಗೆ ಇನ್ನೊಮ್ಮೆ ತಿಳಿಸಿರಿ. ನಾವು ಅದಕ್ಕೆ ಸಹಾಯ ಕೊಡಲು ಸಂತೋಷಪಡುತ್ತೇವೆ. ಪಂ. ರಮಾಬಾಯಿ ಅಮೇರಿಕದಲ್ಲಿ ಇಷ್ಟು ಜನಪ್ರಿಯತೆ ಗಳಿಸಿದ್ದಕ್ಕಾಗಿ ಅವಳನ್ನು ಮನಃಪೂರ್ವಕ ಅಭಿನಂದಿಸುತ್ತೇವೆ".

ಡಾ. ರಾಮಕೃಷ್ಣ ಭಂಡಾರ್‌ಕಾರ್ "ಅಮೇರಿಕದ ಭಗಿನಿಯರು ಹಿಂದೂದೇಶದ ಅನಾಥ ಸ್ತ್ರೀಯರ ದುಃಖ ನಿವಾರಣೆಯಲ್ಲಿ ಸಹಾನುಭೂತಿ ತೋರಿಸುವುದನ್ನು ಕಂಡು ನಮಗೆಲ್ಲರಿಗೂ ಸಂತೋಷವಾಗುತ್ತದೆ. ಎಲ್ಲಾ ವಿಧದಿಂದಲೂ ನಿಮಗೆ ಸಹಾಯಕೊಡುವುದಾಗಿ ನಾನು ವಾಗ್ದಾನ ಕೊಡುತ್ತೇನೆ. ಪಂ. ರಮಾಬಾಯಿ ಮತ್ತು ಅವಳೊಂದಿಗೆ ಬರತಕ್ಕ ಶಿಕ್ಷಿಕೆಯರು ಹಿಂದೂದೇಶಕ್ಕೆ ತಲಪಿದೊಡನೆ ಇದಕ್ಕಾಗಿ ನಿಶ್ಚಿತ ಕಾರ್ಯಕ್ರಮ ಕೈಕೊಳ್ಳುವರು ಎಂದು ಆಶಿಸುತ್ತೇನೆ".

ಈ ಸಭೆಯಲ್ಲಿ ಹಿಂದೂದೇಶದ ಅನಾಥ ಅಬಲೆಯರ ಶಿಕ್ಷಣಕ್ಕಾಗಿ "ಪಂಡಿತಾ ರಮಾಬಾಯಿ ಎಸೋಸಿಯೇಶನ್" ಎಂಬ ಸಂಘವು ಸ್ಥಾಪಿತವಾಯಿತು. ಕಟ್ಟಡ ರಚನೆಗಾಗಿ ಇಪ್ಪತ್ತೈದು ಸಾವಿರ ಡಾಲರುಗಳನ್ನು ಕೊಡುವುದಾಗಿಯೂ, ವಿದ್ಯಾರ್ಥಿನಿಯರ ವೆಚ್ಚಕ್ಕಾಗಿ ಪ್ರತೀ ವರ್ಷ ಐದು ಸಾವಿರ ಡಾಲರುಗಳನ್ನು ಕೊಡುವುದಾಗಿಯೂ ನಿರ್ಣಯವಾಯಿತು. ರಮಾಬಾಯಿ ಅಮೇರಿಕದಿಂದ ಹಿಂತಿರುಗುವಾಗ ಅಮೇರಿಕೆಯ ಮೂರು ಜನ ಶಿಕ್ಷಿಕೆಯರನ್ನು ತರುವುದಾಗಿ ಸಹ ಗೊತ್ತುಪಡಿಸಲಾಯಿತು. ಒಬ್ಬಳು ಕಿಂಡರ್-ಗಾರ್ಟನ್—ಬಾಲೋದ್ಯಾನ ಶಿಕ್ಷಣಕ್ಕಾಗಿಯೂ, ಸಾಮಾನ್ಯ ವಿಜ್ಞಾನ, ವೃತ್ತಿ ಶಿಕ್ಷಣಕ್ಕಾಗಿ ಇಬ್ಬರು. ಈ ಸಂಘದ ಘಟನಾವಳಿಯನ್ನು ತಯಾರು ಮಾಡಲಾಯಿತು; ಹಿಂದೂದೇಶದ ಮೂರು ಜನ ಮಹನೀಯರ ಹೆಸರುಗಳನ್ನು ಸಲಹೆಗಾರ ಮಂಡಲಿಯಲ್ಲಿ ಸೂಚಿಸಲಾಯಿತು. ರಾಮಕೃಷ್ಣ ಗೋಪಾಳ

ಭಂಡಾರ್‌ಕಾರ್, ರಾ. ಬ. ಮಹಾದೇವ ಗೋವಿಂದ ರಾನಡೆ ಮತ್ತು ರಾ. ಬ. ದೇಶಮುಖ ಇವರೇ ಸಲಹಾ ಮಂಡಲಿಯ ಸದಸ್ಯರು. ನಿಯೋಜಿತ ಶಾಲೆಯಲ್ಲಿ ಅವರವರ ಧರ್ಮಾಚರಣೆಗೆ ಪೂರ್ಣ ಸ್ವಾತಂತ್ರ್ಯವಿರಬೇಕೆಂದು ನಿರ್ಣಯಿಸಿದರು.

ರಮಾಬಾಯಿಯು ಪ್ರಾರಂಭಿಸಿದ ಈ ಮಹಾ ಕಾರ್ಯಕ್ಕೆ ಅಮೇರಿಕಾ ಖಂಡದ ಮಹನೀಯರನೇಕರಿಂದ ಬೆಂಬಲ ದೊರೆಯಿತು. ಸಂಘಕ್ಕೆ ಸಹಾಯ ಮಾಡಲು ಸ್ವಯಂಸ್ಫೂರ್ತಿಯಿಂದ ಜನರು ಮುಂದೆ ಬರತೊಡಗಿದರು. ಇವರಲ್ಲಿ ವಿವಿಧ ಧರ್ಮ ಮತಗಳ ಜನರೂ ಇದ್ದರು. ಆದ್ದರಿಂದಲೇ ಈ ಸಂಘಕ್ಕೆ ಕ್ರೈಸ್ತಧರ್ಮ ಪ್ರಚಾರದೃಷ್ಟಿಯಿರಲಿಲ್ಲವೆಂತ ಸ್ಪಷ್ಟವಾಗುತ್ತದೆ. ಇದಾದ ಮೇಲೆ ಕೆಲವು ಸಮಯದಲ್ಲಿ ಎಂದರೆ 1886 ಜುಲಾಯಿ 26ಕ್ಕೆ ಪಶ್ಚಿಮ ಅಮೇರಿಕದಲ್ಲಿಯೂ "ರಮಾಬಾಯಿ ಎಸೋಸಿಯೇಶನ್ ಆಫ್ ಪೆಸಿಫಿಕ್ ಕೋಸ್ಟ್" ಎಂಬ ಹೆಸರಾಂತ ಸಂಘ ಸ್ಥಾಪನೆಯಾಯಿತು. ಸಂಘಕ್ಕೆ ಪೂರಕವಾಗಿ ಅಮೇರಿಕದ ಬೇರೆ ಬೇರೆ ಪಟ್ಟಣಗಳಲ್ಲಿ ಶಾಖೆಗಳನ್ನು ತೆರೆದರು. ಈ ಶಾಖೆಗಳಿಗೆ ರಮಾಬಾಯಿ ಸರ್ಕಲ್ಸ್ (Rama Bai Circles) ಎಂದು ಹೆಸರಿಟ್ಟರು. ಮೊದಲಿನ ವರ್ಷದಲ್ಲಿ ಇಂತಹ ಹದಿನೆಂಟು ಸರ್ಕಲು ಗಳು ಸ್ಥಾಪಿತವಾದುವು. ಮುಂದಿನ ಐದು ವರ್ಷಗಳಲ್ಲಿ ಇದರ ಸಂಖ್ಯೆಯು ಎಪ್ಪತ್ತೈದಕ್ಕೆ ಏರಿತು.

ರಮಾಬಾಯಿ ಎಸೋಸಿಯೇಶನಿನ ಘಟನೆ:—

1. ಪಶ್ಚಿಮ ಹಿಂದೂದೇಶದ ಪೂಣಾ ಪಟ್ಟಣದ ಸಮೀಪದಲ್ಲಿ ಅನಾಥ ವಿಧವೆಯರಿಗಾಗಿ ಒಂದು ಪಾಠಶಾಲೆ ಪಂಡಿತಾ ರಮಾಬಾಯಿಯಿಂದ ಸ್ಥಾಪಿತವಾಗಿ ಅದನ್ನು ನಡೆಸುವ ಉದ್ದೇಶಕ್ಕಾಗಿ "ಪಂ. ರಮಾಬಾಯಿ ಎಸೋಸಿಯೇಶನ್" ಎಂಬ ಸಂಸ್ಥೆ ಸ್ಥಾಪಿಸಲ್ಪಟ್ಟಿತು.

2. ಈ ಸಂಘದ ಶಿಕ್ಷಣ ಪದ್ಧತಿಯು ಸಂಪೂರ್ಣ ಧರ್ಮಭೇದಾತೀತ ವಿದ್ದು, ಪಂಡಿತಾ ರಮಾಬಾಯಿಯ ನಿರ್ದೇಶದಂತೆ ನಡೆಯಬೇಕು. ಸಂಘದ ಆಡಳಿತ ಮಂಡಳಿಯವರಿಗೆ ರಮಾಬಾಯಿ ಜವಾಬುದಾರಳಾಗಿರಬೇಕು.

3. ಸಂಘದ ಸದಸ್ಯರಾಗುವವರು ಕಡಿಮೆ ಎಂದರೆ ಹತ್ತು ವರ್ಷಗಳ ತನಕ ವರ್ಷ ಒಂದರ ನೂರು ಡಾಲರಿನಂತೆ ಕೊಡತಕ್ಕದ್ದು. ವರ್ಷ ಒಂದರ

ನೂರು ಡಾಲರು ಕೊಡತಕ್ಕ ಸದಸ್ಯರು ಶಿಷ್ಯವೃತ್ತಿದಾತರೆಂದು ಗಣನೆಯಾಗಬೇಕು.

4. ಈ ಸಂಘದ ಅಧಿಕಾರೀ ವರ್ಗ ಈ ಕೆಳಗಿನಂತೆ ಇರಬೇಕು. (1) ಅಧ್ಯಕ್ಷ ಒಬ್ಬರು ಅಥವಾ ಹೆಚ್ಚು ಜನರು. (2) ಉಪಾಧ್ಯಕ್ಷ, ಕೋಶಾಧಿಕಾರಿ ಒಬ್ಬರು ಅಥವಾ ಹೆಚ್ಚು ಜನರು. (3) ಕಾರ್ಯದರ್ಶಿ, ಆಡಳಿತ ಮಂಡಲಿ, ಸಲಹೆಗಾರರ ಮಂಡಲಿ ಮತ್ತು ಕಾರ್ಯಕಾರಿ ಮಂಡಲಿ.

5. ಹಿಂದೂದೇಶದ ಸಲಹಾ ಮಂಡಲದ ಆದೇಶದಂತೆ ಬೋಸ್ಟನಿನ ಆಡಳಿತ ಮಂಡಳಿಯವರು ಎಲ್ಲಾ ತರದ ಆರ್ಥಿಕ ಲೇವಾದೇವಿಗಳ ಜವಾಬ್ದಾರಿಗಳನ್ನು ವಹಿಸಿಕೊಳ್ಳುವುದು. ಹಾಗೆಯೇ ಅಧಿಕಾರೀ ವರ್ಗದ ಖಾಲೀ ಸ್ಥಾನಗಳನ್ನು ತುಂಬುವುದು ಮತ್ತು ಹೊಸ ಸದಸ್ಯರನ್ನು ನೇಮಿಸುವುದು.

6. ಕಾರ್ಯಕಾರೀ ಮಂಡಲಿಯು ಎಲ್ಲಾ ಕಾರ್ಯಕ್ರಮಗಳ ಮೇಲ್ವಿಚಾರ ನೋಡಿ ಕ್ಲಪ್ತ ವೇಳೆಗೆ ತನ್ನ ವರದಿಯನ್ನು ಆಡಳಿತ ಮಂಡಳಿಯ ವಶಕ್ಕೊಪ್ಪಿಸಬೇಕು. ವಾರ್ಷಿಕ ವರದಿಯನ್ನು ತಯಾರಿಸುವುದು ಮತ್ತು ಹೊಸ ಸದಸ್ಯರನ್ನು ನೇಮಿಸುವ, ಖಾಲೀ ಜಾಗಗಳನ್ನು ಭರ್ತಿಮಾಡುವ ಜವಾಬ್ದಾರಿಯು ಕಾರ್ಯಕಾರೀ ಮಂಡಲಿಯವರದ್ದಾಗಿರಬೇಕು.

7. ಎಸೋಸಿಯೇಶನಿನ ವಾರ್ಷಿಕ ಸಭೆಯನ್ನು ಅಧ್ಯಕ್ಷರು ನೇಮಿಸುವ ದಿನ ಮತ್ತು ಸಮಯದಲ್ಲಿ ಕರೆಯಬೇಕು.

8. ವರ್ಷಕ್ಕೆರಡು ಸಲ ಆಡಳಿತ ಮಂಡಲಿಯ ಸಭೆಗಳು, ಕಾರ್ಯಕಾರೀ ಮಂಡಲಿಯ ಸಭೆಗಳು ಪ್ರತೀ ತಿಂಗಳಿಗೊಮ್ಮೆ ಸೇರಬೇಕು. ಅವಶ್ಯಕಂಡಲ್ಲಿ ಮಹಾಸಭೆಯನ್ನು ಕರೆಯಬೇಕು.

9. ಬೇರೆ ಕಡೆಗಳಲ್ಲಿ ಸ್ಥಾಪಿತವಾದ ರಮಾಬಾಯಿ ಸರ್ಕಲ್ಸ್‌ಗಳಿಗೆ ಎಸೋಸಿಯೇಶನಿನ ಶಾಖೆಗಳೆಂದು ಕೆಲಸ ಮಾಡುವ ಅಧಿಕಾರವಿದೆ. ಈ ಶಾಖೆಗಳ ಸದಸ್ಯರು ಹತ್ತು ವರ್ಷಗಳ ತನಕ ವರ್ಷಕ್ಕೊಂದು ಡಾಲರಿನಂತೆ ಕೊಟ್ಟರೆ ಅಂಥವರಿಗೆ ವಾರ್ಷಿಕ ಮಹಾಸಭೆಯಲ್ಲಿ ಮತಾಧಿಕಾರವಿರತಕ್ಕದ್ದು.

10. ಈ ಘಟನೆಯಲ್ಲಿ ಹೆಚ್ಚು ಕಡಿಮೆ ಮಾಡುವ ಅಧಿಕಾರ ವಾರ್ಷಿಕ ಮಹಾಸಭೆಗೆ ಅಥವಾ ಇದಕ್ಕಾಗಿಯೇ ಕರೆದ ವಿಶೇಷ ಮಹಾಸಭೆಗೆ ಇರತಕ್ಕದ್ದು. ಆದರೆ ಇಂತಹ ತಿದ್ದುಪಡಿ ಮಾಡುವ ಸಮಯ ಮತಾಧಿಕಾರವಿದ್ದ ಹಾಜರೀ ಸದಸ್ಯರ ಪೈಕಿ ⅔ರಷ್ಟು ಬಹುಮತವಿರತಕ್ಕದ್ದು.

ರಮಾಬಾಯಿ ಎಸೋಸಿಯೇಶನಿನ ಕಾರ್ಯಕಲಾಪ ಪ್ರಾರಂಭವಾದೊಡನೆಯೇ (High Caste Hindu Woman) "ಉಚ್ಚವರ್ಗದ ಹಿಂದೂ ಮಹಿಳೆ" ಎಂಬ ಇಂಗ್ಲಿಷು ಪುಸ್ತಕವನ್ನು ಪಂ. ರಮಾಬಾಯಿಯು ಬರೆದು ಪ್ರಕಟಿಸಿದಳು. ಭಾರತದ ವಿಧವೆಯರ ಶೋಚನೀಯ ಸ್ಥಿತಿಗಳನ್ನು ವರ್ಣಿಸಿ ಅವರ ಸುಧಾರಣೆಗಾಗಿ ಧನ ಸಹಾಯವನ್ನು ಇದರಲ್ಲಿ ಕೋರಲಾಗಿತ್ತು. ಒಟ್ಟು ಏಳು ಪ್ರಕರಣಗಳಿದ್ದ ಈ ಪುಸ್ತಕಕ್ಕೆ ಫಿಲೆಡೆಲ್ಫಿಯಾದ ಮಹಿಳಾ ಮೆಡಿಕಲ್ ಕಾಲೇಜಿನ (Dean) ಡಾ. ಆರ್. ಎಲ್. ಬಾಡ್ಲೆಯು ಇಪ್ಪತ್ತೆರಡು ಪುಟಗಳ ಪ್ರಸ್ತಾವನೆ ಬರೆದಿದ್ದಳು. ಅದರಲ್ಲಿ ಡಾ. ಆನಂದಿಬಾಯಿ ಜೋಶಿ ಮತ್ತು ರಮಾಬಾಯಿಯ ಸಂಕ್ಷೇಪ ಜೀವನ ಚರಿತ್ರೆಯನ್ನು ಕೊಟ್ಟು ರಮಾಬಾಯಿಯ ಕೆಲಸಗಳಿಗೆ ಸಹಾಯ ನೀಡಬೇಕಾಗಿ ಅಮೇರಿಕನ್ ಜನತೆಗೆ ಆಹ್ವಾನಿಸಲಾಗಿತ್ತು. ಈ ಪುಸ್ತಕವು ಅಮೇರಿಕಕ್ಕೆ ಹೋದ ಪ್ರಥಮ ಹಿಂದೂ ಮಹಿಳೆ ಹಾಗೂ ಡಾಕ್ಟರಳಾದ ಆನಂದಿಬಾಯಿ ಜೋಶಿ (ಆಗ ಮೃತಪಟ್ಟಿದ್ದಳು) ಮತ್ತು ಮಾತೆಯಾದ ಲಕ್ಷ್ಮೀಬಾಯಿಯ ಸವಿ ನೆನಪಿಗಾಗಿ ಸಮರ್ಪಿಸಲ್ಪಟ್ಟಿದ್ದಿತು. ಈ ಪುಸ್ತಕದಿಂದಲೇ ಅಮೇರಿಕದ ಜನತೆಯಿಂದ ಎಸೋಸಿಯೇಶನಿಗೆ ಸಹಾಯ ದೊರೆಯಿತು. ಈ ಪುಸ್ತಕದ ಹತ್ತು ಸಾವಿರ ಪ್ರತಿಗಳು ಅಮೇರಿಕದಲ್ಲಿ ಖರ್ಚಾದವು. ಈ ಪುಸ್ತಕದ ವಿಕ್ರಯದಿಂದ ಇಪ್ಪತ್ತೈದು ಸಾವಿರ ರೂಪಾಯಿಗಳು ಖರ್ಚು ಕಳೆದು ಸಂಗ್ರಹವಾದುವು. ಈ ಪುಸ್ತಕದ ಲಾಭದಿಂದ ಹಿಂದೂದೇಶದಲ್ಲಿ ಬೋಧಿಸಬೇಕಾದ ಕಿಂಡರ್‌ಗಾರ್ಟನ್ ಕ್ರಮಿಕ ಪುಸ್ತಕಗಳನ್ನು ಮರಾಠಿ ಭಾಷೆಯಲ್ಲಿ ಬರೆದು ಪುಸ್ತಕಗಳಲ್ಲಿ ಮುದ್ರಿಸಬೇಕಾದ ಆರ್ನೂರು 'ಇಲೆಕ್ಟ್ರೊ ಟ್ಯಾಪ್' ಚಿತ್ರಗಳ ಪ್ಲೇಟುಗಳನ್ನು ರಮಾಬಾಯಿ ಖರೀದಿಸಿದಳು. ರಮಾಬಾಯಿಯ ಜೀವನ ಚರಿತ್ರೆಯೇ ಆಶ್ಚರ್ಯಗಳಿಂದ ಕೂಡಿದುದು. ಇಪ್ಪತ್ತ-ಐದು ವರ್ಷದ ಈ ತರುಣ ಹಿಂದೂ ಸ್ತ್ರೀಯು ಇಂಗ್ಲಿಷ್ ಭಾಷೆಯ ಸರಿಯಾದ ಜ್ಞಾನವಿಲ್ಲದೆ ಎರಡು ವರ್ಷದ ಕೂಸನ್ನು ಕಂಕುಳಲ್ಲಿ ಹಿಡಕೊಂಡು ಇಂಗ್ಲೆಂಡಿಗೆ ಹೊರಡುವುದು. ಬರೆ ನಾಲ್ಕು ವರ್ಷಗಳಲ್ಲಿ ಅಲ್ಲಿ ಇಂಗ್ಲಿಷು ಭಾಷೆಯಲ್ಲಿ ವ್ಯಾಖ್ಯಾನಗಳನ್ನು ಕೊಟ್ಟು ಶ್ರೋತೃಸಮುದಾಯವನ್ನು ಬೆರಗುಗೊಳಿಸುವುದು. ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವ ಸಂಪಾದಿಸಿ ಪುಸ್ತಕ ಬರೆದು ಇಡೀ ಅಮೇರಿಕಾವನ್ನೇ ಅಲ್ಲೋಲಕಲ್ಲೋಲ ಮಾಡುವುದು. ಇವೆಲ್ಲವೂ ಅಲೌಕಿಕವೇ ಸೈ.

ತನ್ನ ದೇಶದ ಮಹಿಳೆಯರ ಉದ್ಧಾರದ ಅಂಗೀಕೃತ ಕಾರ್ಯಕ್ಕೆ ಹೀಗೆ ಪ್ರೋತ್ಸಾಹ, ದ್ರವ್ಯಸಹಾಯವು ದೊರೆತ ಕಾರಣ ಆರು ವರ್ಷಗಳ ಪರದೇಶ ಯಾತ್ರೆಯನ್ನು ಮುಗಿಸಿ ರಮಾಬಾಯಿ ಹಿಂದೂದೇಶದ ಕಡೆ ಹೊರಡುವ ಯೋಚನೆ ಮಾಡಿದಳು. ಹೀಗೆ ಹೊರಡುವ ವೇಳೆ ಓರ್ವ ಅಮೇರಿಕನ್ ಮಹಿಳೆಯು ರಮಾಬಾಯಿಯನ್ನು ಕಂಡು ಈ ರೀತಿ ಪ್ರಶ್ನಿಸಿದಳು. "ನೀವು ಇಷ್ಟು ದ್ರವ್ಯಸಂಗ್ರಹ ಮಾಡಿದ್ದು ಅನಾಥ ವಿಧವೆಯರ ಗೋಸ್ಕರ ಮತ್ತು ಬಡ ಸ್ತ್ರೀಯರಗೋಸ್ಕರವಾಗಿದೆ. ಆದರೆ ನೀವು ಮನೋರಮೆಯ ಬಗ್ಗೆ ಏನು ಯೋಚನೆ ಮಾಡಿದ್ದೀರಿ"? ಇದಕ್ಕೆ ರಮಾಬಾಯಿ "ನಾನು ಆ ವಿಚಾರ ಏನೂ ಆಲೋಚಿಸಲಿಲ್ಲ"ವೆಂದು ಉತ್ತರಿಸಿದಳು. "ಹಾಗಾದರೆ ದಯಮಾಡಿ ಒಪ್ಪಿಗೆ ನೀಡಿರಿ. ಅವಳ ಶಿಕ್ಷಣದ ಪೂರಾ ಖರ್ಚನ್ನು ನಾನು ಮಾಡುತ್ತೇನೆ" ಎಂದು ಆ ಮಹಿಳೆಯು ವಿನಂತಿಸಿದಳು. ಹೀಗೆ ಹದಿನೆಂಟು ವರ್ಷಗಳ ವರೆಗಿನ ಮನೋರಮೆಯ ಶಿಕ್ಷಣದ ಖರ್ಚನ್ನು ಅವಳು ನೋಡಿದಳು.

1883ನೇ ಇಸವಿಯ ಎಪ್ರೀಲ್ 20ನೇ ತಾರೀಕಿಗೆ ಇಂಗ್ಲೆಂಡಿಗೆ ಪ್ರಯಾಣ ಬೆಳೆಸುವರೆ ಮುಂಬಯಿ ಬಂದರದಿಂದ ಹೊರಟ ರಮಾಬಾಯಿ ಅಮೇರಿಕದ ಇಬ್ಬರ ಶಿಕ್ಷಿಕೆಯರೊಡನೆ 1889 ನೇ ಫೆಬ್ರುವರಿಯಲ್ಲಿ ಕಲ್ಕತ್ತಾ ಬಂದರವನ್ನು ಸೇರಿದಳು.

೧೩. ಶಾರದಾಸದನ

ಮನೋರಮೆಯು ರಮಾಬಾಯಿ ಬರುವ ಮೊದಲೇ ಹಿಂದೂದೇಶಕ್ಕೆ ಬಂದು ಸೇರಿದ್ದಳು. ಪೂಣಾದ 'ವಾಂಟೇಜ್' ಮಿಶನಿನವರು ಅವಳ ಸಂರಕ್ಷಣೆ ನಡೆಸುತ್ತಿದ್ದರು. ರಮಾಬಾಯಿ ಮುಂಬಯಿಗೆ ಬಂದು ತಲಪುವ ವೇಳೆಗೆ ಅವಳನ್ನೂ ಸ್ವಾಗತಿಸಲು ಮನೋರಮೆಯನ್ನು ಮುಂಬಯಿಗೆ ಕರಕೊಂಡು ಹೋಗಿದ್ದರು. ಮುಂಬಯಿಯ ಚೌಪಾಟೀ ಎಂಬಲ್ಲಿ ವಿಲ್ಸನ್ ಕಾಲೇಜಿನ ಸಮೀಪ ಬಾಲವಿಧವೆಯರ ವಸತೀಗೃಹ ಮತ್ತು ಪಾಠಶಾಲೆಯನ್ನು ಒಂದು ಬಾಡಿಗೆ ಕಟ್ಟಡದಲ್ಲಿ 1889ರ ಮಾರ್ಚ 11 ರಂದು ರಮಾಬಾಯಿಯು ಪ್ರಾರಂಭಿಸಿದಳು. ಪಾಠಶಾಲೆಯ ಉದ್ಘಾಟನಾ ಸಮಯದಲ್ಲಿ ಸಾರ್ವಜನಿಕ ಸಭೆಸೇರಿತ್ತು. ಕಟ್ಟಡದ ಮೇಲುಗಡೆ "ಶಾರದಾಸದನ" ವೆಂಬ ಬೋರ್ಡು

ತೂಗಾಡುತ್ತಿತ್ತು. ಬಂದ ಅತಿಥಿಗಳನ್ನು ಸಭಾಸ್ಥಾನದಲ್ಲಿ ಕುಳ್ಳಿರಿಸಲಾಗುತ್ತಿತ್ತು. ಶಾರದಾಸದನದ ಸಂಕ್ಷೇಪವಾದ ಮಾಹಿತಿಯ ಕರಪತ್ರಗಳನ್ನು ಹಂಚಲಾಗುತ್ತಿತ್ತು. ಸಭಿಕರೆಲ್ಲರೂ ಮುಂದಿನ ಕಾರ್ಯಕ್ರಮವನ್ನು ನಿರೀಕ್ಷಿಸುತ್ತಿದ್ದರು.

ಕಾಶೀಬಾಯಿ ಕಾನೀಟಕಾರ್‌ರವರು ಸಭಾಧ್ಯಕ್ಷತೆವಹಿಸಿದಳು. ಅವಳು ಓರ್ವ ಉಚ್ಚವರ್ಗದ ವಿದುಷಿಯಾಗಿದ್ದಳು. ಸಾರ್ವಜನಿಕ ಸಭೆ ಸ್ತ್ರೀಯರ ಅಧ್ಯಕ್ಷತೆಯಲ್ಲಿ ಜರಗುವುದು ಬಹುಶಃ ಇದೇ ಮೊದಲು. ಪ್ರಾರಂಭದಲ್ಲಿ ಪಂ. ರಮಾಬಾಯಿಯು ಸಮಯೋಚಿತವಾದ ಭಾಷಣಮಾಡಿದಳು. "ಮಹನೀಯರೇ, ಸಾರ್ವಜನಿಕರು ಮತ್ತು ಪತ್ರಿಕಾಕರ್ತರು ನಮ್ಮ ಈ ಕೆಲಸದ ವಿಷಯ ಏನೇ ಅಭಿಪ್ರಾಯಕೊಡಲಿ, ಆದರೆ ಒಂದು ಸತ್ಯಸಂಗತಿಯನ್ನು ಹೇಳಬಯಸುತ್ತೇನೆ. ನಮ್ಮ ದೇಶದ ಸ್ತ್ರೀಯರ ಸ್ಥಿತಿಯು ಕರುಣಾಜನಕವಾಗಿ ಶೋಚನೀಯವಾಗಿದೆ ಎಂಬುದನ್ನು ನೀವೆಲ್ಲರೂ ತಿಳಿದಿರಬಹುದು. ಬೇರೆಯವರಿಗೆ ಈ ಸಂಗತಿ ತಿಳಿಯಲಿಕ್ಕಿಲ್ಲ. ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ನಮ್ಮ ದೇಶದ ಒಬ್ಬನಾದರೂ ಸದಸ್ಯನಿಲ್ಲದಕಾರಣ ಬಡ ಹಿಂದೂದೇಶದ ನಿಜಸ್ಥಿತಿ ಪಾಶ್ಚಿಮಾತ್ಯರಿಗೆ ಹೇಗೆ ಗೊತ್ತಾಗಬೇಕು? ಮಹನೀಯರೇ, ನಮ್ಮ ದೇಶದ ರಾಷ್ಟ್ರೀಯ ಮಹಾಸಭೆಯಲ್ಲಿಯೂ ಅದೇ ಸ್ಥಿತಿ. ತಮ್ಮ ಅಡಚಣೆಗಳನ್ನು ಹೇಳಿಕೊಳ್ಳಲು ಮಹಿಳಾ ಪ್ರತಿನಿಧಿ ಒಬ್ಬರೂ ಇಲ್ಲ. ಬ್ರಿಟಿಷ್ ಪಾರ್ಲಿಮೆಂಟಿಗೆ ಹಿಂದೂದೇಶದ ಸ್ತ್ರೀಯರ ಅರಿವು ಎಷ್ಟಿದೆ? ಅದಕ್ಕಿಂತ ನಿಮಗೆಲ್ಲರಿಗೂ ಈ ವಿಷಯ ಹೆಚ್ಚು ತಿಳುವಳಿಕೆ ಇದ್ದೀತು".

ಶಾರದಾಸದನದಲ್ಲಿ ಪ್ರಥಮವಾಗಿ ಬಂದ ವಿದ್ಯಾರ್ಥಿನಿಯ ಹೆಸರು "ಶಾರದಾ" ಎಂದಿತ್ತು. ಆದುದರಿಂದಲೇ ಪಾಠಶಾಲೆಗೆ ಶಾರದಾಸದನವೆಂಬ ನಾಮಕರಣವಾಯಿತು. ಶಾರದಾಸದನದ ಪ್ರಾರಂಭೋತ್ಸವ ಮುಗಿದೊಡನೆ ಪಂ. ರಮಾಬಾಯಿ ಶಾರದಾಸದನದ ಕಾರ್ಯಕಲಾಪಗಳಿಗೆ ಸಲಹಾ ಸಮಿತಿಯೊಂದನ್ನು ಆರಿಸಿದಳು. ಇದರಲ್ಲಿ "ಕೃಷ್ಣಾಜೀ ಲಕ್ಷ್ಮಣನೂಲಕರ, ನ್ಯಾಯಮೂರ್ತಿ ಮಹಾದೇವ ಗೋವಿಂದ ರಾನಡೆ, ಡಾ. ರಾಮಕೃಷ್ಣ ಗೋಪಾಳ ಭಂಡಾರಕರ, ನ್ಯಾ. ಕಾಶೀನಾಥ ತ್ರ್ಯಂಬಕ ತೆಲಂಗ ಮುಂತಾದವರಿದ್ದರು. ಪ್ರಥಮವಾಗಿ ಸದನದಲ್ಲಿ ಬಂದ ಶಾರದೆಯು ವಿಧವೆಯಲ್ಲದಿದ್ದರೂ

ಓರ್ವ ಪುನರ್ವಿವಾಹಿತ ಬಾಲವಿಧವೆಯ ಮಗಳಾಗಿದ್ದಳು. ಪ್ರಥಮವಾಗಿ ಶಾರದಾಸದನಕ್ಕೆ ಸೇರಿದ ಬಾಲವಿಧವೆಯೆಂದರೆ ಆನಂದಿಬಾಯಿ. ಇವಳಿಗೆ ಕ್ರಮೇಣ ಕೂದಲುಗಳನ್ನು ಬೆಳೆಸಲು ರಮಾಬಾಯಿ ಪ್ರೋತ್ಸಾಹಿಸಿದಳು. ಇವಳು ಸರಿಯಾದ ವಿದ್ಯಾಬುದ್ಧಿ ಕಲಿತನಂತರ, ಪ್ರೊ. ಧೋಂಡೊ ಕೇಶವ ಕರ್ವೆಯವರನ್ನು ಮದುವೆಯಾದಳು. ಪ್ರೊ. ಕರ್ವೆಯವರು ಹಿಂದೆ ಮದುವೆ ಯಾಗಿ ವಿಧುರರಾಗಿರಲಿಲ್ಲ. ಅವರ ಈ ವಿವಾಹವು ಪ್ರಥಮದ್ದಾಗಿದ್ದಿತು. ಕರ್ವೆಯವರ ತಂದೆ ತನ್ನ ಮಗನು ಓರ್ವ ವಿಧವೆಯನ್ನು ಮದುವೆಯಾಗುವ ನೆಂಬ ವರ್ತಮಾನ ತಿಳಿದು ತನ್ನ ಮಗನನ್ನು ಅನೇಕ ವಿಧವಾಗಿ ಸಮಜಾಯಿಸಿ ದರು. ಆದರೂ ಕರ್ವೆಯವರು ತನ್ನ ನಿರ್ಧಾರ ಬಿಡಲಿಲ್ಲ. ಕಡೆಗೆ ತನ್ನ ಮಗನ ಜೀವಂತಶ್ರಾದ್ಧ ಮಾಡಿಯೇ ಅವರು ತನ್ನ ಊರಾದ ಗುಹಾಗಾರಕ್ಕೆ ತೆರಳಿದರು. ರಮಾಬಾಯಿಯ ಸ್ತ್ರೀ ಸುಧಾರಣಾಕಾರ್ಯದಿಂದ ಸ್ಫೂರ್ತಿ ಪಡೆದು ಬೇರೊಂದು ಸಂಸ್ಥೆಯನ್ನು ಹಿಂಗಣೆಯಲ್ಲಿ (ಪುಣೆ ಜಿಲ್ಲಾ) ಕರ್ವೆ ಯವರು ಸ್ಥಾಪಿಸಿದರು. (ಈ ಸಂಸ್ಥೆ ಈಗಲೂ ಇದೆ.)

ಶಾರದಾಸದನದಲ್ಲಿ ಬಂದ ಬಾಲವಿಧವೆಯರಿಗೆ ಸುಖಸಮಾಧಾನಗಳು ಸಿಕ್ಕಿ, ಅವರ ಜೀವನವು ಸಂತೋಷದಾಯಕವಾಗಬೇಕೆಂಬ ಉದ್ದೇಶದಿಂದ ಪಂ. ರಮಾಬಾಯಿ ಅವರನ್ನು ಉತ್ತಮ ರೀತಿಯಿಂದ ಪೋಷಿಸುತ್ತಿದ್ದಳು. ಇಂತಹ ಬಾಲವಿಧವೆಯರು ಮೊದಲು ಅನುಭವಿಸಿದ ಕಷ್ಟತಾಪತ್ರಯಗಳನ್ನು ವರ್ಣಿಸುವುದು ಅಸದಳ. ಅವರು ಈ ಹಿಂದೆ ಸಹಾನುಭೂತಿಯ ಒಂದು ಮಾತನ್ನೂ ಕೇಳಿದವರಲ್ಲ, ಬದಲಾಗಿ "ಗಂಡನನ್ನು ತಿಂದ ಪಾಪೀ, ನಿನ್ನ ಮುಖಾವಲೋಕನ ಮಾಡಿದರೆ ಅಪಶಕುನ!" ಎಂಬಿತ್ಯಾದಿ ತಿರಸ್ಕಾರದ ಮಾತುಗಳೇ ವಿನಃ ಅವರು ಬೇರೆ ಮಾತು ಕೇಳಿದವರಲ್ಲ, ನಿಜವಾಗಿಯೂ ಪಂ. ರಮಾಬಾಯಿಯ ಮೇಲೆ ಅವರಿಗೆ ತಾಯಿಗಿಂತಲೂ ಹೆಚ್ಚಿನ ಪ್ರೇಮಾದರಗಳು ಉಂಟಾದುವು.

ಶಾರದಾಸದನದ ಸಲಹಾ ಮಂಡಲಿಗೆ ಇದು ಸರಿ ತೋರಲಿಲ್ಲ. ನಮ್ಮಲ್ಲಿಯ ಬಾಲವಿಧವೆಯರು ಹೀಗೆ ಉನ್ನತ ಮಟ್ಟದ ಜೀವನಸಾಗಿಸು ವುದು ಸರಿಯಲ್ಲವೆಂದು ಅವರ ಅಭಿಪ್ರಾಯವಿದ್ದಿತು. ಇದಕ್ಕೆ ಪ್ರತಿಯಾಗಿ ರಮಾಬಾಯಿಯು ನಾನು ವಿದ್ಯಾರ್ಥಿನಿಯರನ್ನು ಕಷ್ಟಗಳಿಂದ ಮೇಲೆತ್ತು ವುದಕ್ಕಾಗಿ ಸುಖಸಮಾಧಾನಗಳಲ್ಲಿ ಅವರು ಜೀವಿಸುವಂತೆ ಶಾಲೆಯನ್ನು

ತೆರೆದಿದ್ದೇನೆ, ಇಲ್ಲಿಯ ಸೌಕರ್ಯ ಕಡಿಮೆ ಮಾಡುವುದು ನನಗೆ ಇಷ್ಟವಿಲ್ಲ ಎಂದುತ್ತರಿಸುತ್ತಿದ್ದಳು. ಪ್ರಯತ್ನಪಟ್ಟು ಶಾರದಾಸದನ ತೆರೆದರೂ ಸದನದಲ್ಲಿ ಸೇರಲು ವಿಧವೆಯರು ಸಾಕಷ್ಟು ಮುಂದೆ ಬರುತ್ತಿರಲಿಲ್ಲ. ಶುರುವಿನ ಆರು ತಿಂಗಳಲ್ಲಿ ಬರೇ ಹದಿನೇಳು ವಿದ್ಯಾರ್ಥಿನಿಯರು ಬಂದು ಸೇರಿದರು.

ಶಾರದಾಸದನದ ಪಾಠಶಾಲೆಯ ವೆಚ್ಚಕ್ಕೆ ಬೇಕಾದ ಹಣವನ್ನು ಅಮೇರಿಕದ ಪಂಡಿತಾ ರಮಾಬಾಯಿ ಎಸೋಸಿಯೇಶನ್‌ನವರು ಕಳುಹಿಸಿ ಕೊಡುತ್ತಿದ್ದರು. ಅಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿನಿಗೂ ವರ್ಷ ಒಂದರ ಹತ್ತು ಪೌಂಡುಗಳಷ್ಟು ವಿದ್ಯಾರ್ಥಿ ವೇತನವನ್ನು ಕೊಡುತ್ತಿದ್ದರು. ಈ ಪ್ರಕಾರ ಹತ್ತು ವರ್ಷಗಳ ತನಕ ಸಹಾಯಧನ ಕೊಡುವುದಾಗಿ ಎಸೋಸಿಯೇಶನ್ ನಿರ್ಧರಿಸಿದ್ದಿತು. ಮುಂಬಾಯಿಯಲ್ಲಿ ಪ್ರಾರಂಭವಾದ ಶಾರದಾಸದನದಲ್ಲಿ ಜೀವನ ವೆಚ್ಚಗಳು ಹೆಚ್ಚಾಗಿದ್ದುದರಿಂದಲೂ ಮೊದಲೊಮ್ಮೆ ಪೂಣಾದಲ್ಲಿ ಸ್ಥಾಪಿಸುವದೆಂಬ ನಿರ್ಣಯ ಮಾಡಿದ್ದ ಸಂಘವು 1890 ರ ನವಂಬರದಲ್ಲಿ ಪೂಣಾ ಪಟ್ಟಣಕ್ಕೆ ಸ್ಥಳಾಂತರಿಸಲ್ಪಟ್ಟಿತು.

ಪೂಣೆಯಲ್ಲಿ ಶಾರದಾಸದನವು ಆಗಾಖಾನ ಬಂಗಲೆಯಲ್ಲಿ ಕೆಲವು ಸಮಯವಿದ್ದಿತು. ಅನಂತರ ನಾಲ್ವತ್ತೆರಡು ಸಾವಿರ ರೂಪಾಯಿಗಳಷ್ಟು ವೆಚ್ಚದ ಸ್ವಂತ ಕಟ್ಟಡದಲ್ಲಿ 1892 ರಲ್ಲಿ ಸ್ಥಳಾಂತರಿಸಿತು. ಪೂಣಾ ಪಟ್ಟಣದಲ್ಲಿ ಪಂ. ರಮಾಬಾಯಿಗೆ ಕೆಲವರಿಂದ ವಿರೋಧ ಕಂಡುಬಂದಿದ್ದರೂ ಅಲ್ಲಿ ಸದನದ ಅಭಿವೃದ್ಧಿಯು ದ್ವಿಗುಣಿತವಾಯಿತು. ಅನಾಥ ಅಬಲೆಯರ ಸಮಾಚಾರ ಎಲ್ಲಿಂದ ಬಂದರೂ ರಮಾಬಾಯಿ ಅಲ್ಲಿಗೆ ಧಾವಿಸಿ ಅವರನ್ನು ಕರೆದುಕೊಂಡು ಬಂದು ಶಾರದಾಸದನದಲ್ಲಿ ಸೇರಿಸುತ್ತಿದ್ದಳು. ಆಗ ವಿದ್ಯಾರ್ಥಿನಿಯರ ಸಂಖ್ಯೆಯು ಆರ್ವತ್ತನಾಲ್ಕಕ್ಕೇರಿತು. ಶಾರದಾಸದನದ ಕಟ್ಟಡವು ಎಲ್ಲಾ ಉಪಕರಣಗಳಿಂದ ಕೂಡಿತ್ತು. ವಸತೀ ಗೃಹದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿನಿಯ ವ್ಯಕ್ತಿಗತ ಮೇಲ್ವಿಚಾರವನ್ನು ರಮಾಬಾಯಿಯೇ ನೋಡಿಕೊಳ್ಳುತ್ತಿದ್ದಳು. ಹೂವಿನ ತೋಟ, ಪುಸ್ತಕಾಲಯ, ವಿಹಾರ ಸ್ಥಳ, ಇವೆಲ್ಲ ಸೌಕರ್ಯಗಳಿಂದ ಸದನವು ಶೋಭಿಸುತ್ತಿತ್ತು. ವಿದ್ಯಾರ್ಥಿನಿಯರಿಗೆ ರಮಾಬಾಯಿಯು ಸೂಕ್ಷ್ಮದರ್ಶಕ ಯಂತ್ರದಿಂದ ಖಗೋಲದಲ್ಲಿರುವ ಗ್ರಹನಕ್ಷತ್ರಗಳ ಗುರುತು, ಹೆಸರುಗಳನ್ನು ಬೋಧಿಸುತ್ತಿದ್ದಳು. ಅಲ್ಲದೆ ಮೃಗ, ಪಕ್ಷಿ, ಪರ್ವತ, ವನಪ್ರದೇಶಗಳನ್ನು ಸೂಕ್ಷ್ಮದರ್ಶಕ ಯಂತ್ರದಿಂದ

ನೋಡುವುದಕ್ಕೆ ಕಲಿಸಿಕೊಡುತ್ತಿದ್ದಳು. ಆಹಾರ ಪಾನೀಯಗಳಿಗೆ ಕೊರತೆ ಇರಲಿಲ್ಲ. ರಮಾಬಾಯಿಯು ವಿದ್ಯಾರ್ಥಿನಿಯರನ್ನು ಹಾಲು ತುಪ್ಪಗಳಲ್ಲಿ ಮೀಯಿಸುವಳು ಎಂದು ಜನರು ಹೇಳುತ್ತಿದ್ದರು.

ರಮಾಬಾಯಿಯ ಸ್ತ್ರೀ ಶಿಕ್ಷಣದ ವರ್ತಮಾನವು ದೂರ ಪೂರ್ವದ ಇಂಡೋನೇಶಿಯಾ ತನಕ ಮುಟ್ಟಿತು. ರಮಾಬಾಯಿಯ ಮಹತ್ಕಾರ್ಯಗಳನ್ನು ಅಲ್ಲಿಯ ರಾಜಕುಮಾರಿ ಕಾರ್ಟಿನಿಯು ಫ್ರೆಂಚ್ ವಾರ್ತಾಪತ್ರಿಕೆಗಳಿಂದ ತಿಳಿದಳು. ಇಂಡೋನೇಶಿಯವು ಆಗ ಡಚ್ಚರ ಆಧಿಪತ್ಯದಲ್ಲಿತ್ತು. ಅಲ್ಲಿಯ ರಾಜರು ನಮ್ಮಲ್ಲಿಯ ದೇಶೀಯ ಸಂಸ್ಥಾನಿಕರಂತೆ ಆಶ್ರಿತರಾಜರಾಗಿದ್ದರು. ಅಲ್ಲಿಯ ಪ್ರಜೆಗಳು ಮುಸಲ್ಮಾನರಾಗಿದ್ದುದರಿಂದ ಹುಡುಗಿಯರು ಹನ್ನೆರಡು ವರ್ಷ ಪ್ರಾಯದನಂತರ ಮನೆಯಿಂದ ಹೊರಗೆಬರುವುದು ಪಾಪಕರವೆಂಬ ಭಾವನೆಯುಳ್ಳವರಾಗಿದ್ದರು. ಇಂತಹ ಪರಿಸ್ಥಿತಿಯಲ್ಲಿ ಹುಡುಗಿಯರ ಶಿಕ್ಷಣದ ವಿಚಾರವು ಅಸಾಧ್ಯವಾಗಿತ್ತು. ರಾಜಕುಮಾರಿ ಕಾರ್ಟಿನಿಯು ಆದಿಪತಿ "ನಾನರೊನಿಗ್ರಂಥ" ರಾಜನ ಮಗಳಾಗಿದ್ದಳು. ಅವಳಿಗೆ ಬಾಲ್ಯದಲ್ಲಿ ಡಚ್ಚ ಅಧಿಕಾರಿಗಳ ಪ್ರೇರಣೆಯಿಂದ ಡಚ್ಚ ವಿದ್ಯಾರ್ಥಿಗಳಿಗಾಗಿಯೇ ಸ್ಥಾಪಿತವಾದ ಪಾಠಶಾಲೆಯಲ್ಲಿ ವಿದ್ಯಾಭ್ಯಾಸದೊರೆತಿದ್ದಿತು. ಅಲ್ಲಿ ಅವಳು ಫ್ರೆಂಚ್ ಭಾಷೆಯ ಶಿಕ್ಷಣಪಡೆದಳು. ನನಗೆ ಸ್ತ್ರೀ ಶಿಕ್ಷಣದ ಸ್ಫೂರ್ತಿಯು ರಮಾಬಾಯಿಯಿಂದ ದೊರೆಯಿತು ಎಂದು ಇವಳು ಹೇಳುತ್ತಿದ್ದಳು.

ಹೀಗೆ ಪಶ್ಚಿಮ ದೇಶವಾದ ಇಂಗ್ಲೆಂಡಿನ ವಿಕ್ಟೋರಿಯಾ ರಾಣಿಯು ರಮಾಬಾಯಿಯ ಸೂಚನೆಯಂತೆ ಹಿಂದೂದೇಶದಲ್ಲಿ ಸ್ತ್ರೀ ಡಾಕ್ಟರುಗಳು ಮತ್ತು ಮಹಿಳೆಯರ ದವಾಖಾನೆಗಳನ್ನು ಸ್ಥಾಪಿಸುವ ಏರ್ಪಾಡು ಮಾಡಿದಳು. ಪೂರ್ವದೇಶವಾದ ಇಂಡೋನೇಶಿಯದ ರಾಜ ಕನ್ಯೆಯು ತನ್ನ ದೇಶದಲ್ಲಿ ಸ್ತ್ರೀ ಶಿಕ್ಷಣ ಮತ್ತು ಸ್ವಾತಂತ್ರ್ಯದ ಪ್ರಚಾರಕ್ಕಾಗಿ ರಮಾಬಾಯಿಯ ಆದರ್ಶವನ್ನು ಅನುಸರಿಸಿದಳು.

ಶಾರದಾಸದನವು ಸ್ಥಿರರೂಪತಾಳಿದ ಮೇಲೆ ರಮಾಬಾಯಿಗೆ ತನ್ನ ತವರೂರನ್ನು ನೋಡಬೇಕೆಂಬ ಹಂಬಲವುಂಟಾಯಿತು. 1890–91ರಲ್ಲಿ ಅವಳು ಸ್ವಗ್ರಾಮಕ್ಕೆ ಬರುವಾಗ ಅನಂತ ಶಾಸ್ತ್ರಿಯು ಆ ಊರನ್ನು ಬಿಟ್ಟು ಹೋಗಿ ಅನೇಕ ವರ್ಷಗಳಾಗಿದ್ದರೂ ಹಿಂದಿನ ಮನೋಭಾವನೆಯನ್ನು ಈ ಜನಗಳು ಬಿಟ್ಟಿರಲಿಲ್ಲ. ಹಾಗೆಯೇ ರಮಾಬಾಯಿಯನ್ನು ಗೌರವಿಸುವುದಾಗಲೀ

ಸಹಾನುಭೂತಿಯನ್ನು ತೋರಿಸುವುದಾಗಲೀ ಅವರ ಸ್ವಭಾವವಿರಲಿಲ್ಲ. ತನ್ನ ಹುಟ್ಟೂರನ್ನೂ ಜನ್ಮಸ್ಥಳವನ್ನೂ ನೋಡಿ ಹಿಂದಿರುಗುವಾಗ ಅನೇಕ ಅನಾಥ ವಿಧವೆಯರನ್ನು ಕರಕೊಂಡು ಪೂಣಾ ಪಟ್ಟಣಕ್ಕೆ ಹೋದಳು.

ಶಾರದಾಸದನದಲ್ಲಿ ಬಾಲಿಕೆಯರು ತಮ್ಮ ತಮ್ಮ ಮತಪದ್ಧತಿಯಂತೆ ಇರುವುದಕ್ಕೆ ಆತಂಕವಿರಲಿಲ್ಲ. ರಮಾಬಾಯಿ ಕ್ರೈಸ್ತಮತಾವಲಂಬಿಯಾಗಿದ್ದರೂ ಬಾಲಿಕೆಯರಿಗೆ ಕ್ರೈಸ್ತಮತ ಸ್ವೀಕಾರಮಾಡಬೇಕೆಂದು ಅವಳು ಪ್ರೇರೇಪಿಸುತ್ತಿದ್ದಿಲ್ಲ. ಆದರೆ ಸದನದಲ್ಲಿಯ ಬಾಲಿಕೆಯರನ್ನು ಮಾತೆಯಂತೆಯೇ ರಮಾಬಾಯಿಯು ಪ್ರೀತಿಸುತ್ತಿದ್ದಳು. ವಿದ್ಯಾರ್ಥಿನಿಯರ ಮತ ವಿಚಾರದಲ್ಲಿ ಸ್ವಾತಂತ್ರ್ಯವಿರಬೇಕೆಂದು ಅಮೇರಿಕದ ರಮಾಬಾಯಿ ಎಸೋಸಿಯೇಶನಿನ ನಿಬಂಧನೆಯಾಗಿತ್ತು. ರಮಾಬಾಯಿಯು ಪ್ರತಿದಿನ ಬೆಳಿಗ್ಗೆ ಐದು ಘಂಟೆಗೆ ಬಾಯ್ಬಲ್ಲಿನ ಶಾಸ್ತ್ರಭಾಗವನ್ನು ಓದಿ ಪ್ರಾರ್ಥನೆ ಮಾಡುತ್ತಿದ್ದಳು. ಆ ಸಮಯ ಅಲ್ಲಿಯ ಕಿಟಿಕಿ ಬಾಗಿಲುಗಳು ಮುಚ್ಚಿಕೊಳ್ಳುತ್ತಿರಲಿಲ್ಲ. ಸದನದ ಬಾಲಿಕೆಯರೂ ಪ್ರಾರ್ಥನೆಯ ವೇಳೆ ಹೊರಗಡೆ ನಿಂತು ಕೌತುಕದಿಂದ ನೋಡುತ್ತಿದ್ದರು. ಕೋಮಲ ಸ್ವಭಾವದ ಬಾಲಿಕೆಯರಿಗೆ ಇದರ ಪ್ರಭಾವ ಬೀಳದೆ ಇರಲಿಲ್ಲ. "ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ" ಎಂಬ ಉಕ್ತಿಯಂತೆ ಕೆಲವು ದಿನಗಳ ನಂತರ ಸದನದ ಖಾಯಂ ನಿವಾಸಿಗಳಾದ ಇಪ್ಪತ್ತು ಮಂದಿ ವಿದ್ಯಾರ್ಥಿನಿಯರು ಪ್ರಾರ್ಥನೆಯ ವೇಳೆ ಶಾಂತ ಮುದ್ರೆಯಿಂದ ಧ್ಯಾನಮಗ್ನಳಾಗಿದ್ದ ರಮಾಬಾಯಿಯನ್ನು ಕಂಡು, ಆಕೆಯು ಕೈಮುಗಿದಾಗ ತಾವೂ ಕೈಮುಗಿಯುತ್ತ ಆಕೆಯು ಮೊಣಕಾಲೂರಿ ನಮಿಸಿದಾಗ ತಾವೂ ನಮಿಸುತ್ತ, ಭಕ್ತಿರಸ ಪ್ರವಾಹದಲ್ಲಿ ತೇಲಿಹೋಗುತ್ತಿದ್ದರು. ಪ್ರಾರ್ಥನೆ ಮುಗಿದ ನಂತರ ರಮಾಬಾಯಿ ವಿದ್ಯಾರ್ಥಿನಿಯರನ್ನು ಒಬ್ಬೊಬ್ಬರನ್ನೇ ಹತ್ತಿರ ಕರೆದು ಮುತ್ತಿಕ್ಕಿ ಆಶೀರ್ವದಿಸಿ ಕಳುಹಿಸುತ್ತಿದ್ದಳು. ಪ್ರತಿದಿನವೂ ಹೀಗೆ ನಡೆಯುತ್ತಿದ್ದಿತು.

ಮುಂದೆ ಕೆಲವು ದಿನಗಳಲ್ಲಿ ಸದನದ ವಿದ್ಯಾರ್ಥಿನಿಯರಲ್ಲಿ ಇಬ್ಬರು ಕ್ರೈಸ್ತಮತವನ್ನು ಅಂಗೀಕರಿಸಿದರೆಂದು ಎಲ್ಲೆಲ್ಲಿಯೂ ವಾರ್ತೆ ಹಬ್ಬಿತು. ವಿದ್ಯಾರ್ಥಿನಿಯರನ್ನು ಕ್ರೈಸ್ತಮತಕ್ಕೆ ಸೇರುವಂತೆ ರಮಾಬಾಯಿ ಬೋಧಿಸುತ್ತಾಳೆ ಎಂಬ ವರ್ತಮಾನವು ತಿಲಕರ "ಕೇಸರಿ" ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಯಿತು. ರಮಾಬಾಯಿ ಎಸೋಸಿಯೇಶನಿನ ಸಲಹಾ ಸಮಿತಿಯು

ಸದಸ್ಯರಾದ ಮಹಾದೇವ ಗೋವಿಂದ ರಾನಡೆ, ಡಾ. ರಾಮಕೃಷ್ಣ ಗೋಪಾಳ ಭಂಡಾರ್‌ಕಾರ್ ಇವರು ಪ್ರಾರಂಭದಿಂದಲೂ ರಮಾಬಾಯಿಯ ಸ್ತ್ರೀ ವಿದ್ಯಾಭ್ಯಾಸ, ಅನಾಥ ವಿಧವಾ ರಕ್ಷಣೆ ಮುಂತಾದ ಉದ್ದೇಶಗಳುಳ್ಳ ಶಾರದಾ ಸದನದ ಕಾರ್ಯಗಳಲ್ಲಿ ಅತ್ಯುತ್ತಮ ಮನೋಭಾವನೆಯುಳ್ಳವರಾಗಿ ಸಾಧ್ಯವಿದ್ದ ಸಹಾಯಗಳನ್ನೆಲ್ಲ ಮಾಡುತ್ತಿದ್ದರು. ಆದರೆ ರಮಾಬಾಯಿ ವಿದ್ಯಾರ್ಥಿನಿಯರಿಗೆ ಕ್ರೈಸ್ತಮತದ ಬೋಧನೆ ಮಾಡುತ್ತಾಳೆಂಬ ವಾರ್ತೆಯಿಂದ ಅವರ ಮನಸ್ಸು ಕಲುಷಿತವಾಯಿತು. ಸದನದ ವಿದ್ಯಾರ್ಥಿನಿಯರನ್ನು ಪ್ರಾರ್ಥನಾ ಸಮಯದಲ್ಲಿ ಹತ್ತಿರ ಕುಳಿತುಕೊಳ್ಳಲಿಕ್ಕೆ ಬಿಡದೆ ಹೊರಗೆ ಹೋಗುವಂತೆ ಅಜ್ಞಾಪಿಸಬೇಕಾಗಿ ಸಲಹೆಗಾರರು ರಮಾಬಾಯಿಗೆ ಸೂಚಿಸಿದರು. ವಿದ್ಯಾರ್ಥಿನಿಯರನ್ನು ರಮಾಬಾಯಿ ಪ್ರಾರ್ಥನೆಯ ವೇಳೆ ಬರಲು ಹೇಳುತ್ತಿರಲಿಲ್ಲ. ಹೋಗುವಂತೆಯೂ ಆಜ್ಞಾಪಿಸುವ ಹಾಗಿರಲಿಲ್ಲ. ಇದರಿಂದಾಗಿ ಸಲಹೆಗಾರರಲ್ಲಿ ಮತ್ತು ರಮಾಬಾಯಿ ಇವರಲ್ಲಿ ಭಿನ್ನಾಭಿಪ್ರಾಯವುಂಟಾಯಿತು. ಪರಿಣಾಮವಾಗಿ ನ್ಯಾಯಮೂರ್ತಿ ರಾನಡೆ, ಭಂಡಾರಕಾರ್ ಮೊದಲಾದವರು ಬೋಸ್ಟನಿನ ಪಂ. ರಮಾಬಾಯಿ ಎಸೋಸಿಯೇಶನಿನ ಅಧ್ಯಕ್ಷರಿಗೆ ತಮ್ಮ ರಾಜಿನಾಮೆಯನ್ನು ತಾ. 13–8–1893ರಲ್ಲಿ ಸಲ್ಲಿಸಿದರು.

"ಪ್ರಾರಂಭದ ಎರಡು ವರ್ಷಗಳಿಂದ ಶಾರದಾಸದನವು ಧಾರ್ಮಿಕ ವಿಚಾರದಲ್ಲಿ ತಟಸ್ಥವಾಗಿ ಇರುವಂತೆ ರಮಾಬಾಯಿ ನೋಡಿಕೊಳ್ಳುತ್ತಿದ್ದಳು. ಆದರೆ ಇತ್ತೀಚಿನ ವರ್ತಮಾನಗಳಿಂದ ಸದನದ ವಿದ್ಯಾರ್ಥಿನಿಯರಿಗೆ ಕ್ರೈಸ್ತಮತದ ಶಿಕ್ಷಣ ಕೊಡಲಾಗುತ್ತಿದ್ದು ರಮಾಬಾಯಿಯ ಖಾಸಗೀ ಪ್ರಾರ್ಥನೆಯ ವೇಳೆಯಲ್ಲಿ ಸಮೀಪವಿರುವಂತೆಯೂ 'ಬಾಯ್ಬಲ್' ಓದುವಂತೆಯೂ ಪ್ರೋತ್ಸಾಹ ಕೊಡಲಾಗುತ್ತಿದೆ. ಸದನದ ವಿದ್ಯಾರ್ಥಿನಿಯರಲ್ಲಿ ಈಗಾಗಲೇ ಇಬ್ಬರು ಕ್ರೈಸ್ತಮತಾವಲಂಬಿಯಾಗಿದ್ದಾರೆಂದು ತಿಳಿದುಬರುತ್ತದೆ. ಪ್ರಾರಂಭದ ಉದ್ದೇಶಕ್ಕೆ ವಿರೋಧವಾದ ವರ್ತನೆಯಿಂದಾಗಿ ಇನ್ನುಮುಂದೆ ನಮಗೆ ಸಲಹಾ ಮಂಡಲಿಯಲ್ಲಿ ಇರಲು ಸಾಧ್ಯವಿಲ್ಲ" ಎಂದು ಮುಂತಾಗಿ ರಾಜಿನಾಮೆಗೆ ಕಾರಣಗಳನ್ನು ಕೊಡಲಾಗಿದ್ದಿತು.

ಸಲಹಾ ಮಂಡಲಿಯ ರಾಜಿನಾಮೆಯನ್ನು ಸ್ವೀಕರಿಸಿ ಈ ವರೆಗಿನ ಸಹಾಯಕ್ಕಾಗಿ ಧನ್ಯವಾದಗಳನ್ನು ಕೊಟ್ಟರಲ್ಲದೆ ಇನ್ನು ಮುಂದಿನ ಶಾರದಾ ಸದನದ ಎಲ್ಲಾ ಜವಾಬ್ದಾರಿಯನ್ನು ವಹಿಸುವಂತೆ ರಮಾಬಾಯಿಯನ್ನೇ

ಎಸೋಸಿಯೇಶನಿನವರು ನೇಮಿಸಿದರು. ಸಲಹಾ ಮಂಡಲಿಯ ರಾಜಿ ನಾಮೆಯ ನಂತರ ಸದನದ ವಿಚಾರವಾಗಿ ಅನೇಕ ತರದ ದೋಷಾರೋಪಗಳ ವರ್ತಮಾನಗಳು ಎಲ್ಲಾ ಕಡೆಗಳಲ್ಲಿ ಹಬ್ಬಿದುವು. ಈ ಆರೋಪಗಳನ್ನು ಖಂಡಿಸಿ ಸತ್ಯ ಸ್ಥಿತಿಯನ್ನು ವಿಷದಪಡಿಸುವ ದೀರ್ಘವಾದ ಲೇಖನ ಒಂದನ್ನು ರಮಾಬಾಯಿ ಪೂಣಾದ "ಕೇಸರಿ" ಪತ್ರಿಕೆಯಲ್ಲಿ ಪ್ರಕಟಿಸಿದಳು.

೧೫. ವಿವಿಧ ಕಾರ್ಯಗಳು

ಅಮೇರಿಕಾದಲ್ಲಿ 3,000 ಮೈಲುಗಳ ಸಂಚಾರ ಮಾಡಿ ಅಲ್ಲಿಯ ಜನ ಜೀವನದ ಕುರಿತು ಅಭ್ಯಾಸಿಸಿ "ಸಂಯುಕ್ತ ಸಂಸ್ಥಾನಗಳ ಲೋಕಸ್ಥಿತಿ ಮತ್ತು ಪ್ರವಾಸ ವೃತ್ತಾಂತ" ಎಂಬ ಪಂ. ರಮಾಬಾಯಿಯ ಮೂರನೇ ಮರಾಠಿ ಪುಸ್ತಕವು 1889ರ ದಶಂಬರದಲ್ಲಿ ಪ್ರಕಟವಾಯಿತು. ಭಾರತ ದಂತಹ ವಿವಿಧ ಭಾಷೆ, ವಿವಿಧ ಧರ್ಮದ ಪ್ರಜೆಗಳುಳ್ಳ ದೇಶದಲ್ಲಿ ಎಲ್ಲರಿಗೂ ತಿಳಿಯುವ ಒಂದೇ ರಾಷ್ಟ್ರಭಾಷೆ ಹಿಂದೀಯಾಗಬೇಕೆಂದೂ, ಒಂದೇ ರಾಷ್ಟ್ರಭಾಷೆ ಯಾಗುವುದರಿಂದ ರಾಷ್ಟ್ರದ ಭಾವನಾ ಐಕ್ಯತೆಗೆ ಹೆಚ್ಚು ಪ್ರಯೋಜನವಿದೆ ಎಂಬುದಾಗಿಯೂ ಈಗ್ಗೆ ಎಪ್ಪತ್ತ-ಮೂರು ವರ್ಷಗಳ ಹಿಂದೆಯೇ ಪಂ. ರಮಾ ಬಾಯಿ ತನ್ನ ಆ ಪುಸ್ತಕದಲ್ಲಿ ವಿಶದೀಕರಿಸಿದಳು. ಪ್ರಜಾರಾಜ್ಯದ ಸುಂದರ ಚಿತ್ರವನ್ನೂ, ಪ್ರಜೆಗಳ ಆಚಾರವಿಚಾರ, ವ್ಯವಹಾರ, ಮನೋವ್ಯಾಪಾರ ಸ್ಥಿತಿಗಳನ್ನೂ ಆ ಪುಸ್ತಕದಲ್ಲಿ ರಮಾಬಾಯಿ ಸುಂದರವಾಗಿ ವರ್ಣಿಸಿದ್ದಳು. ಆಗಿನ ವಾಚಕರಿಗೆ ನಿಜವಾಗಿಯೂ ಇದೊಂದು ಕೌತುಕದ ವಿಚಾರವೆಂದು ಅನ್ನಿಸದೆ ಇರಲಿಕ್ಕಿಲ್ಲ. ರಾಷ್ಟ್ರಭಾಷೆ ಹಿಂದೀಯಾಗಬೇಕು, ಮಾತ್ರವಲ್ಲದೆ ಲಿಪಿ ದೇವನಾಗರಿಯಾಗಬೇಕೆಂದು ಆ ಪುಸ್ತಕದಲ್ಲಿ ಪ್ರತಿಪಾದಿಸಲಾಗಿತ್ತು. ಮಾತನಾಡಲು ಕಠಿಣವಾದ ರಷ್ಯನ್ ಭಾಷೆಯನ್ನೂ ದೇವನಾಗರಿಯಲ್ಲಿ ಬರೆಯಬಹುದೆಂದು ಪಂ. ರಮಾಬಾಯಿ ಪ್ರತಿಪಾದಿಸಿದ್ದಳು. ಹಿಂದೂದೇಶ ದಲ್ಲಿ ಸ್ಥಳೀಯ ಆಡಳಿತ, ಪ್ರಾಥಮಿಕ ಶಿಕ್ಷಣ, ಪೋಲಿಸರ ನಡತೆ, ದಾನ ಧರ್ಮ, ಇತ್ಯಾದಿಗಳಲ್ಲಿ ಆಗಬೇಕಾದ ಸುಧಾರಣೆಗಳನ್ನೂ ಅಮೇರಿಕದ ಈ ಪ್ರವಾಸ ಪುಸ್ತಕವಲ್ಲಿ ಬರೆದಿದ್ದಳು. ಮುಂಬಯಿ ಯುನಿವರ್ಸಿಟಿಯವರು ಈ ಪುಸ್ತಕವನ್ನು ಬಿ. ಎ. ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿ ಮಂಜೂರು ಮಾಡಿದ್ದರು.

ಸಂಯುಕ್ತ ಸಂಸ್ಥಾನಗಳ ಲೋಕಸ್ಥಿತಿ ಮತ್ತು ಪ್ರವಾಸ ವೃತ್ತಾಂತ ಪುಸ್ತಕದಲ್ಲಿ ರಾಷ್ಟ್ರಭಾಷೆ ಹಿಂದೀಯಾಗಬೇಕೆಂದು ಬರೆದ ಲೇಖನದ ತಾತ್ಪರ್ಯವನ್ನು ಇಲ್ಲಿ ಕೊಟ್ಟರೆ ಅತಿಶಯೋಕ್ತಿಯಾಗಲಾರದು. "ಜಗತ್ತಿನ ಬೇರೆ ಬೇರೆ ಕಡೆಗಳಲ್ಲಿ ವಸಾಹತು ಮಾಡಿ ನೆಲಸಿದ ಹತ್ತು ಕೋಟಿಯಷ್ಟು ಇಂಗ್ಲಿಷ್ ವಂಶದ ಜನರು ಇಂಗ್ಲಿಷ್ ಭಾಷೆ ಮಾತನಾಡುತ್ತಾರೆ. ಇದನ್ನು ತಿಳಿದ ಇಂಗ್ಲಿಷ್ ಭಾಷೆಯ ಅಭಿಮಾನಿಗಳು ಇನ್ನು ಇಂಗ್ಲಿಷ್ ಭಾಷೆಯೇ ಪ್ರಪಂಚದ ಭಾಷೆಯಾಗುವುದೆಂದು ಅಭಿಪ್ರಾಯಪಡುತ್ತಾರೆ. ಈ ಸಂಗ್ತಿಯು ಎಷ್ಟರ ಮಟ್ಟಿಗೆ ಸತ್ಯ ಎಂದೂಹಿಸುವುದು ಕಷ್ಟವಾದರೂ ಈ ಭಾಷೆಯು ಬೆಳವಣಿಗೆ ಮಾತ್ರ ವಿಲಕ್ಷಣವೆಂಬುದು ಸತ್ಯ. ಈ ವಿಚಾರದಲ್ಲಿ ನಮ್ಮ ಜನರು ಒಂದಿಷ್ಟು ಆಲೋಚಿಸಬೇಕಾಗಿದೆ. ಉದಾಹರಣೆಗೆ ನಮ್ಮ ರಾಷ್ಟ್ರೀಯ ಮಹಾಸಭೆಯು ಮದ್ರಾಸಿನಲ್ಲಿ, ಮುಂಬಯಿಯಲ್ಲಿ ಇಲ್ಲವೇ ಕಲ್ಕತ್ತಾ, ಲಾಹೋರುಗಳಲ್ಲಿ ಸೇರುವಾಗ ಹಿಂದುಸ್ಥಾನದ ಒಂದು ಪ್ರಾಂತ್ಯದವರಿಗೆ ಇನ್ನೊಂದು ಪ್ರಾಂತ್ಯದ ಭಾಷೆಯ ಜ್ಞಾನ ಇಲ್ಲದಿರುವುದರಿಂದ ಅಲ್ಲಿ ಸೇರಿದ ಪ್ರತಿನಿಧಿಗಳು ಇಂಗ್ಲಿಷ್ ಭಾಷೆಯಲ್ಲಿ ದೊಡ್ಡ ಭಾಷಣಗಳನ್ನು ಮಾಡುತ್ತಾರೆ. ಸರ್ವಸಾಮಾನ್ಯ ಜನರಿಗೆ ಈ ಭಾಷಣಗಳ ಅರ್ಥವಾಗುವುದಿಲ್ಲ. ನಮ್ಮ ದೇಶದಲ್ಲಿ ರೂಢಿಯಲ್ಲಿದ್ದ ಎಲ್ಲಾ ಭಾಷೆಗಳನ್ನು ಬಿಟ್ಟು ಅವುಗಳ ಬದಲಾಗಿ ಇಂಗ್ಲಿಷ್ ಭಾಷೆಯನ್ನು ಸ್ಥಾಪಿಸುವುದೆಂದರೆ ಹಿಂದೂದೇಶವನ್ನು ಸಮುದ್ರದಲ್ಲಿ ಮುಳುಗಿಸಿ ಇದರ ಮೇಲೆ ಬ್ರಿಟಿಷ್ ದ್ವೀಪಗಳನ್ನು ತಂದು ಇಡುವಂತೆಯೇ ಸೈ. ನಮ್ಮಲ್ಲಿಯ ಬುದ್ಧಿವಂತ, ವಿದ್ಯಾವಂತ ವಿಚಾರೀ ಜನರು ಸ್ವದೇಶ ಸಮಾಜದ ಏಳಿಗೆಗೆ ಯತ್ನಿಸುತ್ತಾರಾದರೆ ಎಲ್ಲರಿಗೂ ತಿಳಿಯುವ ಒಂದು ರಾಷ್ಟ್ರಭಾಷೆಯಾಗಬೇಕು ಎಂಬುದನ್ನು ಮೊದಲು ಸಾಧಿಸಬೇಕು. ಈ ವಿಚಾರ ಅವರ ಮನಸ್ಸಿಗೆ ಯಾಕೆ ಹೊಳೆಯುವುದಿಲ್ಲ? ಇಂಗ್ಲಿಷ್ ಭಾಷೆಯು ಹತ್ತು ಕೋಟಿ ಇಂಗ್ಲಿಷ್ ಜನರ ಭಾಷೆಯಾಗಿದ್ದರೆ ನಮ್ಮ ದೇಶದಲ್ಲಿಯೂ ಅಂತಹ ಒಂದು ಭಾಷೆ ಇದೆ. ಅದು ಹಿಂದೀ. ಹಿಂದೀ ಭಾಷೆಯು ನಮ್ಮ ದೇಶದ ಹೆಚ್ಚಿನ ಜನರಿಗೆ ಅರ್ಥವಾಗಬಲ್ಲ ಭಾಷೆಯಾಗಿದೆ. ಮುಸಲ್ಮಾನರ ರಾಜ್ಯವಿದ್ದಾಗ ಉರ್ದು ಭಾಷೆಯಲ್ಲಿ ವ್ಯವಹಾರ ನಡೆಯುತ್ತಿತ್ತು. ಉರ್ದು ಭಾಷೆಯೆಂದರೆ, ಅದು ಒಂದು ಬೇರೆ ಭಾಷೆಯಾಗದೆ ಹಿಂದೀ, ಅರಬಿ, ಫಾರಶಿ, ಮರಾಠಿ ಇತ್ಯಾದಿ ಭಾಷೆಗಳ ಶಬ್ದಗಳ ಮಿಶ್ರಣವಾಗಿದೆ. ಹಿಂದೀ ಭಾಷೆಯು ಕಲಿಯಲಿಕ್ಕೂ

ಕಠಿಣವಾಗಿರದೆ ಇಂಗ್ಲಿಷಿನಂತೆಯೇ ಅದರಲ್ಲಿ ಜಗತ್ತಿನ ಎಲ್ಲಾ ಭಾಷೆಗಳ ಸಮಾವೇಶ ಆಗಲಿಕ್ಕೆ ಸಾಧ್ಯವಿದೆ. ಆದುದರಿಂದ ಹಿಂದೀ ಭಾಷೆ ಪ್ರಸಾರ ಆಗುವುದಕ್ಕೆ ಕಷ್ಟವಿಲ್ಲ. ಇದರ ವ್ಯಾಕರಣವು ಕಷ್ಟವಾಗಿರದೆ ಸುಲಭವಿರುತ್ತದೆ. ಹಿಂದೀ ಭಾಷೆಯಲ್ಲಿ, ಅರಬಿ, ಫಾರಶಿ, ಇಂಗ್ಲಿಷು, ಸಂಸ್ಕೃತ ಭಾಷೆಗಳಿಂದ ಶಬ್ದಗಳಿಗೆ ಹಿಂದೀಯ ರೂಪಕೊಡುವುದು ಸಾಧ್ಯವಿದೆ. ಇಂತಹ ಸುಂದರ ಮತ್ತು ಅಮೂಲ್ಯವಾದ ಭಾಷೆ ನಮ್ಮಲ್ಲಿರುವಾಗ ಅದನ್ನು ರಾಷ್ಟ್ರಭಾಷೆಯಾಗಿ ಮಾಡಲಿಕ್ಕೆ ಸಾಧ್ಯವಿರುವಾಗ ವಿದ್ಯಾವಂತರಾದ ನನ್ನ ಸಹೋದರರು ತಮ್ಮ ದೇಶೋದ್ಧಾರದ ವ್ಯವಹಾರಗಳನ್ನು ಮಾಡುವ ಸಮಯ ಏಳು ಸಮುದ್ರಗಳ ಆಚೆಗಿರುವ ಚಿತ್ರಲಿಪಿಯಿಂದ ಮಿಶ್ರಿತವಾದ ಪ್ರಾಚೀನ ಇಂಗ್ಲಿಷು ಭಾಷೆಯನ್ನು ಏಕೆ ಉಪಯೋಗಿಸುತ್ತಾರೆ? ಇದರ ಸ್ಪಷ್ಟೀಕರಣ ಅವರು ಮಾಡಿದರೆ ಒಳ್ಳೆಯದಾಗುತ್ತಿತ್ತು. ನಮ್ಮ ದೇಶದ ರಾಷ್ಟ್ರೀಯ ಸಭೆ ಮತ್ತು ಸಾರ್ವಜನಿಕ ಸಭೆಗಳ ಮುಂದಾಳುಗಳು ಮನಸ್ಸು ಮಾಡಿದರೆ ಕನ್ಯಾಕುಮಾರಿಯಿಂದ ಹಿಮಾಲಯದ ವರೆಗೆ ಸಿಂಧೂ ಸಮುದ್ರ ಸಂಗಮದಿಂದ ಮಣಿಪುರದ ಪರ್ಯಂತ ಹಿಂದೀ ಭಾಷೆ ರಾಷ್ಟ್ರಭಾಷೆಯನ್ನಾಗಿ ಮಾಡುವರೆ ದೂರದರ್ಶಿಗಳಾದ ದೇಶ ಹಿತಚಿಂತಕರು ಪ್ರಯತ್ನಿಸುವರೆಂದು ಹಾರೈಸುತ್ತೇನೆ!"

ರಮಾಬಾಯಿಯ ಎಪ್ಪತ್ತ-ಮೂರು ವರ್ಷಗಳ ಹಿಂದಿನ ಈ ವಿಚಾರಗಳು ಈಗಲೂ ಮನನೀಯವಾಗಿವೆ. ಇನ್ನೊಂದು ಮಹತ್ವದ ವಿಷಯವೇನೆಂದರೆ—1889ರಲ್ಲಿ ಮುಂಬಯಿಯಲ್ಲಿ ಸೇರಿದ ರಾಷ್ಟ್ರೀಯ ಮಹಾಸಭೆಗೆ ರಮಾಬಾಯಿಯ ಪ್ರಯತ್ನದಿಂದ ಎಂಟು ಜನ ಸ್ತ್ರೀ ಪ್ರತಿನಿಧಿಗಳು ಪ್ರಥಮವಾಗಿ ಆರಿಸಿ ಬಂದುದು. ಆರ್ಯ ಮಹಿಳಾ ಸಮಾಜದ ನಾಲ್ಕು ಜನ ಸದಸ್ಯೆಯರಲ್ಲಿ ಪಂ. ರಮಾಬಾಯಿಯು ಒಬ್ಬಳಾಗಿದ್ದಳು. ಐದನೇ ಕಾಂಗ್ರೆಸ್ ಅಧಿವೇಶನದಲ್ಲಿ ತನ್ನ ಪ್ರಭಾವೀ ವ್ಯಕ್ತಿತ್ವದಿಂದ ರಮಾಬಾಯಿ ಒಳ್ಳೇ ಪ್ರಭಾವ ಬೀರಿದಳು, ಅಲ್ಲದೆ ಹಿಂದೀಯನ್ನು ರಾಷ್ಟ್ರಭಾಷೆಯಾಗಿ ಅಂಗೀಕರಿಸುವ ಪ್ರಯತ್ನ ಮಾಡಿದಳು. ರಾಜಕೀಯದಲ್ಲಿ ಮಹಿಳೆಯರು ಕೆಲಸ ಮಾಡುವುದು ನ್ಯಾಯಮೂರ್ತಿ ರಾನಡೆಯವರಿಗೆ ಇಷ್ಟವಿರಲಿಲ್ಲ. ಆದರೆ ಪಂ. ರಮಾಬಾಯಿ ರಾಷ್ಟ್ರೀಯ ಸಭೆಯಲ್ಲಿ ಈಗಿನಿಂದಲೇ ಮಹಿಳಾ ಪ್ರತಿನಿಧಿಗಳನ್ನು ಆರಿಸುವ ಅವಶ್ಯಕತೆಯನ್ನು ಪ್ರತಿಪಾದಿಸಿದಳು. ಈಗಿನ ರಾಷ್ಟ್ರ

ಸಭೆಯು ಮುಂದೆ ದೇಶದ ಪಾರ್ಲಿಮೆಂಟು ಆಗುವುದು. ಈಗಿನಿಂದಲೇ ಮಹಿಳಾ ಪ್ರತಿನಿಧಿಗಳನ್ನು ನೇಮಿಸವ ಪದ್ಧತಿ ಇಲ್ಲದಿದ್ದರೆ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿ ಮಹಿಳಾ ಪ್ರತಿನಿಧಿಗಳನ್ನು ನೇಮಿಸುವ ವಿಚಾರದಲ್ಲಿ ತೊಡಕು ಬಂದಂತೆಯೇ ನಮ್ಮಲ್ಲಿಯೂ ತೊಡಕುಂಟಾದೀತು ಎಂದು ಸೂಚಿಸಿದಳು. ಪಂ. ರಮಾಬಾಯಿಯ ದೂರದರ್ಶಿತ್ವವು ಇದರಿಂದ ವ್ಯಕ್ತವಾಗುವುದು.

ಕಾಂಗ್ರೆಸ್ ಅಧಿವೇಶನವು ಮುಕ್ತಾಯವಾದನಂತರ ಅದೇ ಮಂಟಪದಲ್ಲಿ ಸಾಮಾಜಿಕ ಪರಿಷತ್ತು ಸೇರಿತು. 1889ನೇ ದಶಂಬರದಲ್ಲಿ ಮುಂಬಯಿಯಲ್ಲಿ ಸೇರಿದ ಕಾಂಗ್ರೆಸ್ ಅಧಿವೇಶನ ಮುಗಿದ ಮೇಲೆ ದಶಂಬರ ತಾ. 29ರಂದು ಸಾಮಾಜಿಕ ಪರಿಷತ್ತು ಸೇರಿತು. ಕಾಂಗ್ರೆಸ್ಸಿನ ಅಧ್ಯಕ್ಷ ಸರ್ ಬೆಡಾರ್‌ಬರ್ನ್‌ರು ಇದರಲ್ಲಿ ಭಾಗವಹಿಸಿದ್ದರು. ನ್ಯಾಯಮೂರ್ತಿ ತೆಲಂಗ, ಡಾ. ಭಂಡಾರಕರ, ಶ್ರೀ ಸುಬ್ರಹ್ಮಣ್ಯ ಅಯ್ಯರ್ ಮುಂತಾದ ಮುಂದಾಳುಗಳು ಸೇರಿದ್ದರು. ನ್ಯಾಯಮೂರ್ತಿ ತೆಲಂಗರು ಸಾಮಾಜಿಕ ಪರಿಷತ್ತಿನ ಅಧ್ಯಕ್ಷತೆವಹಿಸಿದ್ದರು. ವಿಶೇಷ ಆಮಂತ್ರಣದ ಮೇರೆಗೆ ರಮಾಬಾಯಿಯು ಉಪಸ್ಥಿತಳಾಗಿದ್ದಳು. ಈ ಪರಿಷತ್ತಿನಲ್ಲಿ ಸುಬ್ರಹ್ಮಣ್ಯಂ ಅಯ್ಯರವರು 'ವಿಧವಾಕೇಶವಪನದ' ವಿಚಾರದ ಗೊತ್ತುವಳಿಯನ್ನು ಮಂಡಿಸಿದರು. ರಮಾಬಾಯಿಯು ಇದನ್ನು ಅನುಮೋದಿಸಿ ಠರಾವಿನ ಪುಷ್ಟೀಕರಣದ ಭಾಷಣದಲ್ಲಿ ಹೀಗೆಂದಳು:—

"ಬಂಧುಗಳೇ, ನಮ್ಮ ದೇಶದಲ್ಲಿ ಸಾವಿರಗಟ್ಟಲೆ ಅಲ್ಲ, ಲಕ್ಷಗಟ್ಲೆ, ವಿಧವೆಯರು ಇದ್ದಾರೆ. ಈ ಕಾರಣದಿಂದಲೇ ಈ ಠರಾವು ಪಾಸಾಗಬೇಕು. ಇದರಲ್ಲಿ ನಾನು ಒಂದು ವಿಶೇಷ ವಿಷಯವನ್ನು ಸೂಚನೆ ಮಾಡುತ್ತೇನೆ. ಏನೆಂದರೆ, ಹದಿನೆಂಟು ವರ್ಷ ಮೇಲ್ಪಟ್ಟ ವಿಧವೆಯರು ಕೇಶವಪನ ಮಾಡಬಹುದು ಎಂದು ಇದ್ದುದನ್ನು ಸಂಪೂರ್ಣ ಲೋಪಪಡಿಸಿ ಎಲ್ಲಾ ವಿಧವೆಯರಿಗೆ ಅನ್ವಯಿಸುವಂತಾಗಬೇಕು. ಪ್ರಾಯಕ್ಕೆ ಬಂದ ವಿಧವೆಯರಿಗೆ ತಾವು ಹೇಗಿರಬೇಕೆಂಬ ಸ್ವಾತಂತ್ರ್ಯವಿರಬೇಕು, ತನ್ನ ಕೂದಲುಗಳನ್ನು ಬೋಳಿಸಬೇಕೆಂತ ಮನಸ್ಸಿದ್ದವರಿಗೆ ಯಾರೂ ಆತಂಕಿಸಲಾರರು, ಹಾಗೆಯೇ 'ಮುಂಡನ'ಮಾಡಬೇಕೆಂಬ ಇಚ್ಛೆ ಇದ್ದವರಿಗೆ ಹಾಗೆ ಮಾಡುವಂತೆ ಬಿಡಬೇಕು. ನಾನು ಅನೇಕ ವಿಧವೆಯರನ್ನು ನೋಡಿದ್ದೇನೆ, ಆದರೆ ಅವರಲ್ಲಿ ಒಬ್ಬಳಾದರೂ

ತನ್ನ ಕೂದಲುಗಳನ್ನು ಬೋಳಿಸುವುದಕ್ಕೆ ಸಮ್ಮತಿಸಲಿಲ್ಲ, (ಚಪ್ಪಾಳೆ) ಅಲ್ಲದೆ ತಮ್ಮ ಕೂದಲುಗಳನ್ನು ಮುಂಡನಮಾಡುವುದು ಬೇಡವೆಂದೇ ಅವರು ಹೇಳುತ್ತಿದ್ದರು. ಬಲಾತ್ಕಾರದಿಂದಲೇ ಇಂಥ ಕೆಲಸವನ್ನು ಮಾಡಿಸುತ್ತಿದ್ದರು. (Shame, Shame) ನೀವು ನಿಮ್ಮ ಕೂದಲು ಬೆಳೆಸಿದರೆ ಯಮಲೋಕದಲ್ಲಿ ನಿಮ್ಮ ಗಂಡಂದಿರನ್ನು ಇದರಿಂದ ಕಟ್ಟಿ ಬಿಗಿಯುತ್ತಾರೆಂದು ಹೆದರಿಸಲಾಗುತ್ತಿತ್ತು. ಇದೊಂದು ಹುಚ್ಚು ಕಲ್ಪನೆಯೆಂದು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಕೊಂಕಣದೇಶದಲ್ಲಿ ಹತ್ತು ವರ್ಷದ ಬಾಲಿಕೆಯರ ಕೇಶವಪನ ಮಾಡಿಸಿದ್ದನ್ನು ನಾನು ನೋಡಿದ್ದೇನೆ. ಹೆಂಡತಿಯರು ತೀರಿಕೊಂಡ ಮೇಲೆ ತಮ್ಮ ತಲೆಗಳನ್ನು ಬೋಳಿಸುವುದು ಇಲ್ಲಿ ಹಾಜರಿದ್ದ ಎಷ್ಟು ಜನ ಮಹನೀಯರಿಗೆ ಇಷ್ಟವಿದೆ? ಗ್ರಹಸ್ಥರೇ, ನೀವೇ ಹೇಳಿರಿ. (ಚಪ್ಪಾಳೆ) ಇಂಥಾ ಪ್ರಸಂಗ ಬಂದರೆ ಅತ್ಯಾಚಾರವೆಂದು ನೀವು ತಿಳಿಯಬಹುದು. ಗ್ರಹಸ್ಥರೇ, ಈ ತರದ ಅತ್ಯಾಚಾರವು ನಿಮ್ಮ ಮಗಳಂದಿರ ಮೇಲಾದರೆ ನೀವು ಅವರ ಸಹಾಯಕ್ಕೆ ಹೋಗುವುದು ಬೇಡವೇ? ಇದೇ ಸಭೆಯಲ್ಲಿ ಸರಕಾರವು ನಮ್ಮ ವಾಕ್ಸ್ವಾತಂತ್ರ್ಯವನ್ನು ಅಪಹರಿಸಿದೆ ಎಂಬ ಕೂಗು ಕೇಳಿಬರುತ್ತದೆ. ಆದರೆ ಅಂತಹ ಸ್ವಾತಂತ್ರ್ಯವನ್ನು ಗಂಡಸರು ಮೊದಲು ಸ್ತ್ರೀಯರಿಗೆ ಕೊಡಬೇಕಾಗಿದೆ. ಅನೇಕ ಕಡೆಗಳಲ್ಲಿ ತಮ್ಮ ನೆಂಟರಿಷ್ಟರ ಬಂಧುಬಳಗದವರ ಒತ್ತಾಯಕ್ಕಾಗಿ ತಂದೆ ತನ್ನ ಮಗಳ ಮುಂಡನಕ್ಕೆ ಒಪ್ಪಿಗೆ ಕೊಟ್ಟದ್ದನ್ನು ನಾನು ನೋಡಿದ್ದೇನೆ. ಹೆಣ್ಣು ಮಕ್ಕಳಿಗೆ ಕಾಯಿದೆ ಕಾನೂನುಗಳು ಗೊತ್ತಿಲ್ಲವಾದುದರಿಂದ ಕಾನೂನಿನ ಆಶ್ರಯ ಪಡೆಯುವ ಧೈರ್ಯವಿರುವುದಿಲ್ಲ. ಬಲಪ್ರಯೋಗದ ಮುಂಡನಕ್ಕೆ ಮೂರು ವರ್ಷಗಳ ಕಠಿಣ ಶಿಕ್ಷೆಯನ್ನು ಕಾನೂನು ವಿಧಿಸಿದೆ. ವಿಧವೆಯರು ಕಾನೂನಿನ ಆಶ್ರಯಪಡೆಯುವ ಧೈರ್ಯ ತೋರಿಸುತ್ತಿದ್ದರೆ ಅವರ ಮೇಲೆ ಇಂತಹ ಪ್ರಸಂಗಗಳು ಬರುತ್ತಿರಲಿಲ್ಲ. ಆದುದರಿಂದ ನೀವೆಲ್ಲರೂ ಕಾನೂನಿನ ತಿಳುವಳಿಕೆಯನ್ನು ಜನತೆಯಲ್ಲಿ ಪ್ರಚಾರ ಮಾಡಿರಿ. ಸಮಾಜದಲ್ಲಿಯ ಈ ಕಳಂಕವನ್ನು ತೆಗೆದುಹಾಕಬೇಕೆನ್ನುವವರ ಕೂಡೆ ನನ್ನ ವಾದವಿಲ್ಲ. ನಾನು ಇಷ್ಟೇ ಹೇಳಬಯಸುತ್ತೇನೆ. ಈ ಗೊತ್ತುವಳಿ ಅಂಗೀಕರಿಸಿದ ನಂತರ ಖಾತ್ರಿಯಾಗಿ ಪರಿಪಾಲನೆ ಮಾಡಬೇಕಾಗಿದೆ. ತಮ್ಮ ವಿಧವೆಯರ ಕೇಶವಪನ ಪದ್ಧತಿಯನ್ನು ಒಮ್ಮೆ ನೀವು ನಿಲ್ಲಿಸಿದಿರಿ ಎಂದರೆ ನಿಮ್ಮ ಮನೆಯ ಹೆಂಗಸರು ಹಿಂದೆ ಸ್ಪಾರ್ಟನ್ ಸ್ತ್ರೀಯರು

ಯುದ್ಧಕ್ಕೆ ಹೊರಟ ಪುರುಷರಿಗೆ ಧನುಸ್ಸು ಬಾಣಗಳಿಗಾಗಿ ತಮ್ಮ ತಲೆ ಜುಟ್ಟುಗಳನ್ನು ಕತ್ತರಿಸಿ ಕೊಟ್ಟಂತೆ ಅವರಾಗಿಯೇ ತಮ್ಮ ತಲೆಜುಟ್ಟು ಗಳನ್ನು ಆತ್ಮಸಂತೋಷದಿಂದ ನಿಮಗೆ ದಾನ ಮಾಡಿಬಿಡುವರು. (ಪ್ರಚಂಡ ಕರತಾಡನ).

ಇತ್ತ ಶಾರದಾಸದನದಲ್ಲಿ ಅನಾಥ ಸ್ತ್ರೀಯರ ಸಂಗೋಪನೆಯಲ್ಲಿ ಸರ್ವ ವಿಧದಿಂದ ರಮಾಬಾಯಿ ದುಡಿಯುತ್ತಿದ್ದಳು. ಅಮೇರಿಕದ ಎಸೋಸಿಯೇ ಶನ್‌ನವರು ಕೊಡುತ್ತಿದ್ದ ಧನ ಸಹಾಯದ ಅರ್ಧಾಂಶ ವಾಯಿದೆ ಕಳದು ಹೋಗಿತ್ತು. ಇನ್ನು ಮುಂದೆ ಅಮೇರಿಕದ ಧನಸಹಾಯಪಡೆಯುವುದನ್ನು ಬಿಟ್ಟು ಶಾರದಾಸದನ ಹಿಂದೂದೇಶದ ಜನರಿಂದಲೇ ನಡೆಸಲ್ಪಡಬೇಕೆಂದು ಅನೇಕರೊಡನೆ ರಮಾಬಾಯಿ ಪ್ರಸ್ತಾಪಿಸಿದಳು. ಆದರೆ ಇದು ವಿಫಲ ವಾದುದನ್ನು ನೋಡಿ ತನ್ನ ಹೆಣ್ಣು ಮಕ್ಕಳು ಸ್ವಾವಲಂಬಿಗಳಾಗಿ ಜೀವನ ನಡೆಸುವ ಉದ್ದೇಶದಿಂದ ಪೂಣಾ ಪಟ್ಟಣದಿಂದ ಮೂವತ್ತನಾಲ್ಕು ಮೈಲು ದೂರ (ಖೇಡ್ಗಾಂವ್) ಎಂಬಲ್ಲಿ ನೂರು ಎಕ್ರೆಗಳಷ್ಟು ಬಂಜರು ಸ್ಥಳ ರಮಾ ಬಾಯಿ ಖರೀದಿಸಿದಳು. ಅಲ್ಲಿ ಕೃಷಿ-ಕೈಗಾರಿಕೆಗಳನ್ನು ಮಾಡಿ ತನ್ನ ಹುಡುಗಿ ಯರ ಪೋಷಣೆ ಮಾಡಬಹುದಾಗಿ ಅವಳು ಯೋಚಿಸಿದ್ದಳು. ಅಲ್ಲಿ ಹೋಗಿ ನೆಲಸುವುದಕ್ಕಾಗಿ ಗುಡಿಸಲುಗಳ ನಿರ್ಮಾಣ ಪ್ರಾರಂಭಿಸಿದಾಗ 1897ರಲ್ಲಿ ಮಧ್ಯ ಭಾರತದಲ್ಲಿ ಭಯಂಕರ ಕ್ಷಾಮವು ತಲೆದೋರಿ ಸಹಸ್ರಾರು ಜನರು ಅನ್ನಾಹಾರವಿಲ್ಲದೆ ಮರಣಪಡುತ್ತಾರೆಂಬ ವರ್ತಮಾನ ಪಂ. ರಮಾಬಾಯಿಗೆ ದುಃಖಸಂಕಟವನ್ನುಂಟುಮಾಡಿತು. ಕ್ಷಾಮಕಾಲದ ನಿರಾಶ್ರಿತರ ಕಡೆಗೆ ಗಮನಕೊಡುವುದು ರಮಾಬಾಯಿಗೆ ಅವಶ್ಯವಿರಲಿಲ್ಲ. ಶಾರದಾಸದನ ದಲ್ಲಿಯೇ ಬೇಕಷ್ಟು ಕೆಲಸಗಳಿದ್ದವು. ಸಾವಿರಾರು ನಿರಾಶ್ರಿತರಿಗೆ ಆಶ್ರಯ ಕೊಡುವಷ್ಟು ಹಣದ ಬಲವು ಅವಳಲ್ಲಿರಲಿಲ್ಲ. ಅಷ್ಟು ಶಕ್ತಿಸಾಮರ್ಥ್ಯವೂ ಇರಲಿಲ್ಲ. ನಿರಾಶ್ರಿತರ ಸಹಾಯಕ್ಕೆ ಹೋಗದಿದ್ದರೂ, ಅವಳನ್ನು ದೂರುವ ಹಾಗಿರಲಿಲ್ಲ. ಸಾರ್ವಜನಿಕರು ಮತ್ತು ಸರಕಾರದವರು ಅವರವರ ರೀತಿ ಯಿಂದ ಕ್ಷಾಮ ಪೀಡಿತರಿಗೆ ರಕ್ಷಣೆಕೊಡುತ್ತಿದ್ದರು. ಇನ್ನು ನಾನು ಮಾಡ ತಕ್ಕ ಕೆಲಸವೇನಿದೆ ಎಂತ ಸ್ವಸ್ಥವಾಗಿರಬಹುದಿತ್ತು. ಆದರೆ ರಮಾಬಾಯಿ ತನ್ನ ಜೀವಮಾನದಲ್ಲಿ ಕ್ಷಾಮಕಾಲದ ಯಾತನೆಗಳನ್ನು ಅನುಭವಿಸಿದ್ದಳು. ಉಪವಾಸದಿಂದ ಎಷ್ಟು ಕಷ್ಟ ಬರುತ್ತದೆ ಎಂಬುದು ಅವಳಿಗೆ ತನ್ನ ಪೂರ್ವ

ಚರಿತ್ರೆಯಿಂದ ತಿಳಿದುಬಂದಿತ್ತು. ಹತ್ತು ದಿನಗಳಲ್ಲಿ ಕಾಡುಸೊಪ್ಪು, ಹಣ್ಣುಗಳಿಂದ ಮದ್ರಾಸಿನ ಕ್ಷಾಮಕಾಲವನ್ನು ಅವರು ಕಳೆದಿದ್ದರು. ಒಂದು ರೊಟ್ಟಿಯ ಚೂರಿಗಾಗಿ ನೆರೆಮನೆಯಲ್ಲಿ ಬಾಡಿದ ಮುಖದಿಂದ ತನ್ನ ಭಾವ ತೋರಿಸುವುದು ಎಷ್ಟು ಕಷ್ಟಕರ ಪ್ರಸಂಗ? ಇದರ ಪ್ರತ್ಯಕ್ಷಾನುಭವ ರಮಾಬಾಯಿಗಿದ್ದಿತು. ಹೀಗಾಗಿ ಮಧ್ಯಭಾರತದ ಕ್ಷಾಮವಾರ್ತೆ ತಿಳಿದೊಡನೆ ಅವಳಿಗೆ ಅತ್ಯಂತ ದುಃಖವಾಯಿತು. ಕಡೆಗೆ ನಿರಾಶ್ರಿತರ ಸಹಾಯಕ್ಕಾಗಿ ಮಧ್ಯಭಾರತದ ಕಡೆಗೆ ಧಾವಿಸಿದಳು.

1897ರಲ್ಲಿ ಮಧ್ಯಭಾರತದಲ್ಲಿ ಸಂಭವಿಸಿದ ದುರ್ಭಿಕ್ಷವು ಮಳೆಗಾಲದಲ್ಲಿ ಪ್ರಾಪ್ತವಾಯಿತು. ಸಾವಿರಾರು ಜನರು ಆಶ್ರಯವಿಲ್ಲದೆ ಕಾಡುಗುಡ್ಡೆಗಳಲ್ಲಿ ತಿರುಗಾಡುತ್ತಿದರು. ಅವರಿಗೆ ಮೈತುಂಬಾ ಬಟ್ಟೆಗಳಿರಲಿಲ್ಲ. ಹೊಟ್ಟೆಯಲ್ಲಿ ಹಸಿವೆಯ ಜ್ವಾಲೆ, ಹೊರಗಿನಿಂದ ಮಳೆಗಾಳಿಗಳು ಬಿರುಸಾಗಿ ಮೈ ನಡುಗುತ್ತಿತ್ತು. ಜನರು ಸಂಕಟ ತಡೆಯಲಾರದೆ ಮರ, ಗೋಡೆಗಳಿಗೆ ಒರಗಿ ನಿಲ್ಲುತ್ತಿದ್ದರು. ಮರಣೋನ್ಮುಖರಾದ ತರುಣರು, ಮುದುಕರು, ಮಕ್ಕಳು, ಹೆಂಗಸರು, ಹೀಗೆ ಸಾವಿರಾರು ಜನರಿದ್ದರು. ಕೆಲವರು ತಮ್ಮ ಮಕ್ಕಳನ್ನು ಒಂದು ರೂಪಾಯಿ, ಅದಕ್ಕಿಂತ ಕಡಿಮೆಗಾದರೂ ವಿಕ್ರಯಿಸುತ್ತಿದ್ದರು. ಕೆಲವು ವೇಳೆ ಆಹಾರ ಸಿಕ್ಕಿದರೂ ತಮ್ಮ ಪಾಲಿನದ್ದನ್ನು ತಿಂದು ಮಕ್ಕಳ ಪಾಲಿನ ಆಹಾರವನ್ನು ದೊಡ್ಡವರೇ ತಿನ್ನುತ್ತಿದ್ದರು. ಈ ದೆಸೆಯಿಂದ ಸಣ್ಣ ಮಕ್ಕಳ ಸ್ಥಿತಿ ಶೋಚನೀಯವಾಯಿತು. ಕೆಲವು ಕಡೆಗಳಲ್ಲಿ ಸರಕಾರದ ರಿಲೀಫ್ ಕಾಮಗಾರಿಗಳಿದ್ದುವು. ಅಲ್ಲಿಯೂ ನರಕಯಾತನೆಯೇ ಹೊರತು ವ್ಯವಸ್ಥೆ ಸರಿಯಿರಲಿಲ್ಲ. ಸರಕಾರೀ ಅಧಿಕಾರಿಗಳು, ಡಾಕ್ಟರರುಗಳು, ಕಾಮಗಾರಿಗಳಿಗೆ ಭೇಟಿಕೊಟ್ಟು ಹಿಂದಿರುಗುವಾಗಲೇ ಅನಾಥ ಅಬಲೆಯರ ಮಾನಭಂಗವಾಗುತ್ತಿದ್ದಿತು. ರಿಲೀಫ್ ಕಾಮಗಾರಿಗಳ ಜಾಗವು ತುಂಬಾ ಅಸ್ವಚ್ಛವಿದ್ದಿತು. ಅಲ್ಲಿ ಸಾಂಕ್ರಾಮಿಕ ರೋಗಗಳು ಉಂಟಾಗಿದ್ದುವು. ನಿರಾಶ್ರಿತರು ಇದ್ದಲಿನ ರಾಶಿಗಳಲ್ಲಿ ಮಲಗುತ್ತಿದ್ದರು. ಸರಕಾರದಿಂದ ಅವರಿಗೆ ಹಿಟ್ಟು, ಉಪ್ಪು ದೊರೆಯುತ್ತಿತ್ತು. ಸಣ್ಣ ಮಕ್ಕಳಿಂದ ರೊಟ್ಟಿ ಮಾಡಿ ತಿನ್ನಲು ಸಾಧ್ಯವಿರಲಿಲ್ಲ. ದೊಡ್ಡವರನ್ನು ಆಶ್ರಯಿಸಿದರೆ ಮಕ್ಕಳ ಆಹಾರವನ್ನು ಅವರೇ ಸ್ವಹಾ ಮಾಡುತ್ತಿದ್ದರು. ನಿರಾಶ್ರಿತರು ಒಬ್ಬರನ್ನೊಬ್ಬರು ಬಹು ಕ್ರೂರತನದಿಂದ ನೋಡುತ್ತಿದ್ದರು. ಹೊಟ್ಟೆಗಿಲ್ಲದೆ ಮಕ್ಕಳು ಸಾಯುವುದು

ತಂದೆ-ತಾಯಿಗಳಿಗೆ ಏನೂ ದುಃಖಕರವಾಗುತ್ತಿರಲಿಲ್ಲ. ಸ್ತ್ರೀಯರ ಮಾನ ಭಂಗ ಹಾಗೂ ದೂರ ದೇಶಗಳಿಗೆ ಸಾಗಿಸಿ ಮಾರುವುದು. ಮುಂಬಯಿ, ಕಲ್ಕತ್ತಾ ಕಡೆಯ ಪುಂಡರಿಗೆ ಕ್ಷಾಮ ಕಾಲದಲ್ಲಿ ಇದೊಂದು ವೃತ್ತಿಯೇ ಆಗಿಹೋಗಿತ್ತು.

ಇಂಥಾ ಭಯಂಕರ ಕ್ಷಾಮ ಕಾಲದ ದುರವಸ್ಥೆಯನ್ನು ನೋಡಿ ಪಂ. ರಮಾಬಾಯಿಗೆ ಕರುಣೆಯಿಂದ ಎದೆ ಕರಗಿತು. ನಿರಾಶ್ರಿತರನ್ನು ನರಕ ಯಾತನೆಗಳಿಂದ ಬಿಡಿಸಿ ಅವರ ಯೋಗಕ್ಷೇಮದ ದೃಢನಿರ್ಧಾರದಿಂದ ಅನ್ನ, ಬಟ್ಟೆಗಳನ್ನೂ, ದವಸಧಾನ್ಯಗಳನ್ನೂ ಎಂಟು ಎತ್ತಿನ ಗಾಡಿಗಳಲ್ಲಿ ಸಾಗಿಸಿ ಹಂಚಿದಳು. ಅವರ ಸಂಕಷ್ಟಗಳನ್ನು ವಿಚಾರಿಸುತ್ತಾ ಬುಂದೇಲಖಂಡ, ಸೋಹಾಗರಪುರ, ಜಬಲಪೂರ್, ಮುಂತಾದ ಕಡೆಗಳಲ್ಲಿ ಸಂಚರಿಸಿದಳು. ಕ್ಷಾಮಪೀಡಿತ ಪ್ರದೇಶದ ಸಂಚಾರದಲ್ಲಿ 3,000 ನಿರಾಶ್ರಿತರನ್ನು ಕರಕೊಂಡು ಹಿಂದಿರುಗಿದಳು. ಇಷ್ಟು ಮಂದಿ ನಿರಾಶ್ರಿತರಿಗೆ ಅನ್ನವಸತಿಗಳನ್ನು ಒದಗಿಸುವುದು ಸಾಮಾನ್ಯ ಕೆಲಸವಲ್ಲ. ದೇವರ ಮೇಲೆ ಭಾರ ಹಾಕಿ ನಿರಾಶ್ರಿತರ ಪುನರ್ವ್ಯವಸ್ಥೆಯನ್ನು ರಮಾಬಾಯಿ ಪ್ರಾರಂಭಿಸಿದಳು. ಈ ಮಹಾಕಾರ್ಯಕ್ಕೆ ಸರಕಾರದ ಬೆಂಬಲವಾಗಲೀ ಶ್ರೀಮಂತರಿಂದ ಧನಸಹಾಯವಾಗಲೀ ಸಿಗುತ್ತಿರಲಿಲ್ಲ. ರಮಾಬಾಯಿಯ ಸೇವಾಕಾರ್ಯಗಳನ್ನು ತಿಳಿದ ವಿದೇಶಗಳ ದಾನಶೂರರು ಸಹಾಯಕೊಡುತ್ತಿದ್ದರು.

ನಿರಾಶ್ರಿತರನ್ನು ತಂದು ಪೂಣಾ ಪಟ್ಟಣವನ್ನು ಸೇರುವಾಗ 1897ರ ಬೇಸಿಗೆ ಕಾಲದಲ್ಲಿ ಪ್ಲೇಗು ಹಾವಳಿಯಿಂದ ಪೂಣಾ ಪಟ್ಟಣದಲ್ಲಿ ಹಾಹಾಕಾರ ವೆದ್ದಿತು. ರೋಗಗ್ರಸ್ಥರಿಗೆ ಚಿಕಿತ್ಸೆ ಮಾಡುವ ನೆವನದಿಂದ ಬಿಳಿಯ ಅಧಿಕಾರಿಗಳು, ಅವರ ಹಸ್ತಕರೂ, ಸಾರ್ವಜನಿಕರನ್ನು ಕ್ರೂರ ರೀತಿಯಿಂದ ಹಿಂಸಿಸ ತೊಡಗಿದರು. ಹಿಂಸಾಚಾರವನ್ನು ಸಹಿಸಲಾರದೆ 'ರ್‍ಯಾಂಡ್ ಸಾಹೇಬ್' ಎಂಬ ಬಿಳಿಯ ಅಧಿಕಾರಿಯನ್ನು ಚಾಫೇಕರ ಬಂಧುಗಳು ಗುಂಡಿಕ್ಕಿ ಯಮ ಸದನಕ್ಕೆ ಕಳುಹಿಸಿದ್ದರು. ಸರಕಾರಿ ಅಧಿಕಾರಿಗಳು ರೋಗಗ್ರಸ್ಥರೊಂದಿಗೆ ಆರೋಗ್ಯದಿಂದಿದ್ದ ಜನರನ್ನೂ ಬಲವಂತದಿಂದ ದವಾಖಾನೆಗಳಿಗೆ ಸೇರಿಸುತ್ತಿದ್ದರು. ದವಾಖಾನೆಗಳು ಹೊರಗಿನ ದೇಖಾವೆಗೆ ಚೊಕ್ಕಟ ತೋರುತ್ತಿದ್ದರೂ ಒಳಗೆ ಮಾತ್ರ ನರಕಕೂಪಗಳಂತಿದ್ದವು. ದವಾಖಾನೆಗಳಲ್ಲಿ ಸೇರಿದ ಅನೇಕ ತರುಣಿಯರು ಪುಂಡರಿಂದ ಅಪಹಾರವಾಗುತ್ತಿದ್ದರು.

ಸರಕಾರೀ ಅಧಿಕಾರಿಗಳು ಪುಂಡಾಟಿಕೆಗಳ ಕಡೆಗೆ ಗಮನಕೊಡುತ್ತಿರಲಿಲ್ಲ. ಕಾಣೆಯಾದ ಅಬಲೆಯರನ್ನು ಸಮ್ಮಂಧಪಟ್ಟವರು ವಿಚಾರಿಸುವಾಗ ಅವರು ಮೃತಪಟ್ಟಿದ್ದರು ಇಲ್ಲವೆ ಆಸ್ಪತ್ರೆಯಿಂದ ಬಿಡುಗಡೆಯಾಗಿ ಹೊರಟುಹೋಗಿದ್ದರು ಎಂದುತ್ತರ ಸಿಗುತ್ತಿತ್ತು. ಶಾರದಾಸದನದಲ್ಲಿದ್ದ ನಿರಾಶ್ರಿತ ಹುಡುಗಿಯೊಬ್ಬಳು ಆಸ್ಪತ್ರೆಗೆ ಸೇರಿ ಕಾಣೆಯಾಗಿದ್ದಳು. ಈ ಸಂದರ್ಭದಲ್ಲಿ ರಮಾಬಾಯಿಗೆ ಸುಮ್ಮನಿರಲು ಸಾಧ್ಯವಾಗಲಿಲ್ಲ. ಪ್ಲೇಗು ಆಸ್ಪತ್ರೆಗಳಲ್ಲಿಯ ಅನಾಚಾರಗಳನ್ನೂ, ಸರಕಾರಿ ಅಧಿಕಾರಿಗಳ ದಬ್ಬಾಳಿಕೆಯನ್ನೂ ವರ್ಣಿಸಿ ದೀರ್ಘವಾದ ಒಂದು ಲೇಖನವನ್ನು ಪಂ. ರಮಾಬಾಯಿ ಬರೆದು ಮುಂಬಯಿಯ "ಬಾಂಬೆ ಗಾರ್ಡಿಯನ್" ಪತ್ರಿಕೆಯಲ್ಲಿ ಪ್ರಕಟಿಸಿದಳು. ಇದರ ಪ್ರತಿಧ್ವನಿಯು ಲಂಡನಿನ ಪಾರ್ಲಿಮೆಂಟಿನ ತನಕ ಮುಟ್ಟಿತು. ಇಂಗ್ಲೆಂಡಿನ ರಾಜಕೀಯ ಪಕ್ಷಗಳು ಬ್ರಿಟಿಷ್ ಅಧಿಕಾರಿಗಳ ವರ್ತನೆಯನ್ನು ಖಂಡಿಸಿದವು. ಪೂಣಾ ಪಟ್ಟಣದ ಮುಖಂಡರನೇಕರಿಗೆ ಸರಕಾರೀ ಅಧಿಕಾರಿಗಳ ಖಂಡನೆಯ ಫಲವಾಗಿ ಸೆರೆಮನೆವಾಸ ಸಿಕ್ಕಿತು. ದೈವವಶಾತ್ ರಮಾಬಾಯಿಗೆ ಮಾತ್ರ ಸೆರೆಮನೆಯ ವಾಸ ತಪ್ಪಿತು.

ಖೇಡ್‌ಗಾಂವ್‌ನಲ್ಲಿ ರಮಾಬಾಯಿ ನೂರು ಎಕ್ರೆ ಜಾಗ ಖರೀದಿಸಿದಳೆಂದು ಹಿಂದೆ ಹೇಳಿದೆಯಷ್ಟೇ ಇಲ್ಲಿಯ ವಸತೀ ನಿರ್ಮಾಣ ಕಾರ್ಯವು ಶಾರದಾಸದನದ ವ್ಯವಸ್ಥೆಯಿಂದಲೂ ಜಾಸ್ತಿಯಾಗಿದ್ದಿತು. ಈ ಮಧ್ಯೆ ಶಾರದಾಸದನದ ಜನರನ್ನು ಊರ ಹೊರಗೆ ಸಾಗೀಸಬೇಕಾಗಿ ಪ್ಲೇಗು ನಿಯಂತ್ರಣಾಧಿಕಾರಿಗಳ ಆಜ್ಞೆ ಹೊರಟಿತು. ಇದರ ದೆಸೆಯಿಂದ ಶಾರದಾಸದನದ ಆಸ್ತಿ ಕಟ್ಟೋಣಗಳನ್ನು ವಿಕ್ರಯಿಸಿ ಅಮೇರಿಕದ ಎಸೋಸಿಯೇಶನಿನ ಅನುಮತಿಯಿಂದ ಶಾರದಾಸದನವನ್ನು ಖೇಡ್‌ಗಾಂವಿಗೆ ವರ್ಗಾಯಿಸಿದಳು.

ಈ ವೇಳೆಗೆ ಅಮೇರಿಕದ ರಮಾಬಾಯಿ ಎಸೋಸಿಯೇಶನ್ ಶಾರದಾಸದನಕ್ಕೆ ಕೊಡುತ್ತಿದ್ದ ಆರ್ಥಿಕ ಸಹಾಯದ ಅವಧಿಯು ಮುಗಿದುಹೋಗಿತ್ತು. ಹೀಗಾಗಿ ರಮಾಬಾಯಿ ಇನ್ನೊಮ್ಮೆ ಅಮೇರಿಕಕ್ಕೆ ಹೊರಡುವುದೆಂದು ನಿಶ್ಚಯಿಸಿದಳು. ಅಮೇರಿಕಕ್ಕೆ ಹೋಗುವ ರಮಾಬಾಯಿಯ ಉದ್ದೇಶವು ಎಸೋಸಿಯೇಶನನ್ನು ಪುನರುಜ್ಜೀವನಗೊಳಿಸಿ ಹಿಂದಿನಂತೆಯೇ ಆರ್ಥಿಕ ಸಹಾಯ ಪಡೆಯುವದಾಗಿತ್ತು. ಅಲ್ಲದೆ ಶಾರದಾಸದನದ ಹತ್ತು ವರ್ಷಗಳ ಕಾರ್ಯಕಲಾಪಗಳ ವರದಿಯನ್ನು ಕೊಡಬೇಕಾಗಿತ್ತು. ಹಿಂದಿನಂತೆಯೇ



[illegible]
ಕುಮಾರಿ ಮನೋರಮಾ.

ಸಲಹಾ ಸಮಿತಿಯ ಬಂಧನವೂ ರಮಾಬಾಯಿಗೆ ಬೇಡವಾಗಿತ್ತು. ಈ ಕಾರಣಗಳಿಂದ ಎಸೋಸಿಯೇಶನಿನ ನಿಯಮಾವಳಿಯನ್ನು ಬದಲಾಯಿಸುವ ಅವಶ್ಯಕತೆ ಪ್ರಾಪ್ತವಾಯಿತು. ಮೇಲೆ ಹೇಳಿದಂತೆ ಶಾರದಾಸದನದ ವ್ಯವಸ್ಥೆಯನ್ನು ಸುಂದರೀಬಾಯಿ ಪವಾರ್ ಎಂಬವಳ ವಶಕ್ಕೊಪ್ಪಿಸಿ 1898ರ ಆದಿಯಲ್ಲಿ ರಮಾಬಾಯಿಯು ಅಮೇರಿಕಕ್ಕೆ ಹೊರಟಳು.

೧೬. ಮನೋರಮಾ

ಪಂಡಿತಾ ರಮಾಬಾಯಿಯ ಏಕಮಾತ್ರ ಪುತ್ರಿಯಾದ ಮನೋರಮೆಯ ಜೀವನ ಪರಿಚಯ ಈ ಅಧ್ಯಾಯದಲ್ಲಿ ಕೊಡಬಯಸುತ್ತೇವೆ. ಮನೋರಮೆಯ ವಯಸ್ಸು ಆಗ ಎಂಟು ತಿಂಗಳು. ಕಾಚಾರದಿಂದ ಮದ್ರಾಸು, ಅಲ್ಲಿಂದ ಪೂಣಾ ವರೆಗೆ ಪರಿಭ್ರಮಣವಾಯಿತು. ರಮಾಬಾಯಿ ಆರು ತಿಂಗಳ ಮಗುವಿದ್ದಾಗಲೇ ಅನಂತ ಶಾಸ್ತ್ರಿಯು ಗಂಗಾಮೂಲದಿಂದ ದೇಶಸಂಚಾರಕ್ಕೆ ಹೊರಟಿದ್ದನು. ಇವರ ಪರಂಪರೆಯೇ ದೇಶಸಂಚಾರದ ಅಭ್ಯಾಸದಿಂದ ಕೂಡಿತ್ತು. ಬೇರೆ ಬೇರೆ ದೇಶಗಳ ಹವಾಗುಣದಿಂದ ಮನೋರಮೆಯ ದೇಹಪ್ರಕೃತಿಯ ಮೇಲೆ ಯಾವ ಪರಿಣಾಮವೂ ಆಗಿರಲಿಲ್ಲ. ಪೂಣಾದಲ್ಲಿ ಒಂದೆರಡು ವರ್ಷವಿದ್ದು ರಮಾಬಾಯಿ ಮನೋರಮೆಯೊಂದಿಗೆ ಇಂಗ್ಲೆಂಡಿಗೆ ಹೋದಳು. ಮೂರು ವರ್ಷ ಇಂಗ್ಲೆಂಡಿನಲ್ಲಿದ್ದು ಮೂರು ವರ್ಷ ಪ್ರಾಯದ ಮನೋರಮೆಯನ್ನು ಕರಕೊಂಡು ಅಮೇರಿಕಾ ದೇಶಕ್ಕೆ ಪ್ರಯಾಣ ಬೆಳೆಸಿದಳು. ಕೆಲವು ಕಾಲದ ನಂತರ ಮನೋರಮೆಯನ್ನು ಹಡಗದ ಪರಿಚಾರಿಕೆಯೊಂದಿಗೆ ಇಂಗ್ಲೆಂಡಿಗೆ ಕಳುಹಿಸಿದಳು. ಅಮೇರಿಕದಲ್ಲಿಯ ಪ್ರವಾಸ, ವಿದ್ಯಾರ್ಜನೆ ಮತ್ತು ವ್ಯಾಖ್ಯಾನಗಳು ಸುಸೂತ್ರವಾಗಿ ಆಗಬೇಕೆಂದು ಪಂ. ರಮಾಬಾಯಿ ಈ ರೀತಿ ಮಾಡಬೇಕಾಯಿತು. ಮನೋರಮೆಯ ಶಿಕ್ಷಣವು ಕ್ರಮವಾಗಿ ಮುಂದರಿಯಬೇಕೆಂಬ ಉದ್ದೇಶವೂ ಇತ್ತು.

ರಮಾಬಾಯಿ ಅಮೇರಿಕದ ಯಾತ್ರೆ ಪೂರೈಸಿ ಜಪಾನ ಮಾರ್ಗವಾಗಿ ಭಾರತಕ್ಕೆ ಬರುವಾಗ ತಾಯಿಯ ಭೇಟಿಗಾಗಿ ಮನೋರಮೆ ಹಿಂದೂದೇಶಕ್ಕೆ ಬಂದಿದ್ದಳು. ಮನೋರಮೆಯ ಬಾಲ್ಯ ಇಂಗ್ಲೆಂಡಿನಲ್ಲಿ ಕಳೆದುದರಿಂದ ಅವಳಿಗೆ ಇಂಗ್ಲಿಷು ರೀತಿನೀತಿಗಳು ಅಭ್ಯಾಸವಾಗಿಬಿಟ್ಟಿದ್ದುವು. ಮರಾಠಿ ಮಾತು ಅವಳಿಗೆ ಬರುತ್ತಿಲ್ಲವಾದರೂ ಮಹಾರಾಷ್ಟ್ರದ ಧ್ಯೇಯವಾದ,

ಬಂಗಾಲದ ಕೌಶಲ್ಯ ಈ ಗುಣಗಳು ಅಂಟಿಕೊಂಡಿದ್ದುವು. ಮನೋರಮೆಯು ತಂದೆ ಬಿಪೀನ್ ವಿಹಾರಿ ಮೇಧಾವಿಯನ್ನು ಕಂಡವಳಲ್ಲವಾದರೂ ಅವನ ದಿನಚರ್ಯೆ ಪುಸ್ತಕದ ಒಂದು ಪತ್ರವನ್ನು ಪ್ರೀತಿಯಿಂದ ಜೋಪಾನವಾಗಿ ಹತ್ತಿರ ಇಟ್ಟುಕೊಂಡಿದ್ದಳು. ಆ ಪತ್ರದಲ್ಲಿ ಹೀಗೆ ಬರೆದಿತ್ತು: ಶಕೆ 1803 ವೃಷಭನಾಮ ಸಂವತ್ಸರೇ ಚೈತ್ರ ಕೃಷ್ಣ ದ್ವಿತೀಯಾ ಶನಿವಾರ 16–4–1881 (ಮನೋರಮೆಯ ಜನ್ಮ).

ರಮಾಬಾಯಿ ಇಂಗ್ಲೆಂಡಿಗೆ ಹೋಗಿ 'ವಾಂಟೇಜ'ದಲ್ಲಿ ವಿದ್ಯಾಭ್ಯಾಸ ಶುರುಮಾಡಿದಳು. ಅಲ್ಲಿಯ 'ಕಾನ್ವೆಂಟಿ'ನ (ಮಠದ) ನಿವಾಸಿಗಳಾದ ಕನ್ಯೆಯರು ಚಿಕ್ಕ ಮನೋರಮೆಯನ್ನು ಪ್ರೀತಿಯಿಂದ ಸಲಹಿದರು. ಸಣ್ಣ ಮಕ್ಕಳನ್ನು ಮಠದಲ್ಲಿ ಎಂದೂ ಇರಲು ಬಿಡುತ್ತಿರಲಿಲ್ಲ. ಸರ್ವಸಂಗ ಪರಿತ್ಯಾಗ ಮಾಡಿದ ಕನ್ಯೆಯರೇ ಅಲ್ಲಿರುತ್ತಿದ್ದರು. ಭಗವಾನ್ ಕ್ರಿಸ್ತನ ಸೇವೆ ಮತ್ತು ಜಗತ್ತಿನ ಕಲ್ಯಾಣಕ್ಕಾಗಿ ದುಡಿಯುವುದೇ ಆ ಮಠವಾಸಿನಿಯರ ಜೀವನಧ್ಯೇಯವಾಗಿತ್ತು. ರಮಾಬಾಯಿಯ ವಿಲಕ್ಷಣ ವ್ಯಕ್ತಿಪ್ರಭಾವದಿಂದ ಮನೋರಮೆಯನ್ನು 'ಕಾನ್ವೆಂಟಿ'ನಲ್ಲಿ ಸಾಕಿ ಸಲಹಿದರು. ಬಾಲ್ಯದಲ್ಲಿ ಮನೋರಮೆಯು ಕ್ಷೀಣವಾದ ದೇಹಗಾತ್ರವುಳ್ಳವಳಾದುದರಿಂದ ಅವಳ ಪೋಷಣೆಯ ಕಡೆಗೆ ಭಗಿನೀ ಸಮಾಜವು ಹೆಚ್ಚಿನ ಎಚ್ಚರ ವಹಿಸಬೇಕಾಯಿತು. ಇಂಗ್ಲೆಂಡಿನ ಶ್ರೀಮಂತ ಮನೆತನದ ಉಚ್ಚಶಿಕ್ಷಣ ಹೊಂದಿ ಪದವೀಧರರಾದ ಕನ್ಯೆಯರು ಅಲ್ಲಿರುತ್ತಿದ್ದರು. ಪರಕೀಯರಾದರೂ ಮನೋರಮೆಯನ್ನು ತಾಯಿಗೆ ಸಮಾನವಾದ ಪ್ರೀತಿಯಿಂದ ಸಾಕುತ್ತಿದ್ದರು.

ಮಠವಾಸಿನಿಯರಲ್ಲಿ 'ಸಿಸ್ಟರ್ ಜಿರಾಲ್ಡೀನ್' ಎಂಬಾಕೆಯು ಮನೋರಮೆಯನ್ನು ಅತ್ಯಂತ್ಯ ಪ್ರೀತಿಸುತ್ತಿದ್ದಳು. ಮನೋರಮೆ ಅವಳನ್ನು (Dear Old Grandma) ಪ್ರೀತಿಯ ವೃದ್ಧ ಅಜ್ಜಮ್ಮ ಎಂದು ಕರೆಯುತ್ತಿದ್ದಳು. ಜಿರಾಲ್ಡೀನಳು ಮನೋರಮೆಗೆ ತೊಡೆಯ ಮೇಲೆ ಕುಳ್ಳಿರಿಸಿ ಕ್ರಿಸ್ತನ ಉಪದೇಶ ಸಾರದ ಕಥೆಗಳನ್ನು ಬಾಯಿಪಾಠವಾಗಿ ಹೇಳಿಕೊಡುತ್ತಿದ್ದಳು. ರಮಾಬಾಯಿ ಮನೋರಮೆಯನ್ನು 'ಬಾಬಿ' ಎಂತ ಕರೆಯುತ್ತಿದ್ದಳು. 'ಬೇಬಿ' ಎಂಬ ಇಂಗ್ಲಿಷು ಪದದ ರೂಪಾಂತರವಾಗಿ 'ಬಾಬಿ' ಎಂದಾಯಿತು ಎಂಬ ಅಭಿಪ್ರಾಯವನ್ನು ರಮಾಬಾಯಿಯ ಕೆಲವು ಚರಿತ್ರಲೇಖಕರು ವ್ಯಕ್ತಪಡಿಸುತ್ತಾರೆ. ಇದು ಸರಿಯೆಂತ ತೋರುವುದಿಲ್ಲ. ರಮಾಬಾಯಿ ಬರೆದ "ಸ್ತ್ರೀ

ಧರ್ಮನೀತಿ" ಎಂಬ ಮರಾಠಿ ಪುಸ್ತಕದಲ್ಲಿ ಮತ್ತು ಪತ್ರ ವ್ಯವಹಾರಗಳಲ್ಲಿ ದಕ್ಷಿಣ ಕನ್ನಡ ನಿವಾಸಿಗಳಾದ ಚಿತ್ಪಾವನರ ಮನೆಮಾತಾಗಿರುವ ಹಳೇ ಮರಾಠಿಯ ಪ್ರಭಾವ ಕಂಡುಬರುತ್ತದೆ. ಅನಂತ ಶಾಸ್ತ್ರಿಗೆ ದೇಶವೇ ತನ್ನ ಮನೆಯಂತಿದ್ದರೂ, ಮನೆಮಾತಾಗಿರುವ ಹಳೇ ಮರಾಠಿಯನ್ನು ಅವನು ಬಿಟ್ಟಿರಲಿಕ್ಕಿಲ್ಲ. ಈಗಲೂ ದಕ್ಷಿಣ ಕನ್ನಡದಲ್ಲಿ ಚಿತ್ಪಾವನ ಕುಟುಂಬಗಳಲ್ಲಿ ಹೆಣ್ಣು ಮಕ್ಕಳಿಗೆ ಬಾಬಿ ಎಂಬ ಹೆಸರಿಟ್ಟು ಅಕ್ಕರೆಯಿಂದ ಕರೆಯುವ ಸಂಪ್ರದಾಯವಿದೆ.

ಮನೋರಮೆಯು ದೊಡ್ಡವಳಾಗುತ್ತ ಬಂದ ಹಾಗೆ ಪ್ರಾಥಮಿಕ ಶಿಕ್ಷಣ ಮುಗಿದು ಮಾಧ್ಯಮಿಕ ಶಾಲೆಯಲ್ಲಿ ಪ್ರವೇಶಿಸಿದಳು. ಅವಳ ಪ್ರಾರಂಭ ವಿದ್ಯಾಭ್ಯಾಸವು ಇಂಗ್ಲೆಂಡ್, ಅಮೇರಿಕಗಳಲ್ಲಿಯೇ ಆಯಿತು. ಒಮ್ಮೊಮ್ಮೆ ಅವಳು ಹಿಂದೂದೇಶಕ್ಕೆ ಬಂದು ತಾಯಿಯನ್ನು ಕಾಣುತ್ತಿದ್ದಳು. ಕೆಲವು ಸಮಯ ಪುಣೆಯ ಶಾರದಾಸದನದ, 'ಎಫಿಫನಿ' ಕನ್ಯಾ ಶಾಲೆಯಲ್ಲಿ ಇದ್ದಳು. 1894 ರಲ್ಲಿ ಮನೋರಮೆ ಪುನಃ ವಿದೇಶಕ್ಕೆ ಹೋದಳು. ಕಾಲೇಜಿನ ಶಿಕ್ಷಣ ಅಲ್ಲಿಯೇ ಪೂರೈಸುವುದೆಂತ ಅವಳ ಮನಸ್ಸಿದ್ದಿತು. ಅಮೇರಿಕದಲ್ಲಿ ಮೂರು ವರ್ಷಗಳ ಶಿಕ್ಷಣ ಆಯಿತೆಂಬ ವೇಳೆಗೆ ಪಂಡಿತಾ ರಮಾಬಾಯಿ ಒಮ್ಮೆಲೆ ಅಸ್ವಸ್ಥಕ್ಕೀಡಾದಳು. ಶಾರದಾಸದನವು ಆಗ ಖೇಡ್‌ಗಾಂವ್‌ನಲ್ಲಿದ್ದಿತು. ತನ್ನ ವಿದ್ಯಾಭ್ಯಾಸ ಮಧ್ಯದಲ್ಲಿಯೇ ಬಿಟ್ಟು ಮನೋರಮೆಯು 1900ರಲ್ಲಿ ಖೇಡ್‌ಗಾಂವಿಗೆ ಬಂದಳು.

ಶಾರದಾಸದನದ ಕಾರ್ಯಕಲಾಪಗಳು ಆಗ ಹೆಚ್ಚುತ್ತಾ ಬಂದಿದ್ದವು. ಅಲ್ಲಿ ಹುಡುಗಿಯರ ಮಾಧ್ಯಮಿಕ ಶಾಲೆಯು ಪ್ರಾರಂಭವಾಗಿದ್ದಿತು. ವಿದೇಶದಲ್ಲಿರುವಾಗ ಪಡೆದ ಶಿಕ್ಷಣದ ಅನುಭವದಿಂದಾಗಿ ಶಾರದಾಸದನದ ಜವಾಬ್ದಾರಿಯನ್ನು ಮನೋರಮೆ ವಹಿಸಿಕೊಂಡಳು. ಕಾಲೇಜು ಶಿಕ್ಷಣ ಪಡೆದು ಪದವೀಧರಳಾಗಬೇಕೆಂಬ ಇಚ್ಛೆಯು ಮನೋರಮೆಗಿದ್ದಿತು. ಖೇಡ್‌ಗಾಂವಿನ ಕೆಲಸಗಳನ್ನು ಹೊತ್ತ ಹಾಗೆಯೇ ಪೂನಾದ "ಡೆಕ್ಕನ್ ಕಾಲೇಜ"ನ್ನು ಸೇರಿ ಕ್ರಮವಾಗಿ ಶಿಕ್ಷಣ ಪಡೆಯಲು ಪ್ರಾರಂಭಿಸಿದಳು. ಖೇಡ್‌ಗಾಂವ್‌ದಿಂದ ಪುಣೆಗೆ ಹೋಗಿಬರುವ ಆರ್ವತ್ತ-ನಾಲ್ಕು ಮೈಲು ದೂರದ ದಾರಿಯನ್ನು, ತನ್ನ ಕಾರನ್ನು ತಾನೇ ನಡೆಸಿ ದಿನಂಪ್ರತಿ ದಾಟುತ್ತಿದ್ದಳು. ಮನೋರಮೆಯ ಶಿಕ್ಷಣವು ಬಿ.ಎ. ತನಕ ಮುಂದುವರಿಯಿತು. ಎಮ್.ಎ. ಓದಬೇಕಾಗಿ ಅವಳ

ಇಚ್ಛೆಯಾಗಿತ್ತು. ಆದರೆ ರಾತ್ರಿ-ಹಗಲೆನ್ನದೆ ಮಾಡುತ್ತಿದ್ದ ಶ್ರಮದಿಂದಾಗಿ ಅವಳ ಆರೋಗ್ಯವು ಕೆಟ್ಟಿತು. ಕಡೆಗೆ ಮುಂದಿನ ಶಿಕ್ಷಣದ ವಿಚಾರ ಬಿಡಬೇಕಾಯಿತು. ಮನೋರಮೆಗೆ ತಾಯಿಯ ಮೇಲೆ ತುಂಬಾ ಪ್ರೀತ್ಯಾದರಗಳು ಇದ್ದುವು. ಒಮ್ಮೆ ಅಮೇರಿಕದಲ್ಲಿರುವಾಗ ಅವಳನ್ನು ಹೀಗೆ ಪ್ರಶ್ನಿಸಿದರು: ಅಮೇರಿಕದಲ್ಲಿ ನಿನಗೆ ಪ್ರೀತಿಯ ವಸ್ತು ಯಾವುದು? ಆಗ ಅವಳು ಎಲ್ಲದಕ್ಕಿಂತಲೂ ನನಗೆ ನನ್ನ ತಾಯಿಯ ಮೇಲೆ ಹೆಚ್ಚು ಪ್ರೀತಿ ಎಂದುತ್ತರಿಸಿದಳು. ಹೀಗಾಗಿಯೇ ತನ್ನ ಮಾತೆಯ ಸಹಾಯಕ್ಕಾಗಿ, ತನ್ನ ಆರೋಗ್ಯದ ಕಡೆಗೆ ಗಮನ ಕೊಡದೆ ದುಡಿಯತೊಡಗಿದಳು. ಪಾಠಶಾಲೆಯ ಆಡಳಿತ, ಪತ್ರ ವ್ಯವಹಾರ, ಅಧ್ಯಾಪನ ಮುಂತಾದ ಕೆಲಸಗಳು ಮನೋರಮೆಯ ಪಾಲಿನದ್ದಾಗಿದ್ದವು. ಶಾರದಾಸದನದ ಬಾಲಿಕೆಯರೆಲ್ಲರೂ ಮನೋರಮೆಯನ್ನು ಅತಿಯಾಗಿ ಪ್ರೀತಿಸುತ್ತಿದ್ದರು. ಅವರು ಅವಳನ್ನು ತಾಯಿ ಎಂದು ಕರೆಯುತ್ತಿದ್ದರು. ಹೊರಗೆ ಹೊರಟಳೆಂದರೆ ಮನೋರಮೆಯ ಕೈಗಳನ್ನು ಹಿಡಿದು ಹಿಂದೆಮುಂದೆ ಬಾಲಿಕೆಯರ ತಂಡವೇ ಹಿಂಬಾಲಿಸುತ್ತಿತ್ತು. ಖೇಡ್‌ಗಾಂವಿನಲ್ಲಿ ಮನೋರಮೆ ಸ್ಥಾಪಿಸಿದ ಕುರುಡರ ವಿದ್ಯಾಭ್ಯಾಸದ ಅಂಧಶಾಲೆ, ಇನ್ನೊಂದು ಸಂಸ್ಥೆಯಾಗಿತ್ತು. ವಿದೇಶದಲ್ಲಿರುವಾಗಲೇ ರಬ್ಬರಿನ ಎತ್ತರವಾದ ಅಕ್ಷರಗಳನ್ನು ಬೆರಳಿನಿಂದ ಗುರುತಿಸಿ ಕಲಿಯುವುದನ್ನು ಮನೋರಮೆಯು ಅಭ್ಯಾಸಿಸಿದ್ದಳು. ಭಾರತದಲ್ಲಿ ಒಂದು ಅಂಧರ ಶಾಲೆಯನ್ನು ಆರಂಭಿಸಬೇಕಾಗಿ ರಮಾಬಾಯಿಯ ಆಶಯವಾಗಿತ್ತು. ಇಂಥಹ ಪ್ರಯತ್ನವು ಹಿಂದೂದೇಶದಲ್ಲಿಯೇ ಪ್ರಥಮದ್ದಾಗಿದ್ದಿತು. ಮನೋರಮೆಯ ಕೆಲಸಗಳಿಗಾಗಿ ಅಮೇರಿಕದ ಪಂಡಿತಾ ರಮಾಬಾಯಿ ಎಸೋಸಿಯೇಶನ್ ಮುನ್ನೂರು ಡಾಲರು ಸಂಬಳ ಕೊಡುವಂತೆ ನಿರ್ಣಯಿಸಿದ್ದಿತು. ಮನೋರಮೆ ಇದನ್ನು ಸ್ವೀಕರಿಸಲಿಲ್ಲ. ನಮ್ಮ ಆಶಾಕಾಂಕ್ಷೆಗಳನ್ನು ದೇವರು ಪೂರೈಸುತ್ತಾನೆ ಎಂದು ರಮಾಬಾಯಿ ಹೇಳುತ್ತಿದ್ದಳು. ಆದುದರಿಂದ ಮನೋರಮೆಯು ವೇತನ ಪಡೆಯುವುದನ್ನು ನಿರಾಕರಿಸಿದಳು.

1903ರಲ್ಲಿ ಮನೋರಮೆಯು ಆಸ್ಟ್ರೇಲಿಯಾ, ನ್ಯೂಝಿಲೇಂಡ್ ದೇಶಗಳ ಸಂಚಾರಕ್ಕೆ ಹೊರಟಳು. ಅಲ್ಲಿ ಅನೇಕ ಕಡೆಗಳಲ್ಲಿ ಪ್ರಾರ್ಥನಾ ಮಂಡಲಗಳನ್ನು ಸ್ಥಾಪಿಸಿ, ಉಪನ್ಯಾಸ ಕೊಟ್ಟಳು. 'ಬಾಯ್ಬಲಿನ' ಬೋಧವಚನಗಳ ಮೇಲೆ ಒಮ್ಮೆ ವ್ಯಾಖ್ಯಾನ ಕೊಟ್ಟಳು. "ನಾನು ನಿಮಗೆ ಹೊಸ

ಹೃದಯ ಕೊಡುತ್ತೇನೆ, ನಿಮ್ಮಲ್ಲಿ ಹೊಸ ಆತ್ಮ ತುಂಬಿಸುತ್ತೇನೆ, ನಿಮ್ಮ ಕಲ್ಲಿನ ಹೃದಯವನ್ನು ತೆಗೆದು ಮಾಂಸಮಯವಾದ ಮೃದು ಹೃದಯವನ್ನು ಕೊಡುತ್ತೇನೆ" ಈ ವಚನಗಳೇ ಬಾಯ್ಬಲಿನ ಉಪದೇಶವಾಗಿತ್ತು. ಮನೋರಮೆಯ ವ್ಯಾಖ್ಯಾನಗಳನ್ನು ವರ್ತಮಾನ ಪತ್ರಿಕೆಗಳು ಕೊಂಡಾಡಿದವು. ಆಗ ಮನೋರಮೆಯ ವಯಸ್ಸು ಇಪ್ಪತ್ತ-ಎರಡು ಆಗಿತ್ತು. ಇದೇ ವಯಸ್ಸಿನಲ್ಲಿ ರಮಾಬಾಯಿ ತನ್ನ ಪ್ರತಿಭಾಶಕ್ತಿಯಿಂದ ಅಖಿಲ ಭಾರತವನ್ನೇ ಬೆರಗುಗೊಳಿಸಿದಳು.

ಆಸ್ಟ್ರೇಲಿಯಾದಲ್ಲಿರುವಾಗ, "ವಿಧವೆಯರ ಮಿತ್ರಳು" ಎಂಬ ಇನ್ನೂರು ಪುಟಗಳ ಪುಸ್ತಕ ಬರೆದು ಮನೋರಮೆಯು ಪ್ರಕಟಿಸಿದಳು. ಪಂ. ರಮಾಬಾಯಿಯು ಜೀವನದಲ್ಲಿ ಸಾಧಿಸಿದ ಮಹತ್ಕಾರ್ಯಗಳನ್ನು ಅದರಲ್ಲಿ ವರ್ಣಿಸಲಾಗಿತ್ತು. "ಉಚ್ಚವರ್ಗದ ಹಿಂದೂ ಮಹಿಳೆ" ಎಂಬ ರಮಾಬಾಯಿಯ ಪುಸ್ತಕವು ಹದಿನಾಲ್ಕು ವರ್ಷಗಳ ಮೊದಲು ಅಮೇರಿಕದಲ್ಲಿ ಪ್ರಕಟವಾಗಿತ್ತು. ಈ ಪುಸ್ತಕದ "ಉತ್ತರಾರ್ಧ" ಎಂಬ ಹೆಸರಿನ ತೊಂಭತ್ತ-ಐದು ಪುಟಗಳುಳ್ಳ ಇನ್ನೊಂದು ಪುಸ್ತಕವನ್ನು ಮನೋರಮೆ ಬರೆದಳು. ಒಬ್ಬ ವಿದ್ಯಾರ್ಥಿನಿಯಿಂದ ಶುರುವಾದ 'ಶಾರದಾಸದನ'ವು ಖೇಡ್‌ಗಾಂವಿನ 'ಮುಕ್ತಿಸದನ' ಪರ್ಯಂತ, ಅಭಿವೃದ್ಧಿಗೊಂಡ ಪರಿಚಯವನ್ನು ಈ ಪುಸ್ತಕದಲ್ಲಿ ಬರೆದಳು. ಬೇರೆ ಬೇರೆ ಅನಾಥ ವಿಧವೆಯರ ಕಥೆಗಳನ್ನು ಬರೆದು ತನ್ನ ತಾಯಿಯ ಈಶ್ವರ ಭಕ್ತಿ, ಆತ್ಮ ವಿಶ್ವಾಸ, ಇತ್ಯಾದಿಗಳನ್ನು ಆ ಪುಸ್ತಕದಲ್ಲಿ ವರ್ಣಿಸಲಾಗಿತ್ತು.

ವಿದೇಶ ಸಂಚಾರ ಮುಗಿಸಿಬಂದ ಮೇಲೆ ಮನೋರಮೆಯು ಇನ್ನೊಂದು ಕೆಲಸದಲ್ಲಿ ಲಕ್ಷ್ಯಕೊಡಬೇಕಾಯಿತು. ಹೈದರಾಬಾದು ಸಂಸ್ಥಾನದ ಗುಲ್ಬರ್ಗಾದಲ್ಲಿ ಬಾಲಿಕಾ ಪಾಠಶಾಲೆಯನ್ನು ತೆರೆಯುವುದೇ ಆ ಕೆಲಸವಾಗಿತ್ತು. ಆ ವರೆಗೆ ಅಲ್ಲಿ ಬಾಲಿಕಾ ಪಾಠಶಾಲೆ ಇಲ್ಲದೆ ಇದ್ದುದರಿಂದ ಅಲ್ಲಿಯ ಜನರು ಬಾಲಿಕಾ ಪಾಠಶಾಲೆಯನ್ನು ಪ್ರಾರಂಭಿಸಬೇಕಾಗಿ ರಮಾಬಾಯಿಯನ್ನು ವಿನಂತಿಸಿದ್ದರು. "ಶಾಂತಿಸದನ"ವೆಂಬ ಹೆಸರಿನ ಪಾಠಶಾಲೆ ತೆರೆಯಬೇಕಾದರೂ, ವಿರೋಧಕರು ನಾನಾ ರೀತಿಯ ತೊಡಕುಗಳನ್ನು ತಂದೊಡ್ಡಿದ್ದರು. ಮನೋರಮೆ ಅಚಲವಾದ ಮನೋಧೈರ್ಯದಿಂದ ತೊಡಕುಗಳನ್ನು ಲೆಕ್ಕಿಸದೆ ಗುಲ್ಬರ್ಗಾದಲ್ಲಿ ತಾ. 29-9-1913ರಲ್ಲಿ ಶಾಂತಿಸದನ ಪಾಠಶಾಲೆಯನ್ನು

ಪ್ರಾರಂಭಿಸಿದಳು. ಪ್ರಾರಂಭದಲ್ಲಿಯೇ ಪಾಠಶಾಲೆಯಲ್ಲಿ ಎಪ್ಪತ್ತು ವಿದ್ಯಾರ್ಥಿನಿಯರು ಸೇರಿದರು.

ಮನೋರಮೆಯ ಕಾರ್ಯಬಾಹುಲ್ಯವು ಹೆಚ್ಚಾಯಿತು. 'ಶಾರದಾಸದನ' 'ಮುಕ್ತಿಸದನ', ಗುಲ್ಬರ್ಗದ 'ಶಾಂತಿಸದನ' ಸಂಸ್ಥೆಗಳ ಹೊಣೆಗಾರಿಕೆಯು ಒಬ್ಬಳ ಮೇಲೆ ಬಿತ್ತು. ರಮಾಬಾಯಿ ತನ್ನ ಎಲ್ಲಾ ವೇಳೆಯನ್ನು ಹಿಬ್ರೂ ಭಾಷೆಯಲ್ಲಿದ್ದ ಬಾಯ್ಬಲಿನ ಮರಾಠಿ ಭಾಷಾಂತರದಲ್ಲಿ ಕಳೆಯುತ್ತಿದ್ದಳು. ಅನಾಥ ಸ್ತ್ರೀಯರು ದೇಶದ ಯಾವ ಭಾಗದಲ್ಲಿ ಕಷ್ಟದಲ್ಲಿದ್ದರೂ ಅಲ್ಲಿಗೆ ಮನೋರಮೆ ಧಾವಿಸುತ್ತಿದ್ದಳು. ಎಷ್ಟೋ ಮೈಲುಗಳ ತನಕ ಎತ್ತಿನ ಗಾಡಿಯಲ್ಲಿ ಪ್ರಯಾಣಿಸುತ್ತಿದ್ದಳು. ಕೆಲವು ವೇಳೆ ದೇವಾಲಯದ ಚಾವಡಿಯಲ್ಲಿಯೋ, ಧರ್ಮಶಾಲೆಯ ಜಗಲಿಯಲ್ಲಿಯೋ ರಾತ್ರಿ ಕಳೆಯಬೇಕಾಗಿ ಬರುತ್ತಿತ್ತು. ಎಷ್ಟೇ ಕಷ್ಟ ಬಂದರೂ ಮನೋರಮೆ ಹಿಂಜರಿಯುತ್ತಿದ್ದಿಲ್ಲ. "ನನ್ನ ದೇವರು ಎಷ್ಟು ಕಷ್ಟಪಟ್ಟಿದ್ದಾನೆ, ನನಗೆ ಒಂದಿಷ್ಟು ಕಷ್ಟ ಸಹಿಸಿಕೊಳ್ಳಲಿಕ್ಕೇನು ಅಸಾಧ್ಯ"ವೆಂದು ಅವಳು ಹೇಳುತ್ತಿದ್ದಳು.

'ದುರ್ಗುಣಗಳ ಸುಧಾರಣೆಯು ಪ್ರಾರ್ಥನೆ, ಉಪವಾಸಗಳ ಹೊರತು ಆಗುವಂತಿಲ್ಲ' ಬಾಯ್ಬಲಿನ ಈ ಉಪದೇಶದ ಮೇಲೆ ಮನೋರಮೆಗೆ ಶ್ರದ್ಧೆ ಇದ್ದಿತು. ಮಧ್ಯ ಭಾರತದ ಕ್ಷಾಮಕಾಲದಲ್ಲಿ ಬಂದು ಸೇರಿದ ಸಾವಿರಾರು ಮಹಿಳೆಯರು ಖೇಡ್‌ಗಾಂವಿನ ಮುಕ್ತಿ ಆಶ್ರಮದಲ್ಲಿದ್ದರು. ಇವರು ನಾನಾ ರೀತಿಯ ಕೆಟ್ಟ ಚಾಳಿಗಳಿಂದ ಕೂಡಿದ್ದರು. ಇವರನ್ನು ಸುಧಾರಿಸಿ ಸದ್ಗುಣಿಗಳಾಗಿ ಮಾಡಬೇಕೆಂದು ಮನೋರಮೆಯು ಪ್ರಾರ್ಥನೆ, ಉಪವಾಸಗಳನ್ನು ಶುರುಮಾಡಿದಳು. ಮಹಿಳೆಯರು, ಕ್ರಮವಾಗಿ ಕೆಟ್ಟ ಚಾಳಿಗಳನ್ನು ಬಿಟ್ಟು ಸನ್ಮಾರ್ಗಕ್ಕೆ ಬಂದರು. ಆದರೆ ಮನೋರಮೆಯ ಆರೋಗ್ಯವು ದಿನದಿಂದ ದಿನಕ್ಕೆ ಕೆಟ್ಟಿತು. ಪರಿಣಾಮವಾಗಿ ಅವಳಿಗೆ ಶ್ರಮದ ಕೆಲಸ ಮಾಡುವುದು ಅಸಾಧ್ಯವಾಯಿತು. ಮನೋರಮೆಯ ಅನಾರೋಗ್ಯವು ದಮ್ಮಿನ ವಿಕಾರವೆಂಬ ಊಹನೆಯಾಗಿತ್ತು. ಡಾಕ್ಟರರ ಅಭಿಪ್ರಾಯದಂತೆ ಅದು ಹೃದಯ ನಿತ್ರಾಣವಾಗಿದ್ದಿತು.

೧೬. ಮುಕ್ತಿಸದನ ಮತ್ತು ಕೃಪಾಸದನಗಳು

ಅಮೇರಿಕದ 'ಬೋಸ್ಟನ್' ನಗರದಲ್ಲಿ ಪಂ. ರಮಾಬಾಯಿ ಶಾರದಾ ಸದನದ ವೃತ್ತಾಂತವನ್ನು ಬಹಿರಂಗ ಸಭೆಯಲ್ಲಿ ಮಹಾಜನರ ಮುಂದಿಟ್ಟಳು. ನೀವು ನನಗೆ ಉದಾರವಾಗಿ ಕೊಟ್ಟ ತೊಂಭತ್ತಐದು ಸಾವಿರ ಡಾಲರುಗಳಲ್ಲಿ ಕಟ್ಟಡದ ರೂಪವಾಗಿ ಐವತ್ತು ಸಾವಿರ ಡಾಲರುಗಳ ವಿನಿಯೋಗವಾಯಿತು. ಉದ್ಯಾನ ನಿರ್ಮಾಣಕ್ಕಾಗಿ ಹತ್ತು ಸಾವಿರ ಡಾಲರುಗಳು ವೆಚ್ಚವಾದುವು. ವರ್ಷ ಒಂದರ ಐನೂರು ಡಾಲರುಗಳ ಸಹಾಯ ಕೊಡುವ ವಾಗ್ದಾನ ನೀವು ಕೊಟ್ಟಿದ್ದರೂ ಪ್ರತ್ಯಕ್ಷವಾಗಿ ಆರ್ನೂರು ಡಾಲರುಗಳಂತೆ ಕೊಟ್ಟು ಉಪಕಾರ ಮಾಡಿದ್ದೀರಿ. ಸಂಸ್ಥೆಯಲ್ಲಿ ಸೇರಿದ ಮುನ್ನೂರ-ಐವತ್ತು ವಿದ್ಯಾರ್ಥಿನಿಯರಲ್ಲಿ ನಾಲ್ವತ್ತಒಂಭತ್ತು ಮಂದಿ ಕ್ರೈಸ್ತಮತವನ್ನು ಸ್ವೀಕರಿಸಿದರು. ಹದಿನಾಲ್ಕು ಮಂದಿಗೆ ಶಿಕ್ಷಿಕೆಯರ ಉದ್ಯೋಗದೊರಕಿತು. ಒಂಭತ್ತು ಮಂದಿ ಬಾಲಿಕೆಯರಿಗೆ ದೊಡ್ಡ ನೌಕರಿ ಸಿಕ್ಕಿತು. ಇಬ್ಬರು ಸ್ವಂತವಾಗಿ ಸಂಸ್ಥೆ ತೆರೆದಿದ್ದಾರೆ. ಎಂಟು ಜನರು ಪರಿಚಾರಿಕೆಯರಾಗಿದ್ದಾರೆ. ಇಬ್ಬರು ಮದುವೆಯಾಗಿ ಸಂಸಾರ ನಡೆಸುತ್ತಾರೆ.

ನಂತರ "ರಮಾಬಾಯಿ ಎಸೋಸಿಯೇಶನ್" ವಿಸರ್ಜನೆಯಾಗಿ "ಅಮೇರಿಕನ್ ರಮಾಬಾಯಿ ಎಸೋಸಿಯೇಶನ್" ಎಂಬ ಹೊಸ ಸಂಸ್ಥೆಯು ರೂಪುತಾಳಿತು. ಶಾರದಾಸದನದ ಸರ್ವಸೊತ್ತುಗಳನ್ನು ಎಸೋಸಿಯೇಶನಿನವರು ರಮಾಬಾಯಿಗೆ ದಾನವಾಗಿ ಕೊಟ್ಟರು. ಈ ಆಸ್ತಿಯನ್ನು ರಮಾಬಾಯಿ ಹೊಸ ಎಸೋಸಿಯೇಶನಿನ ಹೆಸರಲ್ಲಿ ವ್ಯವಸ್ಥಾಪತ್ರ ಮಾಡಿಬಿಟ್ಟಳು. ಈಗ ಸ್ಥಾಪಿತವಾದ ಎಸೋಸಿಯೇಶನಿನ ಧ್ಯೇಯ ಮುಂಚಿನಂತೆ ಇರಲಿಲ್ಲ. ಈಗಿನ ಕ್ರಮದಲ್ಲಿ ಕ್ರೈಸ್ತಧರ್ಮ ಬೋಧನೆಗೆ ಆತಂಕವಿರಲಿಲ್ಲ. ಶಾರದಾಸದನವು ಒಂದು ಕ್ರೈಸ್ತ ಸಂಸ್ಥೆಯಾಗಿ ಮಾರ್ಪಟ್ಟಿತು. ಅಮೇರಿಕದ ಏಳು ತಿಂಗಳುಗಳ ಪ್ರಯಾಣ ಮುಗಿಸಿದ ರಮಾಬಾಯಿ 1898ರಲ್ಲಿ ಹಿಂದೂದೇಶದ ಕಡೆಗೆ ತಿರುಗಿದಳು. ಬರುವ ದಾರಿಯಲ್ಲಿ ಇಂಗ್ಲೆಂಡಿನಲ್ಲಿ ಕೆಲವು ದಿನವಿದ್ದು ಅಕ್ಟೋಬರ ತಿಂಗಳಲ್ಲಿ ಹಿಂದೂದೇಶಕ್ಕೆ ಬಂದು ತಲಪಿದಳು.

ಹಿಂದಿರುಗಿ ಬಂದ ಕೂಡಲೆಯೇ ಖೇಡ್‌ಗಾಂವಿನ ವಸತೀ ಕಾರ್ಯ ನಿರ್ಮಾಣವನ್ನು ರಮಾಬಾಯಿ ಪ್ರಾರಂಭಿಸಿದಳು. ಖೇಡ್‌ಗಾಂವಿನ ಜಮೀ

ನಾದರೊ, ಸೊಪ್ಪು, ಗಿಡಗಳೂ ಬೆಳೆಯದ ಮರುಭೂಮಿಯಾಗಿತ್ತು. ಅಲ್ಲಿ ನೀರಿನಾಶ್ರಯವು ದುರ್ಲಭವಾಗಿತ್ತು. ಕಾಲಾಂತರದಲ್ಲಿ ಪ್ರಯೋಜನವಾದೀತೆಂಬ ಅಭಿಪ್ರಾಯದಿಂದ ರಮಾಬಾಯಿ ಆ ಜಾಗವನ್ನು ಖರೀದಿಸಿದ್ದಳು. ಶಾರದಾಸದನ, ಸುಸೂತ್ರವಿರುವಷ್ಟು ಕಾಲ ಆ ಜಮೀನಿನ ಜ್ಞಾಪಕವೇ ರಮಾಬಾಯಿಗಿರಲಿಲ್ಲ. 1897ನೇ ಇಸವಿಯಲ್ಲಿ ಪೂಣಾದಲ್ಲಿ ಸಂಭವಿಸಿದ ಪ್ಲೇಗು ಅನಾಹುತದಿಂದ ಶಾರದಾಸದನದ ವಿದ್ಯಾರ್ಥಿನಿಯರನ್ನು ಇಪ್ಪತ್ತನಾಲ್ಕು ತಾಸುಗಳೊಳಗೆ ಸ್ಥಳಾಂತರಿಸಬೇಕಾಗಿ ಅಧಿಕಾರಿಗಳ ಅಪ್ಪಣೆಯ ದೆಸೆಯಿಂದ ರಮಾಬಾಯಿಗೆ ಖೇಡ್‌ಗಾಂವಿನಲ್ಲಿ ವಸತೀ ನಿರ್ಮಾಣ ಮಾಡಲೇಬೇಕಾದ ಪ್ರಸಂಗ ಬಂತು. ಕ್ಷಾಮ ಕಾಲದಲ್ಲಿ ಬಂದು ಸೇರಿದ ಅನಾಥ ಸ್ತ್ರೀಯರನ್ನು ಮನುಷ್ಯರಂತೆಯೇ ಪರಿವರ್ತಿಸುವ ಕೆಲಸವು ರಮಾಬಾಯಿಯ ಪಾಲಿಗೆ ಬಂದಿತ್ತು. ಸುಳ್ಳಾಡುವುದು, ಕದಿಯುವುದು, ಜಗಳಾಡುವುದು ಇತ್ಯಾದಿ ದುರ್ಗುಣಗಳು ಅವರಲ್ಲಿ ಮನೆಮಾಡಿಕೊಂಡಿದ್ದವು. ರಮಾಬಾಯಿಯು ಅವರನ್ನು ಪರಿವರ್ತಿಸಿ, ತನ್ನ ಕೆಲಸಗಳಲ್ಲಿ ಸಹಕರಿಸುವಂತೆ ಮಾಡಿದಳು.

ಖೇಡ್‌ಗಾಂವಿನ ವಸತೀ ನಿರ್ಮಾಣಕ್ಕೆ ರಮಾಬಾಯಿಯ ಕೂಡೆ ಬೇಕಷ್ಟು ದ್ರವ್ಯಸಂಗ್ರಹವಿರಲಿಲ್ಲ. ಈ ವರ್ತಮಾನ ತಿಳಿದ ಇಂಗ್ಲೆಂಡ್, ಅಮೇರಿಕಾ ದೇಶದ ಮಹಿಳೆಯರು ತಮ್ಮೊಳಗೆ ನಿಧಿಸಂಗ್ರಹ ಮಾಡಿ ರಮಾಬಾಯಿಗೆ ಅರ್ಪಿಸಿದರು. ವಿದೇಶಗಳಿಂದ ಬಂದ ಅಸಂಖ್ಯ ದ್ರವ್ಯವನ್ನು ಖೇಡ್‌ಗಾಂವಿನ ಜಮೀನನ್ನೂ ರಮಾಬಾಯಿ ಸ್ವಂತವಾಗಿ ಪರಿಗಣಿಸದೆ ಶಾರದಾಸದನ ಸಂಸ್ಥೆಗೆ ದಾನಮಾಡಿದಳು. ಖೇಡ್‌ಗಾಂವಿನಲ್ಲಿ ತಾತ್ಪೂರ್ವಿಕವಾಗಿ ಕಟ್ಟಿಸಿದ ಗುಡಿಸಲುಗಳ ಬದಲಿಗೆ ಸುಂದರವಾದ ಮಂದಿರಗಳು, ವಿರಾಜಿಸ ತೊಡಗಿದವು. ಮೂರು ಸಾವಿರ ಜನ ಕುಳಿತುಕೊಳ್ಳುವಷ್ಟು ಪ್ರಶಸ್ತವಾದ ಪ್ರಾರ್ಥನಾ ಮಂದಿರ, ಶಾರದಾಸದನ, ಹ್ಯಾಸ್ಕೂಲಿಗೆ ಬೇಕಾದ ಕಟ್ಟಡ, ಮುಕ್ತಿಸದನ, ಕುರುಡರಿಗೆ ಶಿಕ್ಷಣಕೊಡುವ ಅಂಧಶಾಲೆ, ಛಾಪಖಾನೆ, ಇತ್ಯಾದಿ ಕಟ್ಟಡಗಳ ನಿರ್ಮಾಣವಾಯಿತು. ಸಹಾಯಾರ್ಥವಾಗಿ ವಿದೇಶಗಳಿಂದ ಡಾಲರುಗಳ ಪ್ರವಾಹವೇ ಬರತೊಡಗಿತು. ಯಾರಲ್ಲಿಯೂ ಯಾಚನೆ ಮಾಡದೆನೇ ಅನಪೇಕ್ಷಿತವಾಗಿ ಎಂಬತ್ತ-ಐದು ಸಾವಿರ ಡಾಲರು ರಮಾಬಾಯಿಯ ಸಾನ್ನಿಧ್ಯದಲ್ಲಿ ಒಟ್ಟುಗೂಡಿತು.

ಖೇಡ್‌ಗಾಂವಿನ ಪುನರ್ನಿರ್ಮಾಣ ಅಂತ್ಯವಾಗುವ ವೇಳೆಗೆ ಗುಜರಾಥ ದೇಶದಲ್ಲಿ ದೊಡ್ಡ ಕ್ಷಾಮವು ಸಂಭವಿಸಿತು. 1902ರಲ್ಲಿ ಬಂದ ಕ್ಷಾಮವು ಕಳೆದ ನೂರು ವರ್ಷಗಳ ಚರಿತ್ರೆಯಲ್ಲಿಯೇ ದೊಡ್ಡದಾಗಿತ್ತು. ಈ ದುರ್ಭಿಕ್ಷ ಕಾಲದಲ್ಲಿ ಸಿಲುಕಿದ ಅಸಂಖ್ಯ ದುರ್ದೈವೀ ಜನರ ಆರ್ತದನಿಯು ರಮಾ ಬಾಯಿಯನ್ನು ಸ್ವಸ್ಥ ಇರಲೂ ಬಿಡಲಿಲ್ಲ, ಅವಳೂ ತನ್ನ ಜೀವಮಾನದಲ್ಲಿ ಅನುಭವಿಸಿದ ಕಷ್ಟತಾಪತ್ರಯಗಳನ್ನು ಸ್ಮರಿಸಿದಳು. ಅಂತರಾತ್ಮನು ಅವಳಿಗೆ ಈ ರೀತಿ ಪ್ರೇರೇಪಿಸಿದನು. ಆ ದುರ್ಗತಿಕರನ್ನು ರಕ್ಷಿಸು, ಗುಜ ರಾಥದ ಕ್ಷಾಮ ಪೀಡಿತರಾದ ಒಂದು ಸಾವಿರದ ಮುನ್ನೂರ-ಐವತ್ತು ಹೆಂಗ ಸರು, ಮಕ್ಕಳನ್ನು ಕರತಂದು ಮುಕ್ತಿ ಆಶ್ರಮದಲ್ಲಿ ಸೇರಿಸಿದಳು.

ರಮಾಬಾಯಿಯ ಕರ್ತೃತ್ವದಿಂದ ಖೇಡ್‌ಗಾಂವ್ ದೊಡ್ಡ ಊರಾ ಯಿತು. ವಾರದ ಸಂತೆಯೂ ಅಲ್ಲಿ ಸೇರತೊಡಗಿತು. ಸಂತೆ ದಿನ ಆಸುಪಾಸಿನ ಹಳ್ಳಿಗಳಿಂದ ತುಂಬಾ ಜನರು ಸೇರತೊಡಗಿದರು. ಸಂತೆಯಲ್ಲಿ ಮಾರಾಟ ವಾಗದೆ ಉಳಿದ ದವಸಧಾನ್ಯಗಳನ್ನು ಖೇಡ್‌ಗಾಂವಿನ ಸದನಗಳ ಉಪಯೋ ಗಾರ್ಥವಾಗಿ ಪಡೆಯುತ್ತಿದ್ದರು. ಎಲ್ಲಾ ಅನುಕೂಲತೆಗಳು ಸಿದ್ಧವಾಗಿದ್ದರೂ, ನೀರಿನ ಅಭಾವದಿಂದಾಗಿ ದೂರದಿಂದ ನೀರು ಹೊತ್ತುತರಬೇಕಾಗಿದ್ದಿತು. ಮಳೆ ಕಡಿಮೆಯಾದ ಸಮಯ ನೀರಿನ ತಾಪತ್ರಯವು ಹೇಳತೀರದು. ರಮಾಬಾಯಿ ಹನ್ನೆರಡು ಬಾವಿಗಳನ್ನು ತೋಡಿಸಿ ನೀರಿನ ಅಭಾವವನ್ನು ಹೋಗಲಾಡಿಸಿದಳು. ಬಾವಿಗಳಿಗಾಗಿ ಬೇಕಾಗುವ ಧನಸಹಾಯವು ಅನಿರೀಕ್ಷಿತ ವಾಗಿ ದೊರೆಯಿತು. ಪಂಪು, ಇಂಜಿನು, ನಳ್ಳಿ, ಇತ್ಯಾದಿ ಉಪಕರಣಗಳು ದಾನರೂಪವಾಗಿ ಸಿಕ್ಕಿತು. ಆಶ್ರಮದ ಎಲ್ಲಾ ಕಡೆಗಳಿಗೂ ನಳ್ಳಿ ನೀರು ದೊರೆಯುವಂತಾಯಿತು. ನಾಲ್ವತ್ತು ಎಕ್ರೆ ಸ್ಥಳವು ಕೃಷಿಯೋಗ್ಯವಾಗಿ ಹೊಲಗದ್ದೆ ತೋಟಗಳಿಂದ ರೂಪುಗೊಂಡಿತು. ಕ್ಷಾಮಪೀಡಿತ ನಿರಾಶ್ರಿತರು ಅನೇಕ ವ್ಯಾಧಿರೋಗಗಳಿಂದ ಕೂಡಿದವರಾಗಿದ್ದರು. ಇವರೆಲ್ಲರ ಚಿಕಿತ್ಸೆ ಗಾಗಿ ಒಂದು ದವಾಖಾನೆಯನ್ನು ಖೇಡ್‌ಗಾಂವಿನಲ್ಲಿ ರಮಾಬಾಯಿ ತೆರೆದಳು.

ಮುಕ್ತಿಸದನದ ಅಂಗವಾಗಿ 'ಕೃಪಾಸದನ'ವೆಂಬ ಇನ್ನೊಂದಾಶ್ರಮ ವನ್ನು ರಮಾಬಾಯಿ ಸ್ಥಾಪಿಸಿದಳು. ಸಮಾಜದಿಂದ ಬಹಿಷ್ಕೃತರಾದ ಸ್ತ್ರೀಯರಿ ಗಾಗಿಯೇ ಇದರ ಆರಂಭವಾಯಿತು. ಸಂದರ್ಭವಶದಿಂದ ಕೆಟ್ಟ ದಾರಿ ಹಿಡಿದು ಪತಿತರಾದ ಸ್ತ್ರೀಯರನ್ನು ಸುಧಾರಿಸಿ ಅವರು ನವಜೀವನಹೊಂದಿ,

ಬಾಳಬೇಕೆಂಬುದೇ ಕೃಪಾಸದನದ ಧ್ಯೇಯವಾಗಿತ್ತು. ಪತಿತ ಸ್ತ್ರೀಯರನ್ನು ಕಠೋರ ರೀತಿಯಿಂದ ಸಮಾಜದಿಂದ ಹೊರದೂಡಿ ತಿರಸ್ಕಾರ ಮಾಡಲ್ಪಟ್ಟವರನ್ನು ರಮಾಬಾಯಿ ಸುಧಾರಿಸಿದಳು.

ಅಂಗಹೀನರು, ಮುದುಕರು, ಅಶಕ್ತರು, ಇವರಿಗಾಗಿ, 'ಪ್ರೀತಿಸದನ' ವೆಂಬ ಆಶ್ರಮವನ್ನು ರಮಾಬಾಯಿ ಶುರುಮಾಡಿದಳು. ಇಂಥವರು ಪರಾವಲಂಬೀ ಜೀವನದ ಕಷ್ಟಗಳನ್ನು ಮರೆಯುವಂತೆ ಅವರಿಗೆ ಮನರಂಜನವಾಗುವ ಕಥೆ ಇತಿಹಾಸಗಳನ್ನು ಹೇಳಿ ದುಃಖ ನಿವಾರಣೆಯಾಗುವಂತೆ ರಮಾಬಾಯಿ ಬೋಧಿಸುತ್ತಿದ್ದಳು.

ಕುರುಡರಿಗೆ ಅಕ್ಷರಾಭ್ಯಾಸವನ್ನೂ ವೃತ್ತಿ ಶಿಕ್ಷಣವನ್ನೂ ಕೊಡುವ ಭಾರತದಲ್ಲಿಯೇ ಪ್ರಥಮ ಪ್ರಯತ್ನವಾದ ಅಂಧ ಶಾಲೆಯು ಖೇಡ್‌ಗಾಂವಿನಲ್ಲಿ ಸ್ಥಾಪಿತವಾಯಿತು. ವಿದ್ಯಾಭ್ಯಾಸದೊಂದಿಗೆ ಬಟ್ಟೆ ಹೊಲಿಯುವುದು, ಬೆತ್ತದ ಕುರ್ಚಿಗಳನ್ನು ಮಾಡುವುದು, ಬಾಳೆನಾರಿನ ಚೀಲಗಳನ್ನು ಮಾಡುವುದು, ನಾರಿನ ಹಗ್ಗ ತಯಾರಿಸುವುದು, ಇತ್ಯಾದಿ ವೃತ್ತಿಗಳನ್ನು ಕುರುಡರು ಮಾಡುತ್ತಿದ್ದರು. ಅನಾಥ ಹುಡುಗರಿಗಾಗಿ 'ಸದಾನಂದ ಭವನ'ವೆಂಬ ಆಶ್ರಮವೂ ಸ್ಥಾಪಿತವಾಗಿತ್ತು.

ಬಾಲೋದ್ಯಾನ (ಕಿಂಡರ್‌ಗಾರ್ಟನ್) ಶಿಕ್ಷಣವು ಖೇಡ್‌ಗಾಂವಿನಲ್ಲಿ ಪ್ರಥಮವಾಗಿ ಶುರು ಆಯಿತು. ಅಮೇರಿಕಾದಲ್ಲಿರುವಾಗ ಕಿಂಡರ್‌ಗಾರ್ಟನ್ ಶಿಕ್ಷಣ ಪದ್ಧತಿಯನ್ನು ರಮಾಬಾಯಿ ಅಭ್ಯಾಸಿಸಿದ್ದಳು. ಇದಕ್ಕೆ ಬೇಕಾದ ಪಾಠ ಪುಸ್ತಕಗಳನ್ನೂ, ಚಿತ್ರಗಳನ್ನೂ, ಉಪಕರಣಗಳನ್ನೂ ಸಂಗ್ರಹಿಸಿ ಹಿಂದೂದೇಶಕ್ಕೆ ಬಂದೊಡನೆ ಅದರ ಶಿಕ್ಷಣ ಪ್ರಾರಂಭಿಸಿದಳು. ಅಮೇರಿಕದಲ್ಲಿ ಪ್ರಕಟಿಸಿದ "ಉಚ್ಚ ವರ್ಗದ ಹಿಂದೂ ಮಹಿಳೆ" ಎಂಬ ಪುಸ್ತಕಗಳ ಮಾರಾಟದ ಲಾಭವನ್ನು ಬಾಲೋದ್ಯಾನದ ಉಪಕರಣಗಳಿಗಾಗಿಯೇ ರಮಾಬಾಯಿ ಉಪಯೋಗಿಸಿದಳು.

ಕ್ಷಾಮ ಕಾಲದ ದುರ್ಗತಿಗೀಡಾದ ಮೂರು ಸಾವಿರ ಹೆಂಗಸರು, ಮಕ್ಕಳಿಗೆ ವಿದ್ಯಾಬುದ್ಧಿಗಳನ್ನು ಕಲಿಸಿ ಸನ್ಮಾರ್ಗಕ್ಕೆ ತರುವ ಕೆಲಸ ಅಷ್ಟು ಸುಲಭವಿರಲಿಲ್ಲ. ಮಾನವ ಸೇವೆಯೇ ತನ್ನ ಜೀವನಧ್ಯೇಯವೆಂದು ಬಗೆದ ರಮಾಬಾಯಿಗೆ ಇದು ಸುಲಭ ಸಾಧ್ಯವಾಯಿತು. ಎಲ್ಲಾ ಮಟ್ಟದ ಜನರಿಗೆ ಬೇಕಾಗುವ ವೃತ್ತಿ ಶಿಕ್ಷಣಕೊಟ್ಟು, ಅವರು ಸುಖಸಮಾಧಾನಗಳಿಂದ

ಜೀವಿಸುವಂತೆ ಮಾಡಿದಳು. ಕಲ್ಲು ಕಟ್ಟುವುದು, ಗೋಡೆ ಇಡುವುದು, ಗೋಡೆಗಳಿಗೆ ಸುಣ್ಣ ಹಚ್ಚುವುದು, ಬಟ್ಟೆ ನೇಯುವುದು, ಬಡಗಿ ಕೆಲಸ, ಇತ್ಯಾದಿಗಳನ್ನು ನಿರ್ವಾಸಿತ ಮಹಿಳೆಯರು ಮಾಡುತ್ತಿದ್ದರು. ಬಾವಿ ತೋಡುವುದು, ತೋಟಿ ಇಡುವುದು, ತೋಟಿಗಳಿಗೆ ಬತ್ತಿ ಇಟ್ಟು ಚುರುಕಿನಿಂದ ಮೇಲೆ ಬರುವುದು ಇತ್ಯಾದಿ ವಿಲಕ್ಷಣ ಕೆಲಸಗಳನ್ನು ಸ್ತ್ರೀಯರೇ ಮಾಡುತ್ತಿದ್ದರು. ನೂಲುವುದು, ಖಾದಿ ತಯಾರಿಸುವುದು, ಇತ್ಯಾದಿಗಳಿಂದ ಹಣ ಸಂಪಾದನೆ ಕೂಡಾ ಮಾಡುತ್ತಿದ್ದರು. ಕೃಷಿ, ವ್ಯವಸಾಯ, ಆಯಿಲ್ ಇಂಜಿನಿನಿಂದ ನೀರು ಹಾಯಿಸುವುದು, ಉಳುವುದು, ಮುಂತಾದ ವೃತ್ತಿಗಳನ್ನು ಸ್ತ್ರೀಯರೇ ಮಾಡುತ್ತಿದ್ದರು. ಅಲ್ಲದೆ ಛಾಪಖಾನೆಯ ಕಂಪೋಜಿಂಗ, ಪ್ರಿಂಟಿಂಗ್, ಬ್ಯಾಂಡಿಂಗ್, ಕೆಲಸಗಳನ್ನು ಹುಡುಗಿಯರು ಮಾಡುತ್ತಿದ್ದರು. ಹೀಗೆ ಮುಕ್ತಿಸದನ, ಕೃಪಾಸದನಗಳಲ್ಲಿ ಎಲ್ಲರೂ ಸಹಕಾರ ಜೀವನವನ್ನು ಸಾಗಿಸುತ್ತಿದ್ದರು.

ರಮಾಬಾಯಿಯ ವಿಧಾಯಕ ಕಾರ್ಯಗಳನ್ನು ದೇಶ, ವಿದೇಶಗಳ ಅನೇಕ ಜನರು ಬಂದು ನೋಡುತ್ತಿದ್ದರು. ಇಂಗ್ಲೆಂಡಿನ ಲಾರ್ಡ್ ಸಭೆಯ ಸದಸ್ಯರಿಂದ ಸಾಮಾನ್ಯ ಜನರ ವರೆಗಿನ ಎಲ್ಲರೂ ಇರುತಿದ್ದರು. ಅತಿಥಿಗಳಿಗಾಗಿ ಒಂದು ಅಭ್ಯಾಗತಗ್ರಹವೇ ತೆರೆದಿತ್ತು. ಅತಿಥಿಗಳ ಸಂಖ್ಯೆಯು ವರುಷ ಒಂದಕ್ಕೆ ಎರಡು ಸಾವಿರ ವರೆಗಾಗುತ್ತಿತ್ತು. "ಯಾರಾದರೂ ಹಸಿವೆಯಿಂದ ಬಂದರೆ ಊಟ ಕೊಡು, ಬಾಯಾರಿಕೆಯಿಂದ ಬಂದರೆ ಕುಡಿಯಲು ಕೊಡು, ಬಟ್ಟೆ ಇಲ್ಲದವರಿಗೆ ಬಟ್ಟೆ ಕೊಡು, ಪರಕೀಯನಿದ್ದರೆ ಮನೆಯೊಳಗೆ ಪ್ರವೇಶ ಕೊಡು" ಬಾಯ್‌ಬಲಿನ ಈ ನೀತಿಬೋಧೆಯು ರಮಾಬಾಯಿಯ ಆಚರಣೆಯಲ್ಲಿ ಕಂಡುಬರುತ್ತಿತ್ತು. ಪಂಡಿತಾ ರಮಾಬಾಯಿಯ ಅನೇಕಾನೇಕ ಸೇವಾಕಾರ್ಯಗಳನ್ನು ಗಮನಿಸಿ, 1919ರಲ್ಲಿ ಹಿಂದುಸ್ಥಾನ ಸರಕಾರವು ಕೈಸರ್-ಇ-ಹಿಂದ್ ಎಂಬ ಶ್ರೇಷ್ಠ ಪದವಿಯನ್ನು ದಯಪಾಲಿಸಿ ರಮಾಬಾಯಿಯನ್ನು ಗೌರವಿಸಿತು.

೧೭. ಉಪಸಂಹಾರ

ಹಿಂದಿನ ಪ್ರಕರಣಗಳಲ್ಲಿ ಪಂ. ರಮಾಬಾಯಿಯ ಸಂಕ್ಷೇಪ ಜೀವನ ಚರಿತ್ರೆಯ ಚಿತ್ರಪಟ ವಿವರಿಸಿ ಆಯಿತು. ಪಂಡಿತೆಯ ಚರಿತ್ರೆಯ ಒಂದೊಂದು ಸಂದರ್ಭವನ್ನು ವಿಸ್ತಾರವಾಗಿ ವರ್ಣಿಸುವುದಾದರೆ ಅದೊಂದು ಮಹಾ

ಭಾರತವೇ ಆದೀತು, ಭಾರತ ದೇಶದ ಉದ್ಧಾರಕ್ಕಾಗಿ ಖಂಡಾಂತರಗಳಲ್ಲಿ ಸಂಚರಿಸಿ, ಜನಜಾಗೃತಿಯನ್ನು ಮಾಡಿದ ಅನೇಕರ ಚರಿತ್ರೆಗಳು ನಮ್ಮ ಮುಂದೆ ಇವೆಯಾದರೂ, ಈಗ ಸುಮಾರು ಎಪ್ಪತ್ತು ವರ್ಷಗಳ ಹಿಂದಿನ ಅತ್ಯಂತ ಪ್ರತಿ ಕೂಲ ಪರಿಸ್ಥಿತಿಯಲ್ಲಿ ಇಂಗ್ಲಿಷ್ ಭಾಷೆಯ ಸರಿಯಾದ ಜ್ಞಾನ, ದ್ರವ್ಯಾನುಕೂಲತೆ ಯಾವುದೂ ಇಲ್ಲದೆ ಇಂಗ್ಲೆಂಡ್ ದೇಶಕ್ಕೆ ಹೋಗಿ ಕೇವಲ ಮೂರು ವರ್ಷಗಳ ಕಾಲದಲ್ಲಿ ಇಂಗ್ಲಿಷು ಭಾಷೆಯಲ್ಲಿ ಪುಸ್ತಕ ಬರೆದು, ಭಾಷಣಗಳ ಮೂಲಕ ಅಲ್ಲಿಯ ಜನರಿಗೆ ಹಿಂದೂದೇಶದ ಅನಾಥ ವಿಧವೆಯರ ಕುರಿತು ಸಹಾನುಭೂತಿಯಾಗುವಂತೆ ಮನದಟ್ಟುಮಾಡಿ ಅಮೇರಿಕದಿಂದ ಲಕ್ಷಾಂತರ ಡಾಲರು ಸಹಾಯ ಧನಪಡೆದು, ಹಿಂದಿರುಗಿದ ರಮಾಬಾಯಿಯ ಪ್ರಯತ್ನವು ಅದ್ವಿತೀಯವಾಗಿದೆ.

ಸ್ವಾತಂತ್ರ್ಯಾನಂತರದ ಹದಿನೈದು ವರ್ಷಗಳ ಕಾಲಾವಧಿಯಲ್ಲಿ ಭಾರತ ದೇಶವು ವಿಕಾಸಯೋಜನೆಗಳಿಗಾಗಿ ವಿದೇಶಗಳಿಂದ ಅರ್ಥಿಕ ನೆರವುಪಡೆದಿರುತ್ತದೆ. ಆದರೆ ಈ ಸಹಾಯವು ನಿಸ್ವಾರ್ಥ ಸೇವೆಯೆಂದೂ, ಊಹಿಸಲಾಗುವುದಿಲ್ಲ. ಪರಸ್ಪರ ವಿರೋಧಿ, ಭಂಡವಾಳಶಾಹಿ, ಸಮಾಜವಾದಿ, ರಾಷ್ಟ್ರಗಳಿಂದ ಪಡೆದ ಆರ್ಥಿಕ ಸಹಾಯವು ಭಾರತವು ತಮ್ಮ ತಮ್ಮ ಬಣಗಳಿಗೆ ಆಕರ್ಷಿತವಾಗುವ, ಇಲ್ಲವೆ, ವ್ಯಾಪಾರ, ವಹಿವಾಟು, ಯಂತ್ರತಂತ್ರಗಳ, ಆಮದು ಮುಂತಾದ ಯಾವುದಾದರೂ ಶರ್ತಗೊಳಪಟ್ಟಿದೆ. ಪಂಡಿತಾ ರಮಾಬಾಯಿ ಪಡೆದ ದಾನರೂಪವಾದ ದ್ರವ್ಯವು ಉದಾರಿಗಳಿಂದ ನಿಸ್ವಾರ್ಥ ಸೇವೆಗಾಗಿ ಕೊಡಲ್ಪಟ್ಟಿದೆ ಎಂಬುದಕ್ಕೆ ಸಂದೇಹವಿಲ್ಲ.

ಪಂಡಿತೆಯು ಜೀವಂತವಿರುವಾಗ, ಮರಣಾನಂತರವೂ, ಅವಳು ಕ್ರೈಸ್ತಮತವನ್ನು ಅವಲಂಬಿಸಿದುದು ಬ್ರಾಹ್ಮಣ ಕುಲದಲ್ಲಿ ಹುಟ್ಟಿ, ಬಂಗಾಳೀ ಶೂದ್ರ ಕುಲದವನನ್ನು ವರಿಸಿದುದು ಜನರಲ್ಲಿ ನಾನಾ ರೀತಿಯ ದೂರು, ಅಪನಿಂದೆ, ದೋಷಾರೋಪಗಳನ್ನು ಹೊರಿಸಲು ಕಾರಣವಾಯ್ತು. ಈ ರೀತಿಯ ತಿರಸ್ಕಾರ ಅವಳು ಆಜನ್ಮ, ಹಾಗೂ, ಮರಣಾನಂತರವೂ, ಹೊಂದಬೇಕಾಯಿತು. ಈಗಿನ ಕಾಲದಲ್ಲಿಯಾದರೆ ಮತಾಂತರವಾಗಲೀ, ಅಂತರ್ಜಾತೀಯ ವಿವಾಹವಾಗಲೀ, ಅಷ್ಟೊಂದು ಟೀಕಾಸ್ಪದವಾಗುವುದಿಲ್ಲ. ಸದ್ಯಕಾಲದ ಜನರ ಆಚಾರ, ವಿಚಾರ, ವ್ಯವಹಾರ, ವೇಷಭೂಷಣ, ಇತ್ಯಾದಿಗಳಲ್ಲಿ ಲೋಕದ ಮಾನವ ಸಮಾಜವೇ ಒಂದು ವಿಶಿಷ್ಟ, ಮಟ್ಟಕ್ಕೆ ಬಂದು

ನಿಂತಿದೆ. ಸರ್ವಸಾಮಾನ್ಯ ಮಾನವ ಜನಾಂಗವೇ ಒಂದೇ ಜಾತಿ, ಒಂದೇ ಮತದ ನಿಲುಮೆಗೆ ಬಂದಿದೆಯೆಂದರೆ ತಪ್ಪಾಗದು. ರಾಷ್ಟ್ರಪಿತ ಗಾಂಧೀಜಿಯವರು ಬೋಧಿಸಿದ, ಸಾದಾಜೀವನ, ಸೇವಾಭಾವ, ಸ್ವಾವಲಂಬನ, ಇತ್ಯಾದಿ ಉನ್ನತ ಆದರ್ಶಗಳು ಗಾಂಧೀಜಿಯವರು ಅಂತರ್ಧಾನರಾಗಿ ಕೆಲವೇ ವರ್ಷಗಳಲ್ಲಿ ನಾಮಶೇಷವಾಗುತ್ತವೋ, ಎಂಬ ಸಂದೇಹಕ್ಕೆಡೆ ಕೊಟ್ಟಿದೆ. ಇರಲಿ.

ಚರಿತ್ರನಾಯಿಕೆಯಾದ ಪಂಡಿತಾ ರಮಾಬಾಯಿಗೆ ತಂದೆ, ತಾಯಿ, ಬಂಧು, ಬಾಂಧವರೆಲ್ಲ ಒಬ್ಬೊಬ್ಬರಾಗಿ ಅಗಲಿ, ಏಕಾಕಿನಿಯಾಗಿ ನಿಲ್ಲುವ ಸತ್ವಪರೀಕ್ಷೆಯ ಪರಂಪರೆ ತಪ್ಪಿ ಹೋಗಿಲ್ಲ. ಅವಳ ಲೋಕಸೇವಾ ಕಾರ್ಯದಲ್ಲಿ ಸಹಭಾಗಿಯಾಗಿ ಎಲ್ಲ ವಿಧದಿಂದಲೂ, ಸಹಕರಿಸುತ್ತಿದ್ದ ಏಕಮಾತ್ರ ಪುತ್ರಿಯಾದ ಮನೋರಮೆಗೆ ಹೃದಯ ನಿತ್ರಾಣದ ಬೇನೆಯು ಹೆಚ್ಚಿತು. ಅವಳು ಚಿಕಿತ್ಸೆಗಾಗಿ ಖೇಡ್‌ಗಾಂವಿನಿಂದ ಮಿರಜಿಗೆ ಪ್ರಯಾಣ ಮಾಡಿದಳು. ಅಲ್ಲಿಯೂ ಗುಣಮುಖವಾಗದೆ 1921ನೇ ಇಸವಿಯ ಜುಲೈ 24ನೇ ದಿನದಂದು ಮನೋರಮೆಯು ನಾಲ್ವತ್ತನೇ ವಯಸ್ಸಿನಲ್ಲಿ ತನ್ನ ಜೀವನ ಯಾತ್ರೆಯನ್ನು ಮುಗಿಸಿಕೊಂಡಳು.

ಮನೋರಮೆಯ ಮರಣ ವಾರ್ತೆಯನ್ನು ಕೇಳಿದ ಅನೇಕರು ರಮಾಬಾಯಿಯನ್ನು ಸಾಂತ್ವನಗೊಳಿಸಲಿಕ್ಕಾಗಿ ಭೇಟಿಯಾದರು. ಇನ್ನು ಅನೇಕರು ಸಹಾನುಭೂತಿಯ ಪತ್ರಗಳನ್ನು ಕಳಿಸಿದರು. ಎಲ್ಲರಿಗೂ ರಮಾಬಾಯಿ ಅತ್ಯಂತ ಶಾಂತಚಿತ್ತಳಾಗಿ ಒಂದೇ ಉತ್ತರವನ್ನು ಕೊಡುತ್ತಿದ್ದಳು. ಎಲ್ಲವೂ ದೇವರ ಇಚ್ಛೆಯಂತೆ ಆಗುವುದು, ಮನೋರಮೆಯನ್ನು ದೇವರು ಕರೆದಿದ್ದಾನೆ. ದೇವರ ಸಾಮೀಪ್ಯ ಅವಳು ಹೊಂದಿರುವಳು, "ಜೀವನವು ನಾನೇ, ಪುನರುತ್ಥಾನವೂ ನಾನೇ ಆಗಿದ್ದೇನೆ" ಎಂದು ಕ್ರಿಸ್ತನು ತನ್ನ ಉಪದೇಶದಲ್ಲಿ ಹೇಳಿದ್ದಾನೆ.

ವಾಸ್ತವಿಕವಾಗಿ ಮನೋರಮೆಯ ಮುಂಚೆಯೇ ರಮಾಬಾಯಿ ಸ್ವರ್ಗಸ್ಥಳಾಗಬೇಕಿತ್ತು. ಪ್ರಬಲವಾದ ಇಚ್ಛಾಶಕ್ತಿಯಿಂದ ಕೈಕೊಂಡ ಕೆಲಸ ಪೂರ್ತಿಯಾಗುವ ತನಕ ಅವಳು ಜೀವಿಸಿದಳು. ಎರಡು ವರ್ಷಗಳಿಂದ ರಮಾಬಾಯಿಯು ಅಸ್ಥಿಜ್ವರದಿಂದಾಗಿ ತುಂಬಾ ನಿತ್ರಾಣಿಯಾಗಿದ್ದಳು. ಆಹಾರವನ್ನೂ ನಿಯಮಿತವಾಗಿ ಸೇವಿಸುತ್ತಿರಲಿಲ್ಲ. ನನ್ನ ಕೆಲಸ ಪೂರ್ತಿ

ಯಾಗುವತನಕ ದೇವರು ನನ್ನನ್ನು ಜೀವಂತ ಇರಿಸಿದರೆ ಸಾಕು ಅನ್ನುತ್ತಿದ್ದಳು. 'ಹಿಬ್ರೂ' ಭಾಷೆಯಲ್ಲಿದ್ದ 'ಬಾಯ್ಬಲ್' ಮರಾಠಿ ಭಾಷೆಯಲ್ಲಿ ಭಾಷಾಂತರಿಸುವ ಕೆಲಸ ಅವಳು ಶುರುಮಾಡಿದ್ದಳು. ಮೂಲ ಹಿಬ್ರೂ ಭಾಷೆಯಲ್ಲಿದ್ದ ಬಾಯ್‌ಬಲ್ ಭಾಷಾಂತರ ಮಾಡುವ ಪ್ರಯತ್ನ ಆ ತನಕ ಯಾರೂ ಕೈಕೊಂಡಿರಲಿಲ್ಲ. ರಮಾಬಾಯಿಯ ಇಚ್ಛೆಯಂತೆಯೇ ಭಾಷಾಂತರದ ಕೆಲಸ ಪೂರ್ತಿಯಾದೊಡನೆಯೇ ಅವಳಿಗೆ ಜ್ವರದ ಬಾಧೆಯು ವಿಷಮಕ್ಕೇರಿತು. ಕಾಯಿಲೆಯ ಸಮಯ ಔಷಧಿ ತೆಗೆದುಕೊಳ್ಳುವ ಸಂಪ್ರದಾಯ ರಮಾಬಾಯಿಗೆ ಇರಲಿಲ್ಲ. ದೇವರ ಭಜನೆಯಲ್ಲಿ ಅವಳು ಕಾಲಕಳೆಯುತ್ತಿದ್ದಳು.

ಕಡೆಗೊಂದು ದಿನ ರಮಾಬಾಯಿ ಆಶ್ರಮದಲ್ಲಿದ್ದ ಎಲ್ಲಾ ವಿದ್ಯಾರ್ಥಿನಿಯರನ್ನು ಅತಿಥಿ ಮಂದಿರಕ್ಕೆ ಕರೆದು, ಹೀಗೆಂದಳು: ಮಕ್ಕಳೇ, ನಿಮ್ಮ ಸಹೋದರಿಯಂತಿದ್ದ ಮನೋರಮೆಯನ್ನು ದೇವರು ಬರಮಾಡಿದನು. ಇನ್ನು ನಾನೂ ದೇವರ ಸಾನ್ನಿಧ್ಯಹೊಂದುತ್ತೇನೆ. ಇಷ್ಟರಲ್ಲಿ ನೆರೆದಿದ್ದ ಹುಡುಗಿಯರು "ತಾಯಿಯೊ, ನಮ್ಮನ್ನು ಅನಾಥರನ್ನಾಗಿ ಮಾಡಿ ನೀನು ಹೋಗುವೆಯಾ"? ಎಂದು ಅಳಲಾರಂಭಿಸಿದರು. ರಮಾಬಾಯಿ ಅವರನ್ನು ಸಮಾಧಾನಗೊಳಿಸುತ್ತಾ, "ಮಕ್ಕಳೇ ನನ್ನ ನಂತರದ ವ್ಯವಸ್ಥೆ ಸುಂದರೀ ಬಾಯಿಯ ಮೇಲೆ ಬಿಟ್ಟಿದ್ದೇನೆ. ಅವಳು ನಿಮ್ಮನ್ನು ಬಿಟ್ಟುಹಾಕುವುದಿಲ್ಲ. ಅವಳಾಜ್ಞೆಯನ್ನು ಪಾಲಿಸಿರಿ, ಅವಳಿಗೆ ವಿಧೇಯರಾಗಿ ಸಹಾಯ ಮಾಡಿರಿ. ಅವಳು ನಿಮ್ಮ ಯೋಗಕ್ಷೇಮ ನೋಡುವಳು".

1922 ಎಪ್ರಿಲ್ 5ನೇ ದಿನ ಬಾಯ್ಬಲಿನ ಭಾಷಾಂತರದ ಹಸ್ತಲಿಖಿತವನ್ನು ಛಾಪಖಾನೆಗೆ ರವಾನಿಸಿ ಸಾಯಂಕಾಲ ಹುಡುಗಿಯರಿಗೆ ಈ ರೀತಿ ಆದೇಶಕೊಟ್ಟಳು: "ಈ ದಿನ ನನ್ನ ಕೋಣೆಯನ್ನು ಸ್ವಚ್ಛವಾಗಿ ತೊಳೆಯಿರಿ, ಸಾಮಾನುಗಳನ್ನು ಹೊರಗಿಡಿರಿ, ಹಾಸಿಗೆಯನ್ನು ವ್ಯವಸ್ಥಿತಗೊಳಿಸಿರಿ, ದೀಪದ ಬುರುಡೆಯನ್ನು ತೊಳೆದಿಡಿರಿ, ಸ್ನಾನಕ್ಕಾಗಿ ಗುಡಾಣಗಳಲ್ಲಿ ನೀರು ತುಂಬಿಸಿಡಿ". ಹೀಗೆ ರಮಾಬಾಯಿ ತನ್ನ ಸ್ನಾನಾದಿಗಳನ್ನು ಪೂರೈಸಿ ದೇವರ ಧ್ಯಾನ ಮಾಡುತ್ತಾ ಕೋಣೆಯೊಳಗೆ ಮಲಗಿದಳು. ಹಾಗೆ ಮಲಗಿದವಳು ಏಳಲಿಲ್ಲ. ನಿರಾಯಾಸವಾಗಿ ಸುಖಮರಣ ಹೊಂದಿದಳು. ಹುಡುಗಿಯರು ಕರೆಯುವಾಗ ರಮಾಬಾಯಿ ತನ್ನ ನಶ್ವರ ದೇಹವನ್ನು ಬಿಟ್ಟು ಪರಲೋಕ ಯಾತ್ರೆಗೈದಿದ್ದಳು.

ಖೇಡ್‌ಗಾಂವಿನಲ್ಲಿ ಹಾಹಾಕಾರವೆದ್ದಿತು. ರಮಾಬಾಯಿಯ ಆಶ್ರಮ, ಅನಾಥವಾಯಿತು. ಎಲ್ಲೆಲ್ಲಿಯೂ ಸಂತಾಪಸೂಚಕ ಸಭೆಗಳು ಜರಗಿದವು. ಮುಂಬಯಿಯ ಶೋಕಸಭೆಯಲ್ಲಿ ಸರೋಜಿನಿ ದೇವಿಯು "ಪಂಡಿತಾ ರಮಾಬಾಯಿ ಹಿಂದೂಸಂತ ಪರಂಪರೆಯಲ್ಲಿ ಶೋಭಿಸುವ ಪ್ರಥಮ ಕ್ರೈಸ್ತ ಮಹಿಳೆ" ಎಂದು ವರ್ಣಿಸಿದಳು.

ಜೈ ಹಿಂದ್

ಶಾರದಾ ಛಾಪಖಾನೆ, ಮಂಗಳೂರು – 1.